ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೦
ವಿಚಾರ ಸಾಹಿತ್ಯಮಾಲೆ – ೨೧
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾಷೆ ಆಧಾರದ ಮೇಲೆ ಭಾರತದ ಛಿದ್ರತೆ ಇನ್ನಾದರೂ ನಿಲ್ಲಬಾರದೇಕೆ?

ಭಾಷೆ ಆಧಾರದ ಮೇಲೆ ಭಾರತದ ಛಿದ್ರತೆ ಇನ್ನಾದರೂ ನಿಲ್ಲಬಾರದೇಕೆ?

ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ವಿ. ಬಿ. ಕಾಮತ್

ಅನುವಾದ
ಎಂ. ಎಸ್. ವೆಂಕಟರಾಮಯ್ಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Bhashe Adharada Mele Bharatada Chidrate-Innadaru Nillabaradeke : Kannada translation of *Linguistic Vivisection of India* by **V.B. Kamath;** Kannada translation by **M.S. Venkataramaiah;** Editor-in-Chief: **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxvi+ 52; Price : Rs. 10/-

ಮುದ್ರಣ : ೨೦೧೦
ಪುಟಗಳು : xxvi + ೫೨
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ: ೦೮೦–೨೨೧೦೭೭೭೦

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ|| ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝುಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೧೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರ ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಎಂ.ಎಸ್. ವೆಂಕಟರಾಮಯ್ಯ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಬಾ.ವೇ. ಶ್ರೀಧರ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಭಾಷೆ ಆಧಾರದ ಮೇಲೆ ಭಾರತದ ಛಿದ್ರತೆ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಎಂ. ಎಸ್. ವೆಂಕಟರಾಮಯ್ಯನವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಕೆ. ಎಂ. ಮುನ್ಷಿ

ಮುನ್ನುಡಿ

ಭಾಷಾವಾರು ರಾಜ್ಯಗಳ ನಿರ್ಮಾಣಕ್ಕಾಗಿ ವಾದಿಸಿದ ನಮ್ಮಲ್ಲನೇಕರು, ಇತ್ತೀಚಿನ ಘಟನೆಗಳಿಂದಾಗಿ, ಅದು ಎಷ್ಟರ ಮಟ್ಟಿಗೆ ನಮ್ಮಲ್ಲಿ ಐಕ್ಯತೆಯನ್ನು ಬೆಸೆಯಲು ಸಹಕಾರಿಯಾಗಿದೆ ಎಂಬುದನ್ನು ಪುನರ್ ಪರಿಶೀಲಿಸುವ ಒತ್ತಡಕ್ಕೆ ಸಿಕ್ಕಿರುವರು. ಭಾಷಾವಾರು ರಾಜ್ಯ ಪುನರ್‌ವಿಂಗಡಣೆಗೆ ಒತ್ತಾಯಿಸಿದ ಕಾಂಗ್ರೆಸ್ ನಾಯಕರುಗಳು ಅದರಿಂದ ಸಾಮಾನ್ಯ ಜನತೆಗೆ ಅವರದೇ ಭಾಷೆಯಲ್ಲಿ ಆಡಳಿತ ನಡೆಸಲು ಅನುಕೂಲವಾಗುತ್ತದೆಂದು ಯೋಚಿಸಿದರೇ ವಿನಃ ಅದು ಭಾರತದ ಐಕ್ಯತೆಯನ್ನು ಕಾಪಾಡಿಕೊಂಡು ಬರಲು ಅಡ್ಡಿಯಾಗಬಹುದೆಂದು ಎಣಿಸಿರಲಿಲ್ಲ. ಅಲ್ಲದೆ, ಬೇರೆ ಬೇರೆ ರಾಜ್ಯಗಳೊಂದಿಗೆ, ಏಕೀಕರಣದಿಂದಾಗಿ ಒಗ್ಗಟ್ಟು ಹಾಗೂ ಅರ್ಪಣಾ ಮನೋಭಾವ ಬೆಳೆಸಿಕೊಳ್ಳಲು ಸಾಧ್ಯವಾಗುವುದೆಂದೂ ಭಾವಿಸಲಾಗಿತ್ತು. ಜೊತೆಗೆ ಭಾಷಾಧಾರಿತ ರಾಜ್ಯಗಳ ನಿರ್ಮಾಣವು ಆಯಾ ಪ್ರಾಂತದ ಆರ್ಥಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳನ್ನು ಬೆಳೆಸಲು ಅಗತ್ಯವೆಂದು ಮನಗಾಣಲಾಗಿದ್ದಿತು. ಇಂತಹ ಪುನರ್ ವಿಂಗಡಣೆಯಾಗದೆ ನಾವು ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದಾಗಲೀ ಅಥವಾ ನಿರ್ದಿಷ್ಟ ಪ್ರಾಂತದ ಒಳಿತಗಾಗಿಯಲ್ಲದೆ ಇಡೀ ರಾಷ್ಟ್ರದ ಬೆಳವಣಿಗೆಗಾಗಿ ಆರ್ಥಿಕ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವೆಂಬ ಭಾವನೆಯನ್ನು ನಾನು ಎಂದಿನಿಂದಲೂ ಹೊಂದಿದ್ದೆ. ನಮ್ಮ ರಾಜಕೀಯ ಬೆಳವಣಿಗೆಯಲ್ಲಿ ಮುಂದಾಗಲು, ಭಾಷಾವಾರು ಪ್ರಾಂತ ರಚನೆ ಸೂಕ್ತ ವೇದಿಕೆಯೆನಿಸುತ್ತದೆಂಬ ಅಭಿಪ್ರಾಯವನ್ನು ಹೊಂದಿದ್ದೆ.

ಭಾಷಾವಾರು ರಾಜ್ಯಗಳು ವಿವಿಧ ಭಾಗಗಳಲ್ಲಿ ಆರ್ಥಿಕ ಪುನರೋದಯಕ್ಕೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿವೆ. ಉದಾಹರಣೆಗೆ ಆಂಧ್ರಪ್ರದೇಶ ರಚನೆಯಾಗದಿದ್ದಲ್ಲಿ ಬಹುಶಃ ತುಂಗಭದ್ರ ಮತ್ತು ನಾಗಾರ್ಜುನ ಸಾಗರ ಯೋಜನೆಗಳು ಇಷ್ಟು ತ್ವರಿತವಾಗಿ ಪೂರ್ಣಗೊಳ್ಳುತ್ತಿರಲಿಲ್ಲ ಹಾಗೂ ಒರಿಸ್ಸಾ ರಾಜ್ಯ ತೀವ್ರಾಸಕ್ತಿ ತೋರದೆ ಹಿರಾಕುಡ್ ಯೋಜನೆಯಂತವು ಪೂರ್ಣಗೊಳ್ಳಲು ದಶಕಗಳೇ ಬೇಕಾಗುತಿತ್ತು. ರಾಜ್ಯ ಪುನರ್‌ವಿಂಗಡಣಾ ಆಯೋಗದ ವರದಿ ಸಂಸತ್ತಿನಲ್ಲಿ ಚರ್ಚಿತವಾಗುತ್ತಿದ್ದ ಸಂದರ್ಭದಲ್ಲೇ ನಾನು ವಿವಿಧ ಭಾಷಾ ಗುಂಪುಗಳಿಗೆ ಅವುಗಳ ರಾಜ್ಯ ರಚನೆಯ ಭರವಸೆಯನ್ನು ನೀಡುವುದು ಅವಶ್ಯಕ ಕ್ರಮವೆಂದು ತಿಳಿಸಿದೆನಲ್ಲದೆ, ಆ ಗುಂಪುಗಳು ರಾಜ್ಯ ರಚನೆಯಾದ ಕೆಲ ಕಾಲಾ ನಂತರ ವಲಯ ರಾಜ್ಯಗಳ ಉದಯಕ್ಕೆ ಮುಂದಾಗುವುದರಿಂದ ಘಟಕರೂಪದ ಸರ್ಕಾರಗಳು ರಚಿಸುವಂತಾಗಬೇಕೆಂದಿದ್ದೆ. ಆಗ ಕೇಂದ್ರದ ಗೃಹಸಚಿವರಾಗಿದ್ದ ಶ್ರೀ ಗೋವಿಂದ ವಲ್ಲಭ ಪಂತ್‌ರಿಗೆ ನಾನು ಪತ್ರಮುಖೇನ ನನ್ನ ಚಿಂತನೆಯನ್ನು ತಿಳಿಸಿ, ವಲಯ ರಾಜ್ಯಗಳ ಪ್ರಸ್ತಾಪವನ್ನು ಮಾಡಿದ್ದೆ. ಅವರು ನನ್ನ ಪ್ರಸ್ತಾಪದ ವಿಷಯಕ್ಕೆ ಅದು ಸೂಕ್ತ ಸಮಯವಲ್ಲವೆಂದು ತಿಳಿಸಿದರೂ ಕೂಡ, ವಲಯ ಸಮಿತಿಗಳನ್ನು ರಚಿಸುವ ಕ್ರಮ ಕೈಗೊಳ್ಳುವ ಮೂಲಕ

ಅವು ಪ್ರಾಂತೀಯ ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು ಚರ್ಚಿಸಲು ಸಾಧ್ಯವಾಯಿತು.

ಇತ್ತೀಚೆಗೆ ಉಲ್ಬಣಗೊಂಡ ಗಡಿವಿವಾದಗಳು, ಹೋರಾಟಗಳು, ಭಾಷಾವಾರು ಪ್ರಾಂತ ರಚನೆಗಾಗಿ ಒತ್ತಾಯಿಸುವ ಪ್ರತಿಭಟನೆಗಳು ಹಾಗೂ ರಾಜ್ಯಗಳ ನಡುವಣ ವೈಮನಸ್ಯ, ದ್ವೇಷ ಭಾವನೆ ಹಿಂಸಾಚಾರಕ್ಕೆ ಎಡೆಮಾಡಿಕೊಟ್ಟು, ಪರಸ್ಪರ ಕಹಿಮನೋಭಾವ, ಅಶಿಸ್ತುಗಳಿಂದಾಗಿ ಕಾನೂನು ಹಾಗೂ ಸುವ್ಯವಸ್ಥೆಗೆ ಅಡಚಣೆಯುಂಟಾಗುತ್ತಿರುವುದಷ್ಟೇ ಅಲ್ಲದೆ ಭಾರತದ ಐಕ್ಯತೆಯನ್ನು ಹಾಳುಗೆಡವಲೂ ಮುಂದಾಗುವ ಬೆದರಿಕೆಗಳು ಹೆಚ್ಚುತ್ತಿದ್ದು ಒಂದು ರಾಜ್ಯದ ಜನತೆ ಮತ್ತೊಂದು ರಾಜ್ಯದ ಜನತೆಯನ್ನು ದ್ವೇಷಿಸುವ, ಹಿಂಸಿಸುವ ವಾತಾವರಣ ನಿರ್ಮಾಣವಾಗುತ್ತಿದೆ. ನಮ್ಮಲ್ಲಿ ಅನೇಕರು ಇಂತಹವನ್ನು ನಿಲ್ಲಿಸುವ ಕ್ರಮ ಕೈಗೊಳ್ಳಬೇಕೆಂದು ಹಾಗೂ ಅದರಿಂದಾಗಿ ಗಂಭೀರ ಪರಿಸ್ಥಿತಿಯನ್ನು ತಿರುಗು–ಮುರುಗು ಮಾಡುವ ಆಲೋಚನೆ ಹೊಂದಿರುವುದು ಸಹಜ. ಭಾಷಾಭಿಮಾನದ ತೀವ್ರ ಭಾವನೆಗಳಿಂದ ಹೆಚ್ಚು ದಕ್ಕಿಸಿಕೊಳ್ಳುವ ಹಾಗೂ ಭಾರತದ ಐಕ್ಯತೆಗೆ ಭಂಗ ತರುವ ಪ್ರಯತ್ನಗಳನ್ನು ಒಮ್ಮೆಲೆ ಹತ್ತಿಕಬೇಕಾಗಿದೆ. ನಾವು ಒಗ್ಗೂಡಿ ಒಟ್ಟಾಗಿ ಪ್ರಯತ್ನ ಮಾಡಿ ಬಗೆಹರಿಸಿಕೊಳ್ಳಬೇಕಾದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿರುವ ಸಂದರ್ಭದಲ್ಲಿ, ಜನತೆ ಪ್ರತ್ಯೇಕತೆಯ ಮಾತೆತ್ತಿ ವಿಭಜನೆಯನ್ನು ಒತ್ತಾಯಿಸುವುದು ಇಡೀ ರಾಷ್ಟ್ರಕ್ಕೆ ಅಪಾಯವನ್ನುಂಟು ಮಾಡುವುದು.

ಭಾಷಾವಾರು ರಾಜ್ಯಗಳು ತಮ್ಮ ಗುರಿ ಸಾಧಿಸಿವೆ ಎಂದು ಅನೇಕರಿಗೆ ಮನವರಿಕೆಯಾಗಿ, ರಾಷ್ಟ್ರದ ಐಕ್ಯತೆಗಾಗಿ ಅವರು ಶ್ರಮಿಸುವ ಕಾಲ ಒದಗಿದೆ ಎಂದು ಭಾವಿಸಲ್ಪಟ್ಟಿರುವುದು ನನಗೆ ತೀವ್ರವಾಗಿ ನೋವು ತಂದಿದೆ. ಈ ಗ್ರಂಥದಲ್ಲಿ ಪ್ರೊ. ಕಾಮತ್‌ರವರು ಭಾಷಾಧಾರಿತ ರಾಜ್ಯಗಳ ನಿರ್ಮಾಣದ ಮೂಲವನ್ನು ಹಾಗೂ ಅಷ್ಟೇ ಮುಖ್ಯವಾಗಿ ಸ್ವಭಾಷಾ ವ್ಯಾಮೋಹ ತಂದೊಡ್ಡುವ ಸಮಸ್ಯೆಗಳನ್ನು ವಿಶ್ಲೇಷಿಸಿರುವ ಕಾರಣ ವಿಭಿನ್ನ ಶಕ್ತಿಗಳು ಹೇಗೆ ತಮ್ಮ ಗುರಿಯತ್ತ ಕೆಲಸಮಾಡುವುವು, ಅವುಗಳಿಂದಾಗಿ ಪ್ರಾಂತೀಯ ಹಾಗೂ ಭಾಷಾ ಹಿತಾಸಕ್ತಿಗಳಿಗೆ ಒತ್ತು ಕೊಡುವುದರಿಂದ ಜನರು ಎಂತಹ ಅಪಾಯಗಳನ್ನು ಎದುರಿಸಬೇಕಾಗುವುದು ಎಂಬುದು ಸಾಮಾನ್ಯ ಜನರಿಗೆ ತಿಳಿಸುವುದು ಈ ಕೃತಿಯಿಂದ ದೊರಕುವ ಪ್ರಯೋಜನವೂ ಹೌದು. ಅವರು ತಿಳಿಸಿರುವ ಅನೇಕ ಅಂಶಗಳನ್ನು ಎಲ್ಲರೂ ಒಪ್ಪದಿರಬಹುದಾದರೂ, ಈ ಕೃತಿಯನ್ನು ಭಾರತದ ಐಕ್ಯತೆಯನ್ನು ಬಯಸುವವರೆಲ್ಲರೂ, ತಪ್ಪದೇ ಗಹನವಾಗಿ ಅಧ್ಯಯನ ಮಾಡುವುದು ಅತ್ಯಗತ್ಯ. ದೇಶದ ಜನರೆಲ್ಲರ ಗಮನವನ್ನು ಸೆಳೆಯುವಲ್ಲಿ ಈ ಕೃತಿ ಫಲಪ್ರದವಾಗುವುದೆಂದು ನಾನು ಧೃಡವಾಗಿ ನಂಬಿದ್ದೇನೆ.

ವಿ. ವಿ. ಗಿರಿ
ಮೈಸೂರು ರಾಜ್ಯಪಾಲರು

ರಾಜಭವನ
ಬೆಂಗಳೂರು
ಆಗಸ್ಟ್ ೧೬, ೧೯೬೬

ಪ್ರಸ್ತಾವನೆ

ರೂಢಿಗತ ಆಚರಣೆಯಂತೆ ಮತ್ತು ಸಹಜ ಸೌಜನ್ಯದಂತೆ ಧನ್ಯವಾದಗಳನ್ನು ಅರ್ಪಿಸುವ ಕ್ರಮಕ್ಕೆ ಬದಲಾಗಿ, ನಾನು ಮೊತ್ತಮೊದಲಿಗೆ ನನ್ನ ಹಳೆಯ ಸ್ನೇಹಿತರೂ, ನ್ಯಾಯವಾದಿಗಳೂ ಆದ ನಮ್ಮ ಆಪ್ತವಲಯದಲ್ಲಿ ಬಾಬೂಭಾಯಿಯೆಂದೇ ಕರೆಯಲ್ಪಡುವ ಶ್ರೀ ಜೆ. ಬಿ. ದೇಸಾಯಿರವರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸ ಬಯಸುತ್ತೇನೆ. ಅವರ ಒತ್ತಾಯ, ಸಲಹೆ, ಸೂಚನೆ ಹಾಗೂ ಪ್ರೀತಿಪೂರ್ವಕ ಒತ್ತಡಗಳು ಇರದಿರುತ್ತಿದ್ದರೆ, ಈ ಪುಸ್ತಕ ಬೆಳಕು ಕಾಣುವುದು ಸಾಧ್ಯವೇ ಇರದ ಮಾತು.

ನಾವು ಒಬ್ಬ ಉತ್ತಮ ಪ್ರಕಾಶಕನನ್ನು ಸರಿಯಾದ ಸಮಯದಲ್ಲಿ ಗಳಿಸಲು ಕಂಬದಿಂದ ಕಂಬಕ್ಕೆ ಎಡತಾಕುವುದು ಅನಿವಾರ್ಯವೆಂಬ ಮಾತನ್ನು ನಾನು ಹೇಳಿದರೆ ನಮ್ಮ ಸಂಪೂರ್ಣ ಪ್ರಭುತ್ವ ಸಂಪನ್ನ ಸ್ವತಂತ್ರ ಗಣರಾಜ್ಯದ ಪ್ರಜೆಗಳು ಗಾಬರಿಯಾಗಬೇಕಿಲ್ಲ. ಆದುದರಿಂದ ನಾವು ಸಹಜವಾಗಿ ಭಾರತೀಯ ವಿದ್ಯಾಭವನಕ್ಕೆ ಮತ್ತು ಮುಖ್ಯವಾಗಿ ಡಾ. ಕೆ. ಎಂ. ಮುನ್ಷಿಯವರಿಗೆ, ಈ ಕೃತಿಯನ್ನು ಹೊರತಂದು ಒಂದು ರೂಪಾಯಿ ಗ್ರಂಥ ವಿಶ್ವವಿದ್ಯಾಲಯ ಶ್ರೇಣಿಯಲ್ಲಿ ಪ್ರಕಾಶಿಸಿದುದಕ್ಕೆ ಆಭಾರಿಯಾಗಿರುತ್ತೇವೆ.

ಘನತೆವೆತ್ತ ಮೈಸೂರು ರಾಜ್ಯಪಾಲರಾದ ಶ್ರೀ ವಿ.ವಿ. ಗಿರಿಯವರನ್ನು ಕಾರ್ಮಿಕರ ಕಲ್ಯಾಣ ಮತ್ತು ಸಮಾಜ ಸೇವಾ ಕಾರ್ಯಕ್ರಮಗಳಿಂದಾಗಿ ನಾನು ಅನೇಕ ವರ್ಷಗಳಿಂದ ಬಲ್ಲೆ, ಅಲ್ಲದೆ ಇದೇ ಸಾಲಿನ ಜೂನ್‌ನಲ್ಲಿ ಮುಂಬೈನ ರೋಟರಿ ಕ್ಲಬ್‌ನಲ್ಲಿ ಭಾಷಣ ಮಾಡುತ್ತ, ಭಾಷಾವಾರು ರಾಜ್ಯ ಪುನರ್ ವಿಂಗಡಣೆಯನ್ನು ಅವರು ಪ್ರಬಲವಾಗಿ ವಿರೋಧಿಸಿ ಬದಲಿಗೆ ವಲಯಗಳ ರಚನೆಯನ್ನು ಪ್ರತಿಪಾದಿಸಿದ್ದರು. ಅದೇ ಸಂಸ್ಥೆಯಲ್ಲಿ ಏಪ್ರಿಲ್ ತಿಂಗಳಿನಲ್ಲಿ ನಾನು "ಭಾಷಾವಾದದ ಅಪಾಯಗಳು" ಎಂಬ ವಿಷಯದ ಬಗ್ಗೆ ಮಾತನಾಡಿದ್ದೆ. ನನ್ನ ಭಾಷಣದ ಪ್ರತಿಯನ್ನು ಓದಿದ ಶ್ರೀ ಗಿರಿಯವರು ಅದನ್ನು ಪುಸ್ತಕ ರೂಪದಲ್ಲಿ ಹೊರ ತಂದರೆ ವ್ಯಾಪಕ ಪ್ರಚಾರ ಸಾಧ್ಯವೆಂದು ಸಲಹೆ ನೀಡಿದ್ದರು. ಆ ಕಾರಣಕ್ಕಾಗಿ ಅವರಿಂದಲೇ ಈ ಕೃತಿಗೆ ಮುನ್ನುಡಿ ದೊರಕಿರುವುದು ಅತ್ಯಂತ ಸೂಕ್ತವೆನಿಸಿದೆ.

ಭಾಷಾ ಸಮಸ್ಯೆಯನ್ನು ಸಮಗ್ರವಾಗಿ ಹಾಗೂ ಸಂಪೂರ್ಣವಾಗಿ ಈ ಕೃತಿಯ ಇತಿಮಿತಿಯಲ್ಲಿ ಪ್ರಸ್ತುತಪಡಿಸಲು ನಾನು ಸಾಧ್ಯವಾದಷ್ಟು ಮಟ್ಟಿಗೆ, ಕೆಲವು ಮುಖ್ಯ ಆಯೋಗಗಳ ವರದಿಗಳನ್ನು, ಧರ್ ಸಮಿತಿ, ಜೆ.ವಿ.ಪಿ., ಎಸ್.ಆರ್.ಸಿ. ಎಲ್ಲ ಪಕ್ಷಗಳ ಹಾಗೂ ಗಾಂಧೀಜಿ, ನೆಹರು, ಅಂಬೇಡ್ಕರ್ ಮುಂತಾದ ನೇತಾರರ ಅಭಿಪ್ರಾಯಗಳ ಜೊತೆಜೊತೆಗೆ ನನ್ನ ಅಭಿಪ್ರಾಯಗಳನ್ನು ಯಾವುದೇ ಭಯ ಅಥವಾ ದಾಕ್ಷಿಣ್ಯವಿಲ್ಲದೆ ಉದಹರಿಸಿರುತ್ತೇನೆ.

ಪೂರ್ಣ ಸ್ವರಾಜ್‌ಗಾಗಿ ನಾವು ಐಕಮತ್ಯದಿಂದ ನಡೆಸಿದ ಹೋರಾಟದಂತಹ

ಜನಪ್ರಿಯ ಆಂದೋಲನವೊಂದು ರಾಷ್ಟ್ರದ ಅಖಂಡತೆಗಾಗಿ ಅಷ್ಟೇ ಮಟ್ಟದ ತೀವ್ರತೆಯಲ್ಲಿ ಹುಟ್ಟು ಹಾಕಲ್ಪಡುವ ಅಗತ್ಯವಿದೆ ಎಂದು ನಾನು ನಂಬುತ್ತೇನೆ. ಏಕೆಂದರೆ ನಾವುಗಳೆಲ್ಲರೂ ಜಾತಿ ಅಥವಾ ಮತಭೇದವಿಲ್ಲದೆ, ಧರ್ಮ ಅಥವಾ ಪ್ರಾಂತಭೇದವಿಲ್ಲದೆ, ಭಾಷೆ ಅಥವಾ ಸಂಸ್ಕೃತಿಭೇದವಿಲ್ಲದೆ, ಲಿಂಗ ಅಥವಾ ಅಂತಸ್ತಿನ ಭೇದವಿಲ್ಲದೆ, ನಾವು ಮೊದಲು ಭಾರತೀಯರು, ಕೊನೆವರೆಗೂ ಭಾರತೀಯರು ಎಂದು ಅರಿತು, ಈ ಬೃಹತ್ ಹಾಗೂ ಹಿರಿಮೆಯ ನಾಡಿನ ನಾಗರಿಕರೆಂಬ ಭಾವನೆಯಿಂದ ಕೂಡಿ ಅದು ಎಂದಿಗೂ ಮತ್ತೆ ಮತ್ತೆ ವಿಭಜನೆಯಾಗಲು ಬಿಡಬಾರದೆಂದು ನಿಶ್ಚಯಿಸಿಕೊಂಡಲ್ಲಿ ಮಾತ್ರವೇ ಭಾರತವು ಒಂದಾಗಿ ಉಳಿದೀತು.

ಈ ವಿಚಾರಕ್ಕೆ ನೀವೂ ದನಿಗೂಡಿಸುವುದಾದರೆ, ಈ ಅಭಿಪ್ರಾಯಗಳನ್ನು ಹೆಚ್ಚು ಹೆಚ್ಚು ಮಂದಿ ಭಾರತೀಯರೊಂದಿಗೆ ಹಂಚಿಕೊಳ್ಳುವ ಮೂಲಕ ಈ ಉನ್ನತ ಹಾಗೂ ಅತ್ಯವಶ್ಯಕವಾದ ಗುರಿ ಸಾಧಿಸಲು ನಿಮ್ಮ ಕೊಡುಗೆಯನ್ನು ನೀಡಿ, ಕತ್ತಲೆಯನ್ನು ಶಪಿಸುವ ಬದಲು ಕೆಲವು ಮೇಣದ ಬತ್ತಿಗಳನ್ನು ಹಚ್ಚೋಣ ಮತ್ತು ನಮ್ಮ ಭಾರತೀಯತೆಯ ನಂಬಿಕೆಯನ್ನು ಸಣ್ಣತನದ ರಾಷ್ಟ್ರೀಯತೆ ಮತ್ತು ಪ್ರಾಂತೀಯ ಭಕ್ತಿಯು ಅಳಿಸದಂತೆ ಮಾಡೋಣ.

ಈಗ "ಭಾಷೆ ಆಧಾರದ ಮೇಲೆ ಭಾರತದ ಛಿದ್ರತೆ ಇನ್ನಾದರೂ ನಿಲ್ಲಬಾರದೇಕೆ?" ಕೃತಿ ನಿಮ್ಮ ಕೈಯಲ್ಲಿದೆ. ಅದು ನಿಮ್ಮ ಬೌದ್ಧಿಕ ಆಸಕ್ತಿಗಳನ್ನು ತಣಿಸಬಹುದು ಮತ್ತು ಇಂತಹ ಛಿದ್ರತೆಯನ್ನು ನಿಲ್ಲಿಸಲು ನಿಮ್ಮ ಕೈಲಾದುದನ್ನು ಮಾಡಲು ನಿಮಗೆ ಪ್ರೇರಣೆ ನೀಡಬಹುದು. ಅತ್ಯಂತ ಮಹತ್ತರವಾದ ರಾಷ್ಟ್ರೀಯ ಗುರಿ ಸಾಧಿಸಲು ನಿಮ್ಮ ಸಲಹೆಗಳನ್ನು ಕಾತುರದಿಂದಲೂ, ವಿಧೇಯನಾಗಿಯೂ ಬಯಸುತ್ತಿರುವೆ.

ಹೀರಾಮಹಲ್ **ವಾಸುದೇವ ಬಿ. ಕಾಮತ್**
೧೭೧, ಶಿವಾಜಿ ಪಾರ್ಕ್ ರಸ್ತೆ
ನಂ. ೫, ಮುಂಬೈ – ೧೬
೧೬ ಆಗಸ್ಟ್ , ೧೯೬೬.

Blank Page

ಪರಿವಿಡಿ

ಭಾಷೆ ಆಧಾರದ ಮೇಲೆ ಭಾರತದ ಛಿದ್ರತೆ ಇನ್ನಾದರೂ ನಿಲ್ಲಬಾರದೇಕೆ?

೧. ಭೂಮಿಕೆ

ಮನುಷ್ಯರ ಜೀವನದಲ್ಲಿ ಹೇಗೋ ಹಾಗೆಯೇ ರಾಷ್ಟ್ರದ ಜೀವನದಲ್ಲಿಯೂ ಅತ್ಯಂತ ಪ್ರಾಮುಖ್ಯ ಪಡೆದ ಸಮಯಗಳಿದ್ದು ಅವು ಜನರ ಇಡೀ ಭವಿಷ್ಯತ್ವವನ್ನೇ ರೂಪಿಸಲು ಸಾಧ್ಯ. ಅವನತಿಯೂ ಸಾಧ್ಯ, ಭಾರತವೂ ಈಗ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ತೋರಿಸಲು ಸಾಕಷ್ಟು ನಿಖರ ಸಂಕೇತಗಳಿದ್ದು ಮುಂದಿನ ಪೀಳಿಗೆಗಳ ಭವಿಷ್ಯವನ್ನು ಅವು ನಿರ್ಧರಿಸಬಲ್ಲುವು. ನಮ್ಮ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ, ಜನಪ್ರಿಯ ಹಾಗೂ ದೇಶಭಕ್ತಿ ನಾಯಕರೆಲ್ಲರೂ ನಮ್ಮ ಬಿಡುಗಡೆಯ ಹೋರಾಟಕ್ಕೆ ಅನಿಯಮಿತ ತೀವ್ರ ಬೆಂಬಲ ಪಡೆಯಲು, ಅವರ ಭಾವನೆಗಳನ್ನು ಮತ್ತು ನಂಬಿಕೆಗಳನ್ನು ಉದ್ದೀಪನಗೊಳಿಸಬಲ್ಲ ಘೋಷಣೆಗಳನ್ನು ಮತ್ತು ಭರವಸೆಗಳನ್ನು ನೀಡುವುದು ಸರ್ವೇಸಾಮಾನ್ಯವಾಗಿದ್ದಿತು. ಕಣ್ಣಿಗೆ ಎದ್ದು ಕಾಣುವ ಮತ್ತೊಂದು ಉದ್ದೇಶವೆಂದರೆ ದೇಶದ ಜನತೆಗೆ ಹಾಗೂ ಹೊರಜಗತ್ತಿಗೆ ಬ್ರಿಟಿಷರ ಆಳ್ವಿಕೆ ಸರಿಮಾರ್ಗದಲ್ಲವೆಂಬುದನ್ನು ತಿಳಿಸುವುದೂ, ಎಷ್ಟು ಬೇಗ ವಿದೇಶಿಯರನ್ನು ಈ ದೇಶದಿಂದ ಕಾಲ್ತೆಗೆಯುವಂತೆ ಮಾಡಿದರೆ ಅಷ್ಟು ಒಳ್ಳೆಯದಾಗುವುದು ಮತ್ತು ಹಾಗೆ ಮಾಡುವುದರಿಂದ ದೇಶವನ್ನು ಸುಸ್ಥಿತಿಯಲ್ಲಿಡಲು ಸಾಧ್ಯವೆಂಬುದನ್ನು ತಿಳಿಯಪಡಿಸುವುದಾಗಿತ್ತು. ಖ್ಯಾತ ವಿಜ್ಞಾನಿ ಡಾ. ಆಲ್ಬರ್ಟ್ ಐನ್‌ಸ್ಟೀನ್, ಭಾರತ ಹಾಗೂ ಪಾಲಸ್ತೈನ್‌ಗಳಲ್ಲಿನ ವಿಭಜನೆ ಕುರಿತಾಗಿ, “ಸಂಕಷ್ಟಗಳನ್ನುಂಟುವುದೇ ಬ್ರಿಟಿಷರ ಉದ್ಯೋಗ; ಪಾಲಸ್ತೈನ್ ಭಾರತದ ಕಿರು ಮಾದರಿಯಂತೆ” ಎಂದ ಮಾತು ಸರಿಯಾಗಿಯೇ ಇದೆ. ಬ್ರಿಟನ್ ಭಾರತಕ್ಕೆ ಮಾಡಿದ ಘೋರ ಅನ್ಯಾಯವೆಂದರೆ ಪ್ರತ್ಯೇಕವಾಗಿರಬಯಸಿದ ಭಾರತದ ಮುಸ್ಲಿಂ ಜನಾಂಗದ ಒಂದು ಸಮುದಾಯವನ್ನು ಉಳಿದ ಭಾರತೀಯ ಸಮುದಾಯದಿಂದ ಬೇರ್ಪಡಿಸಿ, ಎರಡು ರಾಜ್ಯಗಳನ್ನಾಗಿ ವಿಂಗಡಿಸಿದುದ್ದೇ ಆಗಿದೆ. ಭಾರತದ ಅವಿವಾದಿತ ನಾಯಕಶ್ರೇಷ್ಠ ಜವಹರ್‌ಲಾಲ್ ನೆಹರೂ ತಮ್ಮ ವಿಶ್ವವಿಖ್ಯಾತ ‘ಡಿಸ್ಕವರಿ ಆಫ್ ಇಂಡಿಯ’ ದಲ್ಲಿ ಭಾರತವನ್ನು ವರ್ಣಿಸಿದ ರೀತಿ “ಬಂಗಾಳಿ ಜನರು, ಮರಾಠರು, ಗುಜರಾತಿಗಳು, ತಮಿಳರು, ಆಂಧ್ರರು, ಒರಿಯರು, ಅಸ್ಸಾಮಿಗಳು, ಕನ್ನಡಿಗರು, ಮಲೆಯಾಳಿಗಳು, ಸಿಂಧಿಗಳು, ಪಂಜಾಬಿಗಳು, ಪಠಾಣರು, ಕಾಶ್ಮೀರಿಗಳು, ರಜಪೂತರು ಹಾಗೂ ಮಧ್ಯಭಾಗದ ಹಿಂದೂಸ್ತಾನಿ ಭಾಷಿಕರು ನೂರಾರು ವರ್ಷಗಳಿಂದ ತಮ್ಮದೇ ಆದ ರೀತಿ–

ನೀತಿಗಳನ್ನು ಉಳಿಸಿಕೊಂಡಿರುವುದು ಇಂದಿಗೂ ಉಳಿದುಕೊಂಡು ಬಂದಿರುವ ಅವರ ಸಂಪ್ರದಾಯಗಳು ಹಾಗೂ ಪುರಾವೆಗಳಿಂದ ತಿಳಿದು ಅತ್ಯಾಶ್ಚರ್ಯವೆನಿಸುವುದು, ಅಷ್ಟಾದರೂ ಅವರೆಲ್ಲರೂ ತಾವು ಭಾರತೀಯರೆಂದೇ ಇಷ್ಟು ಕಾಲದ ನಂತರವೂ ಭಾವಿಸಿರುತ್ತಾರೆ; ಜೊತೆಗೆ ಅದೇ ದೇಶೀಯ ಪರಂಪರೆ ಮತ್ತು ಮಾನಸಿಕ ಹಾಗೂ ನೈತಿಕ ಗುಣಗಳನ್ನು ಹೊಂದಿರುತ್ತಾರೆ. ಈ ಪರಂಪರೆಯಲ್ಲಿ ಜೀವವಿದ್ದು, ಸಶಕ್ತವಾಗಿದ್ದು, ಅವರ ಜೀವನದ ಸಮಸ್ಯೆಗಳಿಗೆ ತಮ್ಮದೇ ತಾತ್ವಿಕ ಧೋರಣೆಯಿಂದಾಗಿ ಪರಿಹಾರ ಕಂಡುಕೊಳ್ಳಲು ಅವರಿಗೆ ಸಾಧ್ಯವೆನಿಸಿದೆ.

ವಿದೇಶೀ ಪ್ರಭಾವಗಳು ಒಳಸೇರಿ, ಸಂಸ್ಕೃತಿಯನ್ನು ಪರಿಣಾಮಕಾರಿಯಾಗಿ ಪ್ರಭಾವಗೊಳಿಸಿದರೂ, ಅವು ಇಲ್ಲಿನ ಸಂಸ್ಕೃತಿಯಲ್ಲೇ ಅಡಗಿಸಿಕೊಳ್ಳಲ್ಪಟ್ಟವು. ಅದರ ಪರಿಣಾಮವೆಂಬಂತೆ ಭಂಗತರುವ ಪ್ರವೃತ್ತಿ ಕೂಡಲೇ ಅಧಿಕಗೊಂಡುದರಿಂದ, ಸಂಯೋಜನೆಯನ್ನು ಕಂಡುಕೊಳ್ಳಬೇಕಾಯಿತು. ನಾಗರಿಕತೆಯ ಆದಿಯಿಂದಲೂ, ಒಂದು ಬಗೆಯ ಏಕತೆಯ ಕನಸು ಭಾರತೀಯರ ಮನಸ್ಸಿನಲ್ಲಿ ಮೂಡಿದ್ದಿತು. ಅದು ಹೊರಗಿನಿಂದ ಒತ್ತಾಯಪೂರ್ವಕವಾಗಿ ನೀಡಿದುದಲ್ಲ, ಹೊರಗಿನ ನಿಖರ ರೂಪದ್ದಾಗಲಿ, ನಂಬಿಕೆಯದಾಗಲಿ ಸಹ ಅಲ್ಲ. ಅದು ಅಂತರ್ಗತವಾದ ತನ್ನ ಮಡಿಕೆಗಳಲ್ಲಿ ಅಧಿಕ ಸಂಯಮದ ನಂಬುಗೆಯನ್ನು ಹೊಂದಿರುವಂತಹ ಮತ್ತು ಸಂಪ್ರದಾಯ ಪಾಲನೆ ಮತ್ತು ಪ್ರತಿಯೊಂದು ವಿಧಾನದ ಒಪ್ಪಿಗೆ ಹಾಗೂ ಉತ್ತೇಜನಕಾಂಶಗಳಿಂದ ಕೂಡಿದುದಾಗಿರುತ್ತಿತ್ತು."

* * * *

೨. ರಾಜ್ಯಗಳ ಏಕೀಕರಣ

ನಾವು ಹಿಡಿತ ಹೊಂದಿರದ ಕಾರಣದಿಂದ ಉದ್ಭವವಾದ ಮೇಲಿನ ವಿಭಜನೆಯನ್ನು ನಾವು ಮತ್ತೆ ನಕಲಿ ವೈಜ್ಞಾನಿಕ ಸಾಧನವೆನಿಸುವ ಭಾಷೆಯ ಕಾರಣದಿಂದಾಗಿ ವಿಭಜನೆ ಮಾಡುವ ಸನ್ನಿವೇಶಗಳನ್ನು ಸೃಷ್ಟಿಸುವ ಮೂಲಕ, ಆ ನೋವಿನ ಪ್ರಕ್ರಿಯೆಯನ್ನು ಮುಂದುವರಿಸಲಿಚ್ಛಿಸಬೇಕೆ? ಹಿಂದಿನ ಯಾತನಾಮಯ ನೋವು ಇನ್ನೂ ಆರದ ಹೊತ್ತಿನಲ್ಲಿ, ಗಾಯಗಳು ಮಾಯದ ಹೊತ್ತಿನಲ್ಲಿ, ಇತ್ತೀಚಿನ ತಾಷ್ಕೆಂಟ್ ಒಪ್ಪಂದವಾದಾಗ್ಯೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಅಗತ್ಯವೆನಿಸುವುವೇ? ಭಾರತದ ಮುಂದುವರೆದ ವಿಭಜನೆಗಳಿಗೆ ನಾವು ಬೇರಾವ ಶಕ್ತಿಗಳನ್ನು, ವ್ಯಕ್ತಿಗಳನ್ನು ದೂಷಿಸುವಂತಿಲ್ಲ; ಬದಲಾಗಿ ನಮ್ಮನ್ನೇ ನಾವು ದೂಷಿಸಿಕೊಳ್ಳಬೇಕಿದೆ. ಅಥವಾ ಬದಲಾದ ಸನ್ನಿವೇಶದಲ್ಲಿ ನಮ್ಮ ಗತಕಾಲದ ಭಾವನಾತ್ಮಕ ನಿರ್ಧಾರಗಳನ್ನೇ ದೂಷಿಸಬೇಕಿದೆ. ಈಗಂತೂ ಬ್ರಿಟಿಷರನ್ನು ದೂಷಿಸುವುದು ಸರಿಕಾಣದು. ಆಗಸ್ಟ್ ೧೫, ೧೯೪೭ ರಂದು ಬ್ರಿಟಿಷರು ನಿರ್ಗಮಿಸುವಾಗ ಸುಮಾರು ೫೬೨ ರಾಜ ವಂಶಸ್ಥರುಗಳ ಪ್ರತ್ಯೇಕ ಪ್ರಾಂತ್ಯಗಳ, ಸುಮಾರು ೫ ಕೋಟಿ ಜನತೆ ಭಾರತದೊಂದಿಗಿರುವ ಅಥವಾ ಪಾಕಿಸ್ತಾನಕ್ಕೆ ಸೇರ್ಪಡೆಯಾಗುವ ಅಥವಾ ಸ್ವತಂತ್ರವಾಗೇ ಉಳಿಯುವ ತಮ್ಮ ನಿರ್ಧಾರವನ್ನು ಅವರಿಗೇ ಬಿಟ್ಟಿದ್ದರು. ಸ್ವತಂತ್ರ ಭಾರತದ ಪ್ರಥಮ ಗೃಹಸಚಿವರು, ಉಕ್ಕಿನ ಮನುಷ್ಯರು ಎಂದು ಖ್ಯಾತರಾದವರೂ ಆದ ಸರ್ದಾರ್ ವಲ್ಲಭ ಭಾಯಿ ಪಟೇಲ್‌ರವರು ರಾಜರುಗಳ ಪ್ರತ್ಯೇಕ ಪ್ರಾಂತಗಳ ಸಮಸ್ಯೆಯನ್ನು ಯಾವ ಘರ್ಷಣೆಗೆ ಎಡೆಯಿಲ್ಲದಂತೆ ಕೂಡಲೇ ನಿವಾರಿಸಿದರು. ಅಂದಿಗೆ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಪರಿಶೀಲನೆಗೊಳಪಟ್ಟ ಕಾಶ್ಮೀರ ವಿವಾದ ಹಾಗೂ ಪೋರ್ಚುಗೀಸ್ ಆಧಿಪತ್ಯಕ್ಕೊಳಪಟ್ಟ ಗೋವಾಗಳ ಸೇರ್ಪಡೆ ಉಳಿದಿತ್ತು.

* * * *

೩. ಮೂರು ಅಮೂಲ್ಯ ಕೊಡುಗೆಗಳು

ಪ್ರಮುಖವಾಗಿ ಬ್ರಿಟಿಷ್ ಇಂಡಿಯ ಪ್ರಾಂತಗಳ ಏಕೀಕರಣ, ಸಂಸತ್ತು ಒಳಗೊಂಡ ಪ್ರಜಾಪ್ರಭುತ್ವ ವ್ಯವಸ್ಥೆಯೆಂಬ ಆಧುನಿಕ ಪ್ರಜಾ ಸಾಧನ ಮತ್ತು ಅಂತಾರಾಷ್ಟ್ರೀಯ ಸಂವಹನ ಮಾಧ್ಯಮವಾಗಿ ಇಂಗ್ಲೀಷ್ ಭಾಷೆ ಇವು ಮೂರು ಬ್ರಿಟಿಷರು ನಮಗೆ ಬಿಟ್ಟುಹೋದ ಅಮೂಲ್ಯ ಕೊಡುಗೆಗಳು. ಇವು ಬ್ರಿಟಿಷ್ ಆಳ್ವಿಕೆಯ ಸುಮಾರು ಎರಡು ಶತಮಾನಗಳ ಕಾಲದಲ್ಲಿ ಆಳವಾಗಿ ಬೇರು ಬಿಟ್ಟು ಅವರ 'ಒಡೆದು ಆಳುವ' ತಂತ್ರದಿಂದ ರೂಪು ಪಡೆಯುವಂಥದ್ದು ವಿಶೇಷ. ಆದರೆ ಬ್ರಿಟೀಷ್ ಇಂಡಿಯವಾಗಲೀ, ಬ್ರಿಟಿಷ್ ಸಾಮ್ರಾಜ್ಯವಾಗಲೀ ಅಷ್ಟೇ ಏಕೆ (ಬ್ರಿಟಿಷ್ ಪ್ರಧಾನಮಂತ್ರಿ ವಿನ್‌ಸ್ಟನ್ ಚರ್ಚಿಲ್ ಘೋಷಿಸಿಕೊಂಡಂತೆ) ಬ್ರಿಟಿಷ್ ಸಾಮ್ರಾಜ್ಯವನ್ನು ಮುಳುಗಿಸುವುದರ ಅಧ್ಯಕ್ಷತೆ ವಹಿಸಲು ನಾನಿಲ್ಲಿ ಗ್ರೇಟ್ ಬ್ರಿಟನ್‌ನ ಪ್ರಧಾನಿಯಾಗಿ ಆಯ್ಕೆಗೊಂಡಿಲ್ಲ" –ಇವಾವುವೂ ಕಾಲದ ಚಂಡಮಾರುತದಂತಹ ಹೊಡೆತವನ್ನು ತಾಳಿಕೊಳ್ಳಲಾಗಲಿಲ್ಲ. ಯಾವುದು ಒಂದು ಕಾಲದಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಕರೆದುಕೊಳ್ಳುತ್ತಿತ್ತೋ ಆ ದೇಶ ಸಮಾನ ಹಕ್ಕಿನ ಭಾರತವೂ ಸೇರಿದ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೊಂದಾಗಿ ರೂಪತಾಳಿದ್ದು ವಿಪರ್ಯಾಸ. ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ಹಿಂದಿನ ಗುರಿಯಾಗಿದ್ದ ಬ್ರಿಟೀಷ್ ಸ್ವಾಮಿತ್ವದ ರಾಷ್ಟ್ರದ ಬದಲು ಪೂರ್ಣ ಸ್ವರಾಜ್ಯದ ಅರ್ಥಾತ್ ಸ್ವಾತಂತ್ರ್ಯದ ಗುರಿಯನ್ನು ಹೊಂದುವ ಬಯಕೆಯನ್ನು ೧೯೩೦ ಜನವರಿ ೨೬ ರಂದು ಗಟ್ಟಿಗೊಳಿಸಿತು. ಆದುದರಿಂದ ಮೇಲೆ ತಿಳಿಸಿದ ಮೂರು ಅಮೂಲ್ಯ ಕೊಡುಗೆಗಳನ್ನು ನಮ್ಮ ಮೇಲೆ ಹೇರಬೇಕೆಂಬ ಬ್ರಿಟಿಷ್ ತಂತ್ರ ವರವಾಗಿ ಪರಿಣಮಿಸಿ, ಶಿಶುವಿನೊಂದಿಗೆ ಸ್ನಾನದ ತೊಟ್ಟಿಯನ್ನೂ ಎಸೆದಂತಾಯಿತು.

* * * *

೪. ಭಾಷಾವಾರು ರಾಜ್ಯಗಳ ಅಸ್ಥಿರ ಅಡಿಪಾಯಗಳು

ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ನಮ್ಮ ನಾಯಕರು ನೀಡಿದ ಕೆಲವು ಆಶ್ವಾಸನೆಗಳಲ್ಲಿ ಮುಖ್ಯವಾದುದು, ಜನರಾಡುವ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆಯನ್ನು ಕೈಗೊಳ್ಳುವುದು. ಇಂತಹ ಅಪಾಯಕಾರಿ ರೂಪುರೇಷೆಯ ಅಸ್ಥಿರ ಅಡಿಪಾಯವೆಂಬಂತೆ ಭಾರತ ರಾಷ್ಟ್ರೀಯ ಕಾಂಗ್ರೆಸ್, ಭಾಷಾಧಾರಿತ ಸಮಿತಿ ಅಥವಾ ವೃತ್ತಗಳ ರಚನೆಗೆ ಮುಂದಾದದ್ದು ವಿಷಾದದ ಸಂಗತಿ. ಕಾಂಗ್ರೆಸ್ ಇತಿಹಾಸಕಾರರೆಂದು ಗುರ್ತಿಸಲ್ಪಟ್ಟ ಡಾ. ಪಟ್ಟಾಭಿ ಸೀತಾರಾಮಯ್ಯನವರು ದಾಖಲಿಸಿರುವಂತೆ,

"ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ಆಂಧ್ರ ಪ್ರತ್ಯೇಕ ಕಾಂಗ್ರೆಸ್ ವೃತ್ತವಾಗಿ ಪರಿಗಣಿಸಲ್ಪಡಬೇಕೆಂಬ ನಿರ್ಣಯವನ್ನು ಒಪ್ಪಲಾಯಿತು. ಅದಕ್ಕೆ ಹಿನ್ನಲೆಯಾಗಿ ೧೯೧೩ರಲ್ಲಿ ಆಂಧ್ರಪ್ರದೇಶದಲ್ಲಿ ಉದ್ಘಾಟಿಸಲ್ಪಟ್ಟ ರಾಷ್ಟ್ರೀಯ ಚಳವಳಿ ಯಾ ಉಪಚಳವಳಿ ೧೯೧೫ರ ಹೊತ್ತಿಗೆ ಕಾಂಗ್ರೆಸ್‌ನೆಡೆ ನಡೆದುಬಂದಿತು. ಅದು ಭಾರತದ ಪ್ರಾಂತಗಳನ್ನು ಭಾಷೆಯ ಆಧಾರದ ಮೇಲೆ ಮರುವಿಂಗಡಿಸುವುದನ್ನು ಕುರಿತದ್ದಾಗಿತ್ತು. ಅದು ೧೮೯೪ರಲ್ಲಿ ಬಿಹಾರದ ಮಹೇಶ್ ನಾರಾಯಣನೆಂಬಾತ ಬಂಗಾಲದಿಂದ ತನ್ನ ರಾಜ್ಯ ಬಿಹಾರ ಪ್ರತ್ಯೇಕಗೊಳ್ಳಬೇಕೆಂದು ಮಾಡಿದ ಪ್ರಯತ್ನವನ್ನು ಮೂಲವನ್ನಾಗಿ ಹೊಂದಿದ್ದಿತು. ಅದರಂತೆ ೧೯೦೮ರಲ್ಲಿ ಬಿಹಾರ್ ಕಾಂಗ್ರೆಸ್ ತೀರ್ಮಾನದಂತೆ ರಾಜ್ಯವಾಗಿ ರಚಿಸಲ್ಪಟ್ಟಿತು. ಅದು ಭಾರತ ಸರ್ಕಾರದ ಅಧಿಸೂಚನೆಯಾಗಿ ೧೯೧೧ರ ಆಗಸ್ಟ್ ೨೫ ರಂದು ಪ್ರಾಂತೀಯ ಸ್ವಾಯತ್ತತೆ ಯೋಜನೆಯೆಂದು ಒಪ್ಪಿಗೆ ಪಡೆಯಿತು. ಪ್ರಾಂತೀಯ ಸ್ವಾಯತ್ತತೆ ಯಶಸ್ವಿ ಪ್ರಯೋಗವೆಂದು ಎಲ್ಲೆಡೆ ಬಿಂಬಿಸಲ್ಪಟ್ಟಿತು. ಅದರಿಂದ ಶಿಕ್ಷಣ ಮಾಧ್ಯಮ ಹಾಗೂ ಆಡಳಿತಭಾಷೆಯಾಗಿ ಪ್ರಾಂತೀಯ ಭಾಷೆಯೇ ಇರಬೇಕೆಂಬ ಕೂಗು ಹುಟ್ಟಿತು. ಬ್ರಿಟಿಷ್ ಆಡಳಿತದ ವಿಫಲತೆಯು ಸ್ಥಳೀಯ ಸರ್ಕಾರದ ಸ್ವಾಮಿತ್ಯದಲ್ಲಿ ಕಂಡುಬಂದಿದ್ದು, ಬ್ರಿಟಿಷ್ ಇಂಡಿಯ ರಾಜ್ಯಗಳ ಜನಸಂಖ್ಯೆಯನ್ನು ತಾರ್ಕಿಕವಾಗಿ ಯಾ ವೈಜ್ಞಾನಿಕವಾಗಿ ವಿಭಜಿಸುವುದರಲ್ಲಿ ಕಂಡುಬಂದಿತು. ಕಾಂಗ್ರೆಸ್ ೧೯೧೫ರಲ್ಲಿ ರಾಜ್ಯ ಪುನರ್ ವಿಂಗಡಣೆಗೆ ಒಪ್ಪಿಕೊಳ್ಳದಿದ್ದರೂ, ೧೯೧೬ರ ಆಂಧ್ರ ಅಧಿವೇಶನದಲ್ಲಿ ಕಾಂಗ್ರೆಸ್ ಮೇಲೆ ಒತ್ತಡ ಹೇರಲ್ಪಟ್ಟಿತು. ಅದನ್ನು ನಿರೀಕ್ಷಿತವೆಂಬಂತೆ ೧೯೧೭ರ ಏಪ್ರಿಲ್ ೮ ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಲಕ್ನೋ ಕಾಂಗ್ರೆಸ್ ೧೯೧೬ರಲ್ಲಿ ತನ್ನ ಗಮನಕ್ಕೆ

ತಂದಿದ್ದ ಸೂಚನೆಯ ಮೇರೆಗೆ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯವನ್ನು ಪಡೆದು, ರಾಜ್ಯ ಪುನರ್ ವಿಂಗಡಣೆಯ ವಿಷಯವನ್ನು ದೀರ್ಘವಾಗಿ ಚರ್ಚಿಸಿ ತನ್ನ ಒಪ್ಪಿಗೆಯನ್ನು ನೀಡಿತು. ಅದರ ಪ್ರಕಾರ ಮದ್ರಾಸ್ ಪ್ರೆಸಿಡೆನ್ಸಿಯ ವ್ಯಾಪ್ತಿಯ ಪ್ರದೇಶದಲ್ಲಿ ತೆಲುಗು ಭಾಷೆ ಮಾತನಾಡುವ ಜನರಿರುವ ಜಿಲ್ಲೆಗಳನ್ನು ಪ್ರತ್ಯೇಕವಾದ ಒಂದು ಪ್ರಾಂತವೆಂದು ರಚಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಅದರ ಬಳಿಕ ಸಿಂಧ್ ಪ್ರಾಂತದ ವಿಷಯ, ಆ ಬಳಿಕ ಕರ್ನಾಟಕದ ವಿಷಯ ಚರ್ಚೆಗೆ ಬಂದುವು. ಕಲ್ಕತ್ತ ಸಮಿತಿಯ ೧೯೧೭ರ ಸಭೆಯಲ್ಲಿ ಈ ವಿಷಯಗಳು ಬಿರುಸಾದ ಚರ್ಚೆಗೆ ಒಳಪಟ್ಟವು. ಮಹಾತ್ಮ ಗಾಂಧಿಯವರು ಕೂಡಾ ಈ ಪುನರ್ವಿಂಗಡಣೆಗಳನ್ನು, ಸುಧಾರಣೆಗಳನ್ನು ಜಾರಿಗೆ ತರುವವರೆಗಾದರೂ ಮುಂದೂಡಲು ಯೋಚಿಸಿದ್ದರು. ಆದರೆ ಲೋಕಮಾನ್ಯ ಬಾಲಗಂಗಾಧರ ತಿಲಕ್‌ರವರು ಮಾತ್ರ ಪ್ರಾಂತೀಯ ಸ್ವಾಯತ್ತತೆಗೆ ಭಾಷಾಧಾರಿತ ಪುನರ್ವಿಂಗಡಣೆಯು ಅತ್ಯಗತ್ಯವೆಂದು ಪಟ್ಟುಹಿಡಿದರು. ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಆನಿ ಬೆಸೆಂಟ್‌ರವರು ಈ ವಾದವನ್ನು ವಿರೋಧಿಸಿದರು. ಅವರೊಂದಿಗೆ ತಮಿಳು ಭಾಷೆಯ ಸದಸ್ಯರೂ ವಿರೋಧಿಸಿದರು. ಅಷ್ಟೆಲ್ಲಾ ವಿರೋಧವಿದ್ದರೂ, ಗಂಟೆಗಳ ಕಾಲ ಚರ್ಚೆ ನಡೆಸಿದರೂ, ಅನೇಕರು ಪುನರ್ವಿಂಗಡಣೆಯನ್ನು ಶತಾಯಗತಾಯ ಕಾಂಗ್ರೆಸ್ ಒಪ್ಪಲೇಬೇಕೆಂದು ಹಟ ಹಿಡಿದ ಕಾರಣ, ಸಭೆ ರಾತ್ರಿ ಸುಮಾರು ೧೦-೧೫ರ ವೇಳೆಗೆ ತನ್ನ ಒಪ್ಪಿಗೆ ನೀಡಿತು. ೧೯೧೭ರ ಅಕ್ಟೋಬರ್ ೬ ರಂದು ಪ್ರತ್ಯೇಕ ಸಿಂಧ್ ಪ್ರಾಂತ ಕಾಂಗ್ರೆಸ್‌ಗೆ ಮನ್ನಣೆ ನೀಡಿಲ್ಪಟ್ಟಿತು".

೧೯೨೦ರ ನಾಗಪುರ ಅಧಿವೇಶನದಲ್ಲಿ ಕಾಂಗ್ರೆಸ್, ಭಾಷಾ ಪ್ರಾಂತ್ಯ ರಚನೆಯ ಸೂತ್ರವನ್ನು ಸ್ಪಷ್ಟ ರಾಜಕೀಯ ಉದ್ದೇಶವೆಂದು ಒಪ್ಪಿ, ಮುಂದಿನ ವರ್ಷದ ವೇಳೆಗೆ ಅದು ಜಾರಿಗೊಳ್ಳಲು ದಾರಿ ಸುಗಮವಾಯಿತು. ಭಾರತ ಶಾಸನಬದ್ಧ ಆಯೋಗವನ್ನು ಬ್ರಿಟಿಷ್ ಸರ್ಕಾರ ೧೯೨೭ರಲ್ಲಿ ರಚಿಸಿದ ಕೂಡಲೇ ಕಾಂಗ್ರೆಸ್ 'ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳನ್ನು ಪುನರ್ವಿಂಗಡಿಸುವ ಕಾಲವೀಗ ಸನ್ನಿಹಿತವಾಗಿದೆ' ಎಂಬ ನಿರ್ಣಯವನ್ನು ತೆಗೆದುಕೊಂಡು, ಅದರ ಪ್ರಕಾರ ಆಂಧ್ರ, ಉತ್ಕಲ, ಸಿಂಧ್, ಮತ್ತು ಕರ್ನಾಟಕ ಪ್ರಾಂತ್ಯಗಳನ್ನು ಪ್ರತ್ಯೇಕವಾಗಿ ರಚಿಸುವ ತೀರ್ಮಾನವನ್ನು ತೆಗೆದುಕೊಂಡಿತು. ಅಂತಹ ನಿರ್ಣಯದ ಪರವಾಗಿರುವವರು ಭಾಷೆ, ಸಂಪ್ರದಾಯ, ಸಂಸ್ಕೃತಿಗಳು ಒಂದೇ ಆಗಿರುವ ಜನತೆ ಸ್ವತಃ ತೀರ್ಮಾನ ತೆಗೆದುಕೊಳ್ಳುವ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ಪ್ರಶಂಸಿಸಿದರು. ಆದರೆ ಭಾಷೆ ಅಥವಾ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರಾಂತ್ಯಗಳ ರಚನೆಯು ಸ್ವತಃ ತೀರ್ಮಾನಕ್ಕೆ ಎಡೆಮಾಡಿ ಕೊಡುವುದೆಂದರೂ, ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳಲು ನಾವು ಸಿದ್ಧತೆ ಮಾಡಿಕೊಂಡಿರುವೆವೇ ? ಇಂತಹ ಹಕ್ಕಿನಿಂದಾಗಿಯೇ ದೇಶವಿಭಜನೆಯ

ಕೂಗು ತೀವ್ರವಾಗಿ ಕೆಲವು ಪ್ರಾಂತಗಳ ಜಿಲ್ಲೆಗಳನ್ನು ವಿಭಜಿಸಿ ಪಾಕಿಸ್ತಾನದ ಉದಯಕ್ಕೆ ಕಾರಣವಾಗಿಲ್ಲವೇ ?

* * * *

೫. ಸರ್ವಪಕ್ಷ ಸಮ್ಮೇಳನ

ಸರ್ವಪಕ್ಷ ಸಮ್ಮೇಳನದ 'ನೆಹರು ಸಮಿತಿ'ಯು ೧೯೨೮ರಲ್ಲಿ ಈ ವಿಷಯವನ್ನು ಪರಿಶೀಲಿಸಿತು. ಭಾಷಾ ಕಾರಣದಿಂದ ಈ ವಿಷಯವನ್ನು ಅನುಮೋದಿಸಿದ ಸಮಿತಿಯು "ಒಂದು ಪ್ರಾಂತ್ಯ ತಾನು ಶಿಕ್ಷಣ ಪಡೆದು (ನಿತ್ಯದ ಆಡಳಿತವನ್ನು, ಕೆಲಸಗಳನ್ನು) ತನ್ನದೇ ನಾಡಿನ ಭಾಷೆಯ ಮಾಧ್ಯಮದಿಂದ ಮಾಡಬೇಕೆಂದರೆ, ಆ ಪ್ರದೇಶ ಭಾಷಾಧಾರಿತವಾಗಿ ರಚಿತವಾಗಿರಬೇಕಾದುದು ಅತ್ಯಾವಶ್ಯಕ. ಅದು ವಿಭಿನ್ನ ಭಾಷೆಗಳನ್ನಾಡುವ ಪ್ರದೇಶವಾದರೆ ಅನೇಕ ಬಗೆಯ ಸಮಸ್ಯೆಗಳು ಉದ್ಭವಿಸುವುವಲ್ಲದೆ, ಶಿಕ್ಷಣ ಮಾಧ್ಯಮ ಮತ್ತು ಆಡಳಿತವು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಭಾಷೆ ನಡೆಸುವಂತಾಗುತ್ತದೆ. ಆದಕಾರಣ ಪ್ರಾಂತ್ಯಗಳು ಭಾಷೆ ಆಧಾರದಲ್ಲಿ ಮರು ವಿಂಗಣೆಗೊಳ್ಳಬೇಕಾದುದು ಅಪೇಕ್ಷಣೀಯ. ಭಾಷೆಯ ಬೆಳವಣಿಗೆ ಆ ಪ್ರದೇಶದ ವಿಶಿಷ್ಟ ಸಂಸ್ಕೃತಿಗಳು, ಸಂಪ್ರದಾಯಗಳು ಮತ್ತು ಸಾಹಿತ್ಯವನ್ನು ಆಧರಿಸಿರುವುದು. ಭಾಷೆಯ ಪ್ರದೇಶವಾದಲ್ಲಿ ಈ ಎಲ್ಲಾ ಅಂಶಗಳೂ ಪ್ರಾಂತ್ಯದ ಸರ್ವಾಂಗೀಣ ಪ್ರಗತಿಗೆ ಸಹಾಯವಾಗುವುದು". ಎಂದು ತನ್ನ ಅಭಿಪ್ರಾಯವನ್ನು ದಾಖಲಿಸಿತು.

ಆದರೂ ಸಮಿತಿಯು ಪ್ರಾಂತ ಪುನರ್ವಿಂಗಡಣೆಯು ಆ ಪ್ರದೇಶದ ಜನಾಭಿಪ್ರಾಯ, ಆಡುವ ಭಾಷೆ, ಭೌಗೋಳಿಕ ಅಂಶಗಳು, ಆರ್ಥಿಕ ಹಾಗೂ ಹಣಕಾಸು ನೀತಿಗಳಿಗನ್ವಯವೇ ಕೈಗೊಳ್ಳುವಂತಾಗಬೇಕೆಂದು ಅಭಿಪ್ರಾಯಪಟ್ಟಿತು. ಆದ್ದರಿಂದಲೇ ಆರ್ಥಿಕ ಮತ್ತು ಹಣಕಾಸು ಅಂಶಗಳ ಪ್ರಾಮುಖ್ಯ ನಿಧಾನವಾಗಿ ಅರಿವಿಗೆ ಬರತೊಡಗಿತು. ಇದು ಭಾವನಾತ್ಮಕ ಹಾಗೂ ನಂಬಿಕೆಯ ಹಠದ ವಾದಕ್ಕೆ ಬದಲಾಗಿ ನೈಜಸ್ಥಿತಿಗನುಗುಣವಾದ ಸಕಾರಾತ್ಮಕ ಚಿಂತನೆಯತ್ತ ಹೊರಳಲು ಕಾರಣವೂ ಆಯಿತು. ಆದರೆ ಅದು ಆರಂಭ ಮಾತ್ರ, ಕೊನೆ ಎಲ್ಲೋ ದಿಗಂತದಲ್ಲಿತ್ತು. ಇಷ್ಟೆಲ್ಲಾ ಅಂಶಗಳಲ್ಲಿ ಸಮಿತಿಯ "ಮುಖ್ಯ ಅಂಶವು ಆ ಪ್ರದೇಶದ ಜನರ ಒಲವು ಹಾಗೂ ಭಾಷಾಬಾಂಧವ್ಯವೇ ಆಗಿರಬೇಕು" ಎನ್ನುವುದು ಹೆಚ್ಚಿನ ಮಹತ್ವ ಪಡೆಯಿತು.

* * * *

೬. ಕಾಂಗ್ರೆಸ್‌ನ ಪುನರ್ ಸಹಮತ

ಆ ನಂತರದ ಎರಡು ದಶಕಗಳಲ್ಲಿ ಕಾಂಗ್ರೆಸ್ ಭಾಷಾಸೂತ್ರಕ್ಕೆ ಅಂಟಿಕೊಂಡಂತೆ ಮೂರು ಬಾರಿ ನಿರ್ಣಯಗಳನ್ನು ತೆಗೆದುಕೊಂಡಿತು. ಅದು ೧೯೩೭ರಲ್ಲಿ ಆಂಧ್ರ ಹಾಗೂ ಕರ್ನಾಟಕ ಪ್ರಾಂತಗಳ ರಚನೆಗೆ ಶಿಫಾರಸು ಮಾಡಿತು. ಅದರ ಮುಂದಿನ ವರ್ಷವೇ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಆಂಧ್ರ, ಕರ್ನಾಟಕ ಹಾಗೂ ಕೇರಳದ ನಿಯೋಗಗಳಿಗೆ ಭಾಷಾವಾರು ಪ್ರಾಂತ್ಯ ಪುನರ್ವಿಂಗಡಣೆಯ ಆಶ್ವಾಸನೆ ನೀಡಿ ತನಗೆ ಆಡಳಿತಾತ್ಮಕ ಅಧಿಕಾರ ದೊರಕಿದ ಕೂಡಲೇ ಅದನ್ನು ಪೂರ್ಣಗೊಳಿಸಲಿರುವುದಾಗಿ ತಿಳಿಸಿತು; ತನ್ನ ೧೯೪೫–೪೬ರ ಚುನಾವಣಾ ಪ್ರಣಾಳಿಕೆಯಲ್ಲಿಯೂ ಭಾಷೆ ಹಾಗೂ ಸಂಸ್ಕೃತಿಯ ಹಿನ್ನಲೆಯಲ್ಲಿ ಆಡಳಿತ ವರ್ಗವನ್ನು ರಚಿಸುವ ಇಚ್ಛೆಯನ್ನು ಪ್ರಕಟಿಸಿತು; ಪುನಃ ಈ ವಿಷಯದ ಬಗ್ಗೆ ಚಿಕ್ಕದೆನಿಸಿದರೂ ಪ್ರಭಾವ ಬೀರುವ ಭಿನ್ನ ನಿಲುವು ಪ್ರಕಟಗೊಂಡುದು ವಿಶೇಷವೆನಿಸುವುದು.

* * * *

೭. ಗಾಂಧೀಜಿಯವರ ಅಭಿಪ್ರಾಯ

ಭಾಷಾವಾರು ಪ್ರಾಂತ್ಯಗಳ ಕುರಿತಾಗಿ ಮಹಾತ್ಮ ಗಾಂಧೀಜಿಯವರ ಅಭಿಪ್ರಾಯ 'ಹರಿಜನ' ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಅದು ಇಲ್ಲಿ ಪ್ರಕಟಾರ್ಹವೆನಿಸುತ್ತದೆ.

"ಹಿಂದಿ ಮಾತನಾಡುವ ಪ್ರದೇಶಗಳೆಲ್ಲ ಒಂದು, ಮರಾಠಿ ಮಾತನಾಡುವ ಪ್ರದೇಶಗಳು ಒಂದು ಆಗಬೇಕೆನ್ನುವುದು ಈ ವಾದ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಆ ಸಲಹೆಯ ಕುರಿತಾಗಿ ಸಹಾನುಭೂತಿ ಉಳ್ಳವನಾಗಿದ್ದೇನೆ. ಪ್ರಾಂತಗಳನ್ನು ಗುರುತಿಸುವ ಹಂತದಲ್ಲಿ ಭಾಷೆಯನ್ನು ಪರಿಗಣಿಸಬೇಕಾದುದು ಸೂಕ್ತವೂ ಹೌದು. ಪರಸ್ಪರ ಸಮೀಪದಲ್ಲಿಲ್ಲದಿದ್ದರೆ ಒಂದೇ ಭಾಷೆಯನ್ನಾಡುವ ಎರಡು ಪ್ರಾಂತಗಳಿದ್ದರೂ ನನ್ನದೇನೂ ತಕರಾರಿಲ್ಲ. ಕೇರಳ ಮತ್ತು ಕಾಶ್ಮೀರ ಪ್ರಾಂತ್ಯಗಳಲ್ಲಿ ಒಂದೇ ಭಾಷೆಯನ್ನಾಡುವಂತಿದ್ದರೆ, ಅವುಗಳನ್ನು ಎರಡು ಭಿನ್ನ ಪ್ರಾಂತಗಳೆಂದೇ ನಾನು ಅವುಗಳನ್ನು ಪರಿಗಣಿಸುತ್ತೇನೆ. ಪ್ರಾಂತಗಳ ಪ್ರದೇಶಗಳ ಸೇರ್ಪಡೆ ಆಯಾ ಸ್ಥಳದ ಕಾಂಗ್ರೆಸ್ಸಿಗರಿಂದಾಗಬೇಕು. ಅದು ಸರ್ವಾನುಮತದ್ದಾದರೆ, ಕಾಂಗ್ರೆಸ್ ಅದನ್ನು ವಿರೋಧಿಸುವಂತೆಯೂ ಇಲ್ಲ. ಈ ತೀರ್ಮಾನ ಆ ಜನರ ಕೈಯಲ್ಲೇ ಇರುವಂತಹುದು.

ಈ ವಿಷಯದ ಅರ್ಹತೆಯ ಆಧಾರದಿಂದ ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನಲ್ಲದೆ, ದೇಶದ ಮುಂದಿರುವ ಮುಖ್ಯ ಗುರಿಯಾದ ಜಪಾನ್ ದೇಶವು ಭಾರತದ ಮೇಲೆ ಆಕ್ರಮಣ ನಡೆಸುವ ವಿಚಾರದಲ್ಲಿ ಯಾವುದೇ ಗುರಿ ತಪ್ಪಿಸುವ ಆಂದೋಲನವನ್ನು, ತಂತ್ರವನ್ನು ವಿರೋಧಿಸುತ್ತೇನೆ. ಪ್ರಾಂತ ಮರುವಿಂಗಡಣೆ ಇತ್ಯಾದಿಗಳು ಅವುಗಳ ಮಟ್ಟಿಗೆ ಪ್ರಮುಖ ವಿಷಯಗಳೇ ಆದರೂ ದೇಶದ ಮುಂದಿನ ಸಮಸ್ಯೆಗಳು ಅವನ್ನು ಮೂಲೆಗುಂಪಾಗಿಸುವುವು. ಜಾಗತಿಕ ಯುದ್ಧ ನಿಲ್ಲುವವರೆಗೆ ಈ ಆಂತರಿಕ ವಿಷಯಗಳು ಕಾಯಬಹುದು. ನಾವು ಸದ್ಯದ ಅನಾಹುತದ ಅಂತ್ಯದ ವೇಳೆಗೆ ಹೊಸ ಚಿಂತನೆ ಹಾಗೂ ಹೊಸತನ ಮೈಗೂಡಿಸಿಕೊಳ್ಳುವುದನ್ನು ಕಾಣಲಿಚ್ಛಿಸುತ್ತೇವೆ (ಏಪ್ರಿಲ್ ೧೯೪೨). ಗಾಂಧೀಜಿಯರಿಗೆ ಪ್ರಾಂತೀಯ ಮನೋಭಾವವೇ ಪ್ರಾಂತಗಳ ಅಭಿವೃದ್ಧಿಗೆ ಮುಳುವಾಗುವುದೆಂದು ತೋರಿತು. ಅದರಿಂದಾಗಿಯೇ ಅವರು ಕೆಲವು ಪತ್ರಿಕೆಗಳಲ್ಲಿ ಯಾರೋ ಒಬ್ಬ ಅಸ್ಸಾಮಿಯು ಅಸ್ಸಾಂ ಕೇವಲ ಅಸ್ಸಾಮಿ ಜನರಿಗೆ ಮಾತ್ರವೆಂದು ಯೋಚಿಸಿದಂತೆ ಕಂಡಿತು. ಅಂತಹ ಭಾವನೆ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಕಂಡುಬಂದಲ್ಲಿ, ಭಾರತ ಯಾರಿಗೆ ಸೇರಿದ್ದು? ಎಂಬ ಪ್ರಶ್ನೆ ಕಾಡುತ್ತದೆ. ಎಲ್ಲಾ ಪ್ರಾಂತಗಳ ಜನರು ಭಾರತಕ್ಕೆ ಸೇರಿರುವಂತೆ ಭಾರತವು ಎಲ್ಲಾ ಜನರಿಗೆ ಸೇರಿದ್ದು ಎಂಬುದು ಅವರ ವಿಚಾರವಾಗಿತ್ತು. ಯಾರೊಬ್ಬನೂ ಇತರ ಪ್ರಾಂತಕ್ಕೆ ಹೋಗಿ ನೆಲಸಿ ಅಲ್ಲಿನ ಜನರ ಮನದಿಚ್ಛೆಗೆ ವಿರುದ್ಧವಾಗಿ ಅಲ್ಲಿನವರನ್ನು ಶೋಷಿಸುವುದಾಗಲೀ, ಅವರ ಆಳ್ವಿಕೆ ನಡೆಸುವುದಾಗಲೀ ಕೂಡದು ಎಂಬುದೊಂದೇ ಷರತ್ತು. ಪ್ರತಿಯೊಬ್ಬರೂ ಭಾರತದ ಸೇವಕರು ಮತ್ತು ಅವರು ಸೇವೆ ಸಲ್ಲಿಸುವ ಮನಸ್ಸಿನಿಂದಲೇ ಜೀವಿಸುವವರಾಗಿರಬೇಕು.

"ಆದರೆ ಪ್ರಸ್ತುತವಿರುವ ಮನೋಸ್ಥೈರ್ಯ ಕುಸಿದ ವಾತಾವರಣದಲ್ಲಿ ಭಾಷಾವಾರು ಮರುವಿಂಗಡಣೆಯನ್ನು ಅನಾಸಕ್ತಿಯಿಂದ ನೋಡುವುದು ಒಪ್ಪಲರ್ಹವೆನಿಸುತ್ತದೆ. ಪ್ರತಿಯೋರ್ವನೂ ತನ್ನ ಮಟ್ಟಿಗೆ ಹಾಗೂ ತನ್ನ ಕುಟುಂಬದ ಮಟ್ಟಿಗೆ ಮಾತ್ರ ಚಿಂತಿಸುತ್ತಾನೆ. ಇಡೀ ಭಾರತದ ಬಗ್ಗೆ ಚಿಂತಿಸುವವರೇ ಇಲ್ಲವೆನಿಸುತ್ತದೆ. ಇವೆಲ್ಲದರ ಮೂಲ ಕೇಂದ್ರಾಭಿಗಾಮಿ ಶಕ್ತಿ ಅಂತಹ ಯೋಚನೆಯಲ್ಲಿದೆ. ಅದು ಶಬ್ದಗಳಲ್ಲಿ ತೋರ್ಪಡಿಸದು ಇಲ್ಲವೇ ಉದ್ವೇಗದ್ದೂ ಅಲ್ಲ! ಆದರೆ ಕೇಂದ್ರಾಪಗಾಮಿಯಾದುದು ಹೊರಗೆ ತೋರುತ್ತದೆ. ಸಹಜವೆನ್ನುವಂತೆ ಭಾರಿ ಗದ್ದಲ ಮಾಡುತ್ತದೆ. ಎಲ್ಲರ ಗಮನ ಸೆಳೆಯುತ್ತದೆ. ಕೋಮುವಾದ ವಿಚಾರಗಳಲ್ಲಿ ಅದು ಎದ್ದು ಕಾಣುತ್ತದೆ. ಅದು ಇತರ ಕ್ಷೇತ್ರಗಳಲ್ಲಿ ಭಯವನ್ನುಂಟುಮಾಡುತ್ತಿದೆ. ಒರಿಸ್ಸ ಮತ್ತು ಆಂಧ್ರ ನಡುವೆ ನಡೆದ ಯುದ್ಧದ ಇತಿಹಾಸವಾಗಲೀ, ಒರಿಸ್ಸ ಮತ್ತು ಬಿಹಾರ್ ಹಾಗೂ ಒರಿಸ್ಸ ಮತ್ತು ಬಂಗಾಳ ನಡುವೆ ನಡೆದ ಯುದ್ಧದ ಭಯಾನಕತೆ ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಇದೆ. ಅವು ಯಾವುವೂ ಸಂಪೂರ್ಣವಾಗಿ ಅಳಿಸಿಹೋಗಿಲ್ಲ. ಇದು ನಡೆದ ಸಂಗತಿಯೊಂದರ ಉದಾಹರಣೆ ಮಾತ್ರ. ಕಾಂಗ್ರೆಸ್ ತನ್ನ ಹೊಸ ಸಂವಿಧಾನವನ್ನು ಹೊಂದುವ ಮೂಲಕ ಯಾವುದೇ ಸಾಮ್ರಾಜ್ಯಶಾಹಿಗೆ ಕಡಿಮೆಯಿಲ್ಲದಂತೆ ಈ ವಿಷಯವನ್ನು ಜೀವನ್ಮರಣ ವಿಷಯವಾಗಿ ತೆಗೆದುಕೊಂಡರೂ, ಉಳಿದ ಪ್ರಾಂತ್ಯಗಳು ೧೯೨೦ರ ಸ್ಥಿತಿಯಲ್ಲೇ ಇದ್ದರೂ ಮರು ವಿಂಗಡಣೆಗೊಳ್ಳಲೇ ಇಲ್ಲ. ಮದ್ರಾಸ್, ಕಾಂಗ್ರೆಸ್ ವಿಭಜಿಸಿದರೂ ಕಾನೂನು ರೀತ್ಯಾ ಹೇಗೆ ತಾನೆ ನಾಲ್ಕು ಪ್ರಾಂತಗಳಾಗಬಲ್ಲುದು? ಅದೇ ರೀತಿ ಬೊಂಬಾಯಿ ತಾನೆ ಹೇಗೆ ಸಾಧ್ಯ? ಮತ್ತಷ್ಟು ಪ್ರಾಂತಗಳ ಜನರು ಇಂತಹ ಹಕ್ಕಿಗಾಗಿ ಮುಂದೆ ಬಂದಿದ್ದಾರೆ. ಅವರನ್ನು ಕಾಂಗ್ರೆಸ್ ಅಧಿಕೃತವಾಗಿ ಒಪ್ಪಿಲ್ಲವಾದರೂ ಅವರೇನೂ ಕಡಿಮೆ ಗದ್ದಲಮಾಡುವವರಲ್ಲ ಅಥವಾ ಪಟ್ಟುಹಿಡಿಯದವರಲ್ಲ. ಕಾಂಗ್ರೆಸ್ ೧೯೨೦ ರಲ್ಲಿ ತಾನು ಹೊಂದಿದ್ದ ಘನತೆ ಹಾಗೂ ನಿಯಂತ್ರಣವನ್ನು ಇಂದು ಹೊಂದಿಲ್ಲ. ಆಶಾಭಾವನೆಗೆ ಬದಲಾಗಿ ನಿರಾಶೆ ಕಾಡುತ್ತಿದೆ. ಈಗ ನಾವು ಸ್ವಾತಂತ್ರ್ಯಗಳಿಸಿದೆವೆಂದರೂ, ಅದನ್ನು ಹೇಗೆ ಅನುಭವಿಸಬೇಕೆಂಬುದನ್ನು ತಿಳಿಯದವರಾಗಿದ್ದೇವೆ. ಅರಾಜಕತೆಯ ಆತ್ಮಹತ್ಯೆಯೆಂಬ ತಪ್ಪು ಅಭಿಪ್ರಾಯಕ್ಕೆ ಬಂದ ಹಾಗಿದೆ. ವಿವಾದಾತ್ಮಕ ವಿಷಯಗಳನ್ನು ಸೂಕ್ತ ಸಮಯದವರೆಗೆ ಅಸೂಯಾ ಪರ ಸುಧಾರಕರು ಮುಂದೂಡುವುದಾದರೆ, ರಾಷ್ಟ್ರೀಯ ಹಿತಕ್ಕಾಗಿ 'ಕೊಡು–ತೆಗೆದುಕೊಳ್ಳುವ' ಮನೋಭಾವವು ಮುಕ್ತವಾಗಿ ಗುರ್ತಿಸಲ್ಪಟ್ಟು,

ಎಲ್ಲ ಬಗೆಯ ವಿಭಜನಕಾರಿ ಹಿತಗಳು ರಾಷ್ಟ್ರೀಯ ಹಿತದ ನಿಯಂತ್ರಣಕ್ಕೆ ಸೇರಬೇಕು, ಅದು ಎಲ್ಲರ ಹಿತವನ್ನೂ ಒಳಗೊಂಡಿರುತ್ತದೆ" (ನವೆಂಬರ್ ೧೯೪೭).

೧೯೪೮ರ ಜನವರಿ ೨೫ ರಂದು ಅವರು ಮಾಡಿದ ಕೊಟ್ಟ ಕೊನೆಯ ಪ್ರಾರ್ಥನಾ ಸಭೆಯ ಭಾಷಣದಲ್ಲಿ, ದುರ್ದೈವವೆಂದರೆ ಅವರು ನಮ್ಮನ್ನಗಲುವ ಒಂದು ವಾರದ ಹಿಂದೆಯಷ್ಟೆ "ಭಾರತದ ಐಕ್ಯತೆ" ಎಂಬ ವಿಷಯದಲ್ಲಿ ಮೂಡಿಬಂದ ರಾಷ್ಟ್ರಪಿತನ ಅಭಿಪ್ರಾಯಗಳು ನಾವು ಅರಿತುಕೊಳ್ಳಲು ಹಾಗೂ ಅರಗಿಸಿಕೊಳ್ಳಲು ನೀಡಿದಂತಿದ್ದಿತು. ಭಾಷಾವಾರು ಪುನರ್ವಿಂಗಡಣೆಯ ವಿಚಾರವನ್ನು ಅವರಿನ್ನೂ ಚರ್ಚಿಸುತ್ತಲೇ ಇದ್ದಾರೆ ಎಂದು ಹೇಳುತ್ತ, "ಕಾಂಗ್ರೆಸ್ ಈಗಾಗಲೇ ನಿರ್ಣಯವನ್ನು ಒಪ್ಪಿಕೊಂಡು ಅಧಿಕಾರ ಬಂದ ಕೂಡಲೇ ಸಂವಿಧಾನ ರೀತ್ಯಾ ಅದನ್ನು ಜಾರಿಗೆ ತರಲು ತಾನು ಇಚ್ಛಿಸಿದೆ ಹಾಗೂ ಈ ಪುನರ್ವಿಂಗಡಣೆ ದೇಶದ ಸಂಸ್ಕೃತಿಯ ಉನ್ನತಿಗೆ ಸಹಾಯಕವಾಗುವುದು. ಆದರೆ ಅಂತಹ ಪುನರ್ವಿಂಗಡಣೆ ದೇಶದ ಏಕತೆಗೆ ಧಕ್ಕೆತರುವಂತಹ ರೀತಿ ದಂಗೆಯೇಳುವ ಮೂಲಕ ಆಗಬಾರದು. ಸ್ವಾಯತ್ತತೆಯೆಂದರೆ ಭಂಗ ತರುವುದಲ್ಲ, ಆರೀತಿ ಯೋಚಿಸಲೂ ಬಾರದು. ಅಲ್ಲದೆ ಇನ್ನುಮುಂದೆ ಪ್ರಾಂತಗಳು ತಮ್ಮಿಷ್ಟದಂತೆ ಇತರ ಪ್ರಾಂತಗಳಿಂದ ಹಾಗೂ ಕೇಂದ್ರದಿಂದ ಪ್ರತ್ಯೇಕಗೊಂಡಂತೆ ನಡೆದುಕೊಳ್ಳಬಾರದು. ಹಾಗೆ ಮಾಡಿದರೆ ಭಾರತದ ಸಾರ್ವಭೌಮತ್ವದ ಅರ್ಥವೇ ಕಳೆದುಹೋಗುವುದಲ್ಲದೆ ಅದರ ಘಟಕಗಳ ಸ್ವಾತಂತ್ರ್ಯವೂ ಹರಣವಾಗುವುದು" (ಫೆಬ್ರವರಿ ೧೯೪೮).

ಪ್ರಧಾನ ಮಂತ್ರಿ ನೆಹರು ಭಾರತ ವಿಭಜನೆಯಾದ ಕೂಡಲೇ ೧೯೪೭ರ ನವೆಂಬರ್ ೨೭ ರ ಸಂವಿಧಾನ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ಭಾಷಾವಾರು ಪ್ರಾಂತ ರಚನೆಯನ್ನು ಅನುಮೋದಿಸುತ್ತ, "ಮೊದಲ ಆದ್ಯತೆಯ ವಿಷಯಗಳನ್ನು ಮೊದಲಿಗೆ ತೆಗೆದುಕೊಳ್ಳಬೇಕಿದೆ ಮತ್ತು ಈಗ ಮೊದಲ ಆದ್ಯತೆ ಭಾರತದ ರಕ್ಷಣೆ ಹಾಗೂ ಭದ್ರತೆಯದಾಗಿದೆ" ಎಂದು ತಿಳಿಸಿದರು.

* * * *

೮. ಧರ್ ಆಯೋಗ

ಭಾಷಾವಾರು ಪ್ರಾಂತರಚನೆಯ ಬೇಡಿಕೆಯನ್ನು ಸಂವಿಧಾನ ಸಭೆಯ ಅಧ್ಯಕ್ಷರು, ಧರ್ ಆಯೋಗಕ್ಕೆ ೧೯೪೮ರ ಜೂನ್ ೧೭ರಂದು ಒಪ್ಪಿಸಿದರು. ಆಯೋಗವು ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತಗಳ ರಚನೆಯನ್ನು ಆಡಳಿತಾತ್ಮಕ, ಆರ್ಥಿಕ ಹಾಗು ಇನ್ನಿತರ ಅಂಶಗಳ ಹಿನ್ನಲೆಯಲ್ಲಿ ಪರಿಶೀಲಿಸಿ ತನ್ನ ವರದಿಯನ್ನು ಸಲ್ಲಿಸಲು ಕೇಳಲಾಯಿತು. ಧರ್ ಆಯೋಗವು ತನ್ನ ವರದಿಯನ್ನು ೧೯೪೮ರ ಡಿಸೆಂಬರ್ ೧೦ ರಂದು ಸಂವಿಧಾನ ಸಭೆಯ ಅಧ್ಯಕ್ಷರಿಗೆ ಸಲ್ಲಿಸಿದ್ದರಲ್ಲಿ ಕೆಳಕಂಡ ಗಮನಾರ್ಹ ಅಂಶಗಳು ಒಳಗೊಂಡಿದ್ದುವು:

"ನಮಗೆ ಒದಗಿಸಿದ ಪುರಾವೆಗಳಲ್ಲಿ ಎರಡು ತೀವ್ರ ವೈರುಧ್ಯದ ದೃಷ್ಟಿಕೋನಗಳು ಈ ಪ್ರಾಂತಗಳ ರಚನೆಯ ಹಾಗೂ ರಚನೆಯ ಕಾಲ, ರಚಿಸಬೇಕಾದ ಸನ್ನಿವೇಶಗಳನ್ನು ಕುರಿತದ್ದಾಗಿದ್ದುವು.

"ಭಾಷಾವಾರು ಪ್ರಾಂತಗಳ ರಚನೆಯ ವಿಷಯವು ಎರಡು ಪರ್ಯಾಯ ನೆಲೆಗಳಲ್ಲಿ ನಿಂತಿದೆ; ಈ ಭಾಷಾಗುಂಪುಗಳು ಚಿಕ್ಕ ರಾಷ್ಟ್ರಗಳೋಪಾದಿಯವಾಗಿದ್ದು, ಸಂವಿಧಾನದ ಕಕ್ಷೆಯ ಸಹವರ್ತಿಯಾಗಿ ಅವುಗಳಿಂದ ಕೇಂದ್ರ ಹಾಗೂ ಒಕ್ಕೂಟಗಳು ತಮ್ಮ ಅಸ್ತಿತ್ವ ಹಾಗೂ ಬಲವನ್ನು ಗಳಿಸುವುವು; ಪರ್ಯಾಯವಾಗಿ ಅದು ಈಗಿರುವ ಭಾರಿ ಗಾತ್ರದ ರಾಜ್ಯಗಳ ಮೇಲೆ ನಿಂತಿದ್ದು ಅವುಗಳ ವಿಸದೃಶವಾದ ಸಮ್ಮಿಳನ ಹಾಗೂ ಆಡಳಿತಾತ್ಮಕ ಅನುಕೂಲಗಳು ಒಂದೇ ಭಾಷೆಯನ್ನಾಡುವ ಜನರನ್ನು ಒಟ್ಟೂಗೂಡಿಸುವಲ್ಲಿ, ಶಿಕ್ಷಣ ದೊರಕಿಸುವ, ನ್ಯಾಯಾಲಯ, ಶಾಸನಸಭೆ, ಸರ್ಕಾರಿ ಯಂತ್ರ ಹಾಗೂ ಪ್ರಜಾಪ್ರಭುತ್ವ ಸಂಸ್ಥೆಗಳ ನಡಾವಳಿಗಳಲ್ಲಿ ಪ್ರಭಾವ ಬೀರಬಲ್ಲುದು".

"ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಶೀಘ್ರದಲ್ಲಿ ಕೈಗೆತ್ತಿಕೊಳ್ಳಬೇಕೆನ್ನುವ ಪರ ವಾದಗಳನ್ನು ಕಾಂಗ್ರೆಸ್ ಮಾಡಿದ ಪ್ರಮಾಣದಿಂದಾಗಿ ಸಾಮಾನ್ಯ ಜನರಲ್ಲಿ ಆಳವಾಗಿ ಇಳಿದುದರ ಪರಿಣಾಮ ರಚನೆಯನ್ನು ಮುಂದೂಡುವುದು ಜನರಲ್ಲಿ ಅಸಹನೆ, ಅಪನಂಬಿಕೆ ಹಾಗೂ ನೋವನ್ನುಂಟುಮಾಡುವುದು. ಆ ಕೆಲಸವನ್ನು ಮುಗಿಸದೆ ದೇಶವು ಯಾವುದೇ ಅಭಿವೃದ್ಧಿಯತ್ತ ಸಾಗಲು ಸಾಧ್ಯವಿರದೆ ಮತ್ತು ಸಂವಿಧಾನದ ಬಳಕೆಯೇ ತಪ್ಪು ಹೆಜ್ಜೆಯಿಂದ ಪ್ರಾರಂಭಿಸುವ ಅಪಾಯವಿರುವ ಕಾರಣ ಸಕಾಲದಲ್ಲಿ ಪ್ರಾಂತರಚನೆ ಕೈಗೂಡಬೇಕಿದೆ".

"ಈ ಭಾಷಾವಾರು ಪ್ರಾಂತಗಳ ರಚನೆಯ ವಿರುದ್ಧ ವಾದಗಳು, ಅದು ಬೇರೆ ಭಾಷೆಯನ್ನಾಡುವ ಅಲ್ಪಸಂಖ್ಯಾತ ಜನರ ವಿರುದ್ಧ ಅಸಹನೆ ಹೆಚ್ಚುವ,

ಪ್ರಾಂತಗಳ ನಡುವೆ ಸಹಬಾಳ್ವೆಯಿಲ್ಲದೆ ಒಂಟಿತನ ಹೆಚ್ಚುವ, ವೈಷಮ್ಯ ಹೆಚ್ಚುವ, ಸಂಕುಚಿತ ರಾಷ್ಟ್ರಪ್ರೇಮವು ರಾಷ್ಟ್ರೀಯ ಭಾವನೆಗಳನ್ನು ತೊಡೆದುಹಾಕುವ ಹಾಗೂ ಕೊನೆಯಲ್ಲಿ ಪ್ರಾಂತಗಳ ಗಡಿ ನಿರ್ಣಯವಾದಾಗ ಕಂಡುಬರುವ ದ್ವೇಷದಿಂದ ಮತ್ತು ಮದ್ರಾಸ್ ಹಾಗೂ ಮುಂಬಯಿ ಬೃಹತ್ ನಗರಗಳನ್ನು ಎಲ್ಲಿಗೆ ಸೇರಿಸಬೇಕೆನ್ನುವ ಅಂಶವೂ ಸಮಸ್ಯೆಗಳನ್ನು ತಂದೊಡ್ಡುವುವು".

"ಭಾಷಾವಾರು ಪ್ರಾಂತ ರಚನೆಯನ್ನು ಮುಂದೂಡಬೇಕೆನ್ನುವ ಪರ ವಾದಗಳು ದೇಶವಿನ್ನೂ ವಿದೇಶೀಯ ಅತಿಕ್ರಮಣದ ಅಪಾಯದಿಂದ ಮುಕ್ತವಾಗಿರದ ಕಾರಣ ಹಾಗೂ ಆರ್ಥಿಕ ಸಂಕಷ್ಟಗಳು ಹೆಚ್ಚಾಗಿರುವ ಕಾರಣವನ್ನು ಮುಂದೂಡುವುವು." ಆಯೋಗವು ತನ್ನ ಅಂತಿಮ ನಿರ್ಣಯವನ್ನು ಕೈಗೊಳ್ಳುವಲ್ಲಿ ಸರಿಯಾದ ದಿಕ್ಕಿನಲ್ಲಿಯೇ ಆಲೋಚಿಸಿದೆ ಎಂದೆನ್ನಬಹುದು. "ಪ್ರಾಂತಗಳ ರಚನೆಯು ಕೇವಲ ಭಾಷಾಧಾರಿತವಾಗಿರಬೇಕೆನ್ನುವುದು ಅಥವಾ ಭಾಷೆಯನ್ನು ಗಣನೆಗೆ ತೆಗೆದುಕೊಂಡಂತಹದ್ದಾಗಿರಬೇಕೆನ್ನುವುದು ಭಾರತ ರಾಷ್ಟ್ರದ ಹಿತದ ದೃಷ್ಟಿಯಿಂದ ಕೂಡಿಲ್ಲದ ಕಾರಣ ಅದನ್ನು ಕೈಗೆತ್ತಿಕೊಳ್ಳಬೇಕೆಂದಿಲ್ಲ" ಎಂಬ ವರದಿಯನ್ನು ರೂಪಿಸಿ, ಒಂದು ಹೆಜ್ಜೆ ಮುಂದೆ ಸರಿದು, "ಹೊಸ ಪ್ರಾಂತಗಳ ರಚನೆಯನ್ನು ಕೈಗೆತ್ತಿಕೊಳ್ಳಬೇಕಾದ ಸಂದರ್ಭದಲ್ಲಿ, ಇತರ ಅಂಶಗಳ ಜೊತೆಯಲ್ಲಿ ಭಾಷೆಯ ಏಕತೆಯೂ ಒಂದು ಅಂಶವಾಗಿಯಷ್ಟೇ ಪರಿಗಣಿಸಲ್ಪಡಬೇಕಲ್ಲದೆ, ಭಾಷೆಯೇ ಅಂತಿಮ ನಿರ್ಧಾರದ ಅಂಶವಾಗಬಾರದು, ಅಥವಾ ಭಾಷೆ ಮುಖ್ಯ ಅಂಶವಾಗಿ ಪರಿಗಣಿಸಲ್ಪಡಬಾರದು" ಎಂದು ತಿಳಿಸಿದೆ.

* * * *

೬. ಪಂಜಾಬ್ ಆಯೋಗ

ಇಂದು ನಮ್ಮ ಪ್ರಾಂತೀಯ ರಾಜಕಾರಣಿಗಳಷ್ಟೇ ಅಲ್ಲ, ಕೆಲವು ಮಂದಿ ರಾಷ್ಟ್ರೀಯ ನಾಯಕರ ನಡವಳಿಕೆ ಹೇಗಿದೆ ? ಕೇವಲ ರಾಜ್ಯಗಳಷ್ಟೇ ಅಲ್ಲದೆ ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳನ್ನು ಭಾಷೆಯ ಹೆಸರಿನಲ್ಲಿ ವಿಭಜಿಸಲು ಅವರು ಬಯಸುತ್ತಾರೆ. ಅವರ ಪ್ರಕಾರ, ಭಾಷೆಯೊಂದಲ್ಲದೆ ಬೇರಾವ ಮಾನದಂಡವೂ ರಾಜ್ಯಗಳ ಪುನರ್ವಿಂಗಡಣೆ ಅಥವಾ ಗಡಿ ಹೊಂದಾಣಿಕೆಯುಲ್ಲಿ ಪರಿಗಣಿಸಲ್ಪಡಬೇಕಿಲ್ಲ. ಇತ್ತೀಚೆಗೆ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್, ಜೆ. ಸಿ. ಷಾ ಹಾಗೂ ವಿದೇಶಾಂಗ ವ್ಯವಹಾರ ಮತ್ತು ಸಂವಹನ ಕ್ಷೇತ್ರಗಳ ತಜ್ಞರೂ ನಿವೃತ್ತ ಆಡಳಿತಗಾರರೂ ಆದ ಶ್ರೀ ಎಸ್. ದತ್ ಮತ್ತು ಶ್ರೀ ಎಂ.ಎಸ್. ಫಿಲಿಪ್‌ರವರುಗಳನ್ನೊಳಗೊಂಡ ಪಂಜಾಬ್ ಆಯೋಗಕ್ಕೆ ವಿಭಜಿತ ಪಂಜಾಬ್‌ನ ಭವಿಷ್ಯದ ನಿರ್ಧಾರ ಕೈಗೊಳ್ಳುವ ಅಂಶವನ್ನು ವಹಿಸಿದಾಗ, ಸದಸ್ಯರು ಸೂಚಿಸಿದಂತೆ, ಕೇಂದ್ರ ಸರ್ಕಾರದ ಪ್ರಸ್ತುತ ಚಿಂತನೆ ಮತ್ತು ಆಡಳಿತ ಪಕ್ಷದ ಅಭಿಪ್ರಾಯವೇನೆಂಬುದು ತಿಳಿದುಬರುತ್ತದೆ. ಅವು ಏನೆಂದರೆ,

(ಅ) ಪಂಜಾಬ್ ರಾಜ್ಯದ ಹಿಂದಿ ಮತ್ತು ಪಂಜಾಬಿ ಭಾಷೆಗಳನ್ನಾಡುವ ಜನರ ಪ್ರದೇಶಗಳ ಗಡಿ ಪರಾಮರ್ಶಿಸಿ, ಹೊಂದಾಣಿಕೆಗಳೇನಾದರೂ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಭಾಷಾ ಸಾಮರಸ್ಯದ ದೃಷ್ಟಿಯಿಂದ ಅಗತ್ಯವೇ ಎಂಬುದನ್ನು ಸೂಚಿಸುವುದು.

(ಆ) ಪಂಜಾಬ್ ರಾಜ್ಯದ ಅಕ್ಕಪಕ್ಕದಲ್ಲೇ ಇರುವ ಹಿಮಾಚಲ ಪ್ರದೇಶದ ಬೆಟ್ಟಪ್ರದೇಶಗಳ ಗಡಿಯನ್ನು ಗುರುತಿಸುವುದು. ಸಿಖ್ಖ ಪಂಜಾಬ್ ಮತ್ತು ಹಿಂದಿ ಭಾಷೆಯ ಹರಿಯಾಣಗಳ ರಚನೆಯ ವಿಷಯ ಈಗ ಚರ್ಚಾತೀತವಾದುದು. ಪವಾಡ ಅಥವಾ ಅಂತಾರಾಷ್ಟ್ರೀಯ ಸ್ಥಿತಿಗತಿಗಳಲ್ಲಿ ಗಮನಾರ್ಹ ವ್ಯತ್ಯಾಸಗಳಾಗದಿದ್ದಲ್ಲಿ ಪಂಜಾಬ್‌ನ ವಿಭಜನೆಯನ್ನು ತಪ್ಪಿಸುವಂತೆಯೇ ಇಲ್ಲ. ಚಂದೀಗಢ ಕೇಂದ್ರಾಡಳಿತ ಪ್ರದೇಶವಾಗಲಿದ್ದು ಹರಿಯಾಣ ಹಾಗೂ ಪಂಜಾಬ್‌ನ ಉಳಿದ ಪ್ರದೇಶಗಳಿಗೆ ಒಂದೇ ರಾಜಧಾನಿಯಾಗಿ ನಿರ್ಧರಿಸಲ್ಪಡಬಹುದು. ಇದು ಸಹಬಾಳ್ವೆಗೆ ಒಂದು ಪ್ರಯೋಗವಾಗುವ ಉತ್ತಮ ನಿರ್ಧಾರವೆನಿಸಬಲ್ಲುದು.

* * * *

೧೦. ಗಡಿ ಸಮಸ್ಯೆ

ಬೃಹತ್ ದ್ವಿಭಾಷಾ ಮುಂಬಯಿಯನ್ನು ೧೯೬೦ರಲ್ಲಿ ವಿಭಜಿಸಿದಾಗ ಈ ಮೇಲಿನ ಪ್ರಯೋಗವನ್ನೇಕೆ ಯತ್ನಿಸಲಿಲ್ಲ? ಮೈಸೂರು ಮತ್ತು ಮಹಾರಾಷ್ಟ್ರಗಳ ಗಡಿ ಸಮಸ್ಯೆ ಇತ್ತೀಚಿಗೆ ತೀವ್ರಸ್ವರೂಪ ಪಡೆದುದು ಕಾಂಗ್ರೆಸ್ ಹೈಕಮಾಂಡ್ ಏಕಸದಸ್ಯ ಆಯೋಗವನ್ನು ರಚಿಸುವ ನಿರ್ಧಾರ ತೆಗೆದುಕೊಂಡುದರಿಂದಲೇ. ಮೈಸೂರು ತನ್ನ ಸಾಮರ್ಥ್ಯವನ್ನು ಒತ್ತಡ ತಂತ್ರದಿಂದ ನಿರ್ಧಾರಗಳನ್ನು ಬದಲಿಸಿ ಬಿಡುವ ಹೊರನೋಟಕ್ಕೆ ಜನಪ್ರಿಯ ಹಾಗೂ ಶಾಂತಿಯುತವಾಗಿ ಕಂಡರೂ ಕೆಲವೊಮ್ಮೆ ಹಿಂಸಾಚಾರಕ್ಕೂ ತಿರುಗುವ ಹೋರಾಟಗಳನ್ನು ಮಾಡುತ್ತ ಬಂದ ಮಹಾರಾಷ್ಟ್ರ ಮಾದರಿಯನ್ನು ಅನುಕರಿಸುವಲ್ಲಿ ಚೆನ್ನಾಗಿಯೇ ಪ್ರದರ್ಶನ ನೀಡಿತು. ಮೈಸೂರು ಮತ್ತು ಮಹಾರಾಷ್ಟ್ರಗಳೆರಡೂ ತಮ್ಮ ವಾದವನ್ನು ಸೂಕ್ತವಾಗಿಯೇ ಮಂಡಿಸುತ್ತ, ಕೆಲವು ಪಟ್ಟಣ ಮತ್ತು ಹಳ್ಳಿಗಳು ಒಂದಲ್ಲ ಮತ್ತೊಂದು ರಾಜ್ಯದಲ್ಲಿದ್ದರೇನೂ ತೊಂದರೆಯಿಲ್ಲ, ಹೇಗಿದ್ದರೂ ಅವು ಭಾರತದಲ್ಲೇ ಉಳಿದಿರುತ್ತವೆ, ಎನ್ನುತ್ತವೆ. ಆದರೆ ನಮ್ಮ ಕ್ರಿಯೆ ಹಾಗೂ ವರ್ತನೆ ಅಂತಹ ಅಮೂಲ್ಯ ರಾಷ್ಟ್ರೀಯತೆಯನ್ನೇನೂ ಪ್ರದರ್ಶಿಸುವುದಿಲ್ಲ. ಇವುಗಳಿಂದ ಯಾರಾದರೂ ತೀರ್ಮಾನಕ್ಕೆ ಬರುವುದೆಂದರೆ ನಾವಿನ್ನೂ ಸಂಕುಚಿತ ವಿಚಾರದ, ಒಡಕು, ಭಿನ್ನಾಭಿಪ್ರಾಯ ಮೂಡಿಸುವ ಜನರಾಗಿಯೇ ಇರುವುವಲ್ಲದೆ, ರಾಷ್ಟ್ರೀಯ ಸ್ಥಾನಮಾನದ ದೇಶದವರಾಗಿ ವರ್ತಿಸುತ್ತಿಲ್ಲದಿರುವುದು ವಿಷಾದದ ಸಂಗತಿ. ಭಾರತವಿನ್ನೂ ರೂಪುಗೊಳ್ಳುತ್ತಿರುವ ರಾಷ್ಟ್ರ. ತುರ್ತು ಸಂದರ್ಭಗಳಲ್ಲಿ ನಾವು ರಕ್ಷಣೆಯ ವಿಚಾರದಲ್ಲಿ ಏಕತೆಯ ಪ್ರದರ್ಶನ ಮಾಡುವುದು, ದೃಢತೆಯನ್ನು ತೋರ್ಪಡಿಸುವುದು ದುರವಸ್ಥೆಯ ಸ್ಥಿತಿಯ ಏಕತೆಯೇ ಹೊರತು, ವೈವಿಧ್ಯದಯಲ್ಲಿ ಏಕತೆಯಂತಹ ಜನಪ್ರಿಯ ಘೋಷಣೆಯದಲ್ಲ. ಸ್ಥಳೀಯ, ಪ್ರಾಂತೀಯ, ಪ್ರಾದೇಶಿಕ ಅಥವಾ ರಾಷ್ಟ್ರೀಯ ನಾಯಕರ ಚರ್ಮವನ್ನು ತರಚಿದಾಗ ನೀವು ಕಾಣುವುದು ಬ್ರಿಟಿಷರ ಒತ್ತೆಯಾಳಾಗಿದ್ದುದನ್ನು ವಿರೋಧಿಸಲು ಆಡುತ್ತಿದ್ದ ರಾಷ್ಟ್ರೀಯತೆಯ ರಾಷ್ಟ್ರಪ್ರೇಮದ ಮಾತುಗಳು ತ್ಯಾಗ, ಬಲಿದಾನದ ರೂಪದವಾಗಿರದೆ, ಚರ್ಮದ ಹೊರ ಪದರದಂತಹ ತೋರಿಕೆಯದಾಗಿರುತ್ತಿದ್ದುವು. ಜಾತೀಯತೆ, ಕೋಮುವಾದ ಮತ್ತು ಪ್ರಾದೇಶಿಕತೆಗಳು ಸಣ್ಣ ಹಾಗೂ ದೊಡ್ಡ ಭಾರತೀಯ ಪ್ರಜೆಯಲ್ಲಿ ತುಂಬಿ ತುಳುಕಾಡುತ್ತದೆ. ಅದು ಸಣ್ಣವರಿಗಿಂತ ದೊಡ್ಡವರಲ್ಲೇ ಹೆಚ್ಚು. ಕೆಲವರು ಸ್ವರಾಜ್ಯ, ಪ್ರಜಾಪ್ರಭುತ್ವ, ಸಮಾಜವಾದ ಹಾಗೂ ರಕ್ಷಣೆ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತು

ನೀಡುವ ಯೋಜನೆಗಳ ಬಗ್ಗೆ ಮಾತನಾಡಿದರೆ, ಅದು ದ್ವಂದ್ವಾರ್ಥದ, ದ್ವಂದ್ವ ಆಲೋಚನೆಗಳದ್ದಾಗಿರುವುದು ಇತ್ತೀಚಿನ ದಶಕಗಳಲ್ಲಿ ಸಾಮಾನ್ಯವಾಗಿಬಿಟ್ಟಿದೆ. ರಾಜ್ಯಗಳ ವಿವೇಚನಾಯುಕ್ತ ಪುನರ್ ವಿಂಗಡಣೆ ನೀತಿಯತ್ತ ನಾವು ನಿಧಾನಗತಿಯಲ್ಲಿ ಕ್ರಮಿಸುತ್ತಿದ್ದವರು; ಈಗ ಭಾಷಾಧಾರಿತ ವಿಭಜನೆ ನೀತಿಯತ್ತ ಶೀಘ್ರಗತಿಯಲ್ಲಿ ಸಾಗುತ್ತಿದ್ದೇವೆ. ಇದು ಆಗಿಂದಾಗ್ಗೆ ರಚಿಸಲ್ಪಟ್ಟ ಅನೇಕ ಆಯೋಗ, ಸಮಿತಿಗಳ ನಿರ್ಧಾರಕ್ಕನುಗುಣವಾಗಿದೆಯೇ? ಈ ಆಯೋಗ ಮತ್ತು ಸಮಿತಿಗಳೂ ಕೂಡ ಕೇವಲ ಕಣ್ಣೊರೆಸುವ, ರಾಜಕೀಯ ದೊಂಬರಾಟ ಸಾಧನಗಳು ಮತ್ತು ಮಾನವ ಅಪರಾಧಿಗಳಿಗೆ ಕ್ಷಮಾಪಣೆಯವೇ?

* * * *

೧೧. ಧರ್ ಆಯೋಗದ ಶಿಫಾರಸ್ಸುಗಳು

ನಾವೀಗ ಧರ್ ಆಯೋಗದ ಶಿಫಾರಸ್ಸುಗಳ ಗತಿ ಏನೆಂದು ಪರಿಶೀಲಿಸೋಣ. ರಾಷ್ಟ್ರೀಯತೆಯನ್ನು ಬೆಳೆಸುವ ಎಲ್ಲಾ ಕ್ರಮಗಳೂ ಮುಂದುವರೆಯುವಂತಾಗಬೇಕು ಮತ್ತು ಅದನ್ನು ಮೊಟಕುಗೊಳಿಸುವ ಎಲ್ಲ ಪ್ರಯತ್ನಗಳೂ ತಿರಸ್ಕರಿಸಲ್ಪಟ್ಟು ಕೈಬಿಡಬೇಕಾಗುವಂತಾಗಬೇಕೆಂದು ಆಯೋಗವು ಒತ್ತಿ ಹೇಳಿದ್ದಿತು. ಇತರ ಎಲ್ಲ ಅಂಶಗಳಲ್ಲಿ ಇತಿಹಾಸ, ಭೌಗೋಳಿಕ ಅಂಶಗಳು, ಆರ್ಥಿಕ ಮತ್ತು ಸಂಸ್ಕೃತಿ ಅಂಶಗಳಿಗೆ ಹೆಚ್ಚಿನ ಮಹತ್ವ ನೀಡಬೇಕೆಂದು ಆಯೋಗವು ಶಿಫಾರಸ್ಸು ಮಾಡಿದ್ದಿತು. ಆಯೋಗವು ಕೆಲವು ಸಾಮಾನ್ಯ ತಿಳುವಳಿಕೆಯ ಪರೀಕ್ಷೆಗಳಿಂದ, ಭಾಷಾಪ್ರದೇಶವು ತೃಪ್ತಿಕರ ಫಲಿತಾಂಶದೊಂದಿಗೆ ಒಪ್ಪಿತವಾದಲ್ಲಿ ಮಾತ್ರವೇ ಪ್ರಾಂತ ರಚನೆಯನ್ನು ಕೈಗೆತ್ತಿಕೊಳ್ಳುವ ಶಿಫಾರಸ್ಸು ಮಾಡಿದ್ದಿತು. ಅವುಗಳು ಯಾವುವೆಂದರೆ,

(೧) ಭೌಗೋಳಿಕ ಸಾಮೀಪ್ಯತೆ ಇರಬೇಕಾದುದು ಮತ್ತು ಅಲ್ಲಲ್ಲಿ ವಿರಳವಾಗಿ ಪ್ರದೇಶಗಳು ಗುರ್ತಿಸಲ್ಪಡುವುದಿಲ್ಲದಿರುವುದು.

(೨) ಹಣಕಾಸು ವ್ಯವಹಾರದಲ್ಲಿ ಸ್ವಾವಲಂಬಿಯಾಗಿರುವುದು.

(೩) ಆಡಳಿತಾತ್ಮಕವಾಗಿ ಅನುಕೂಲತೆಗಳಿರುವುದು.

(೪) ಅಭಿವೃದ್ಧಿಗೆ ಹೆಚ್ಚಿನ ಅವಕಾಶ ನೀಡುವ ಸಾಮರ್ಥ್ಯವಿರುವುದು ಹಾಗೂ

(೫) ಪ್ರಾಂತ ರಚನೆಯ ವಿಷಯದಲ್ಲಿ ಗಡಿಪ್ರದೇಶದೊಳಗೆ ಹೆಚ್ಚು ಪ್ರಮಾಣದ ಒಪ್ಪಂದಗಳಾಗುವುದು ಮತ್ತು ಒಂದೇ ಭಾಷೆಯನ್ನಾಡುವ ಜನರು ತಮ್ಮ ಬಹುಮತದ ಕಾರಣ ಅಲ್ಪಸಂಖ್ಯಾತರ ಮೇಲೆ ಒತ್ತಡ ಹೇರಿ ಹೊಸ ಪ್ರಾಂತ್ಯವನ್ನು ಪಡೆದುಕೊಂಡದ್ದಾಗಿರಬಾರದು.

* * * *

೧೨. ಜೆ.ವಿ.ಪಿ. ಸಮಿತಿ

ಧರ್ ಆಯೋಗವು ಸಲ್ಲಿಸಿದ ವರದಿಯನ್ನು ಪರಿಶೀಲಿಸುವ ದೃಷ್ಟಿಯಿಂದಲೂ ಮತ್ತು ಭಾರತ ಸ್ವಾತಂತ್ರ್ಯಾನಂತರದಲ್ಲಿ ಉದ್ಭವಿಸಿದ ಹೊಸ ಸಮಸ್ಯೆಗಳಿಂದಾಗಿಯೂ ಭಾರತ ರಾಷ್ಟ್ರೀಯ ಕಾಂಗ್ರೆಸ್ ಉನ್ನತ ಮಟ್ಟದ ಸಮಿತಿಯೊಂದನ್ನು ತನ್ನ ಡಿಸೆಂಬರ್ ೧೯೪೮ರಲ್ಲಿ ಜರುಗಿದ ಜೈಪುರ ಅಧಿವೇಶನದಲ್ಲಿಯೇ ರಚಿಸಿದ್ದಿತು. ಈ ಸಮಿತಿಯನ್ನು ಜೆ.ವಿ.ಪಿ. ಸಮಿತಿಯೆಂದೇ ಕರೆಯಲಾಗುತ್ತಿದ್ದು ಅದರಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ಜವಹರ್‌ಲಾಲ್ ನೆಹರು (ಜೆ), ಗೃಹಸಚಿವರಾದ ಶ್ರೀ ವಲ್ಲಭಭಾಯಿ ಪಟೇಲರು (ವಿ) ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಡಾ. ಪಟ್ಟಾಭಿ ಸೀತಾರಾಮಯ್ಯನವರು (ಪಿ) ಸದಸ್ಯರಾಗಿದ್ದು, ಭಾಷಾಸೂತ್ರಗಳಿಗೆ ವಿರುದ್ಧವಾಗಿ ಕೆಲಸ ಮಾಡುವ ಶಕ್ತಿಗಳಿಗೆ ಎಚ್ಚರಿಕೆ ನೀಡಲೆಂದು ಉನ್ನತ ಮಟ್ಟದ ಸಂಸ್ಥಾ ಪ್ರಮುಖರ, ಆಡಳಿತಗಾರರನ್ನೊಳಗೊಂಡ ಸಮಿತಿಯಾಗಿದ್ದಿತು.

ಈ ಸಮಿತಿಯು ಹೆಚ್ಚು ಪರಿಣತಿ ಹೊಂದಿದ, ರಾಜಕೀಯವಾಗಿ ಸೂಕ್ಷ್ಮಪರಿಜ್ಞಾನವುಳ್ಳ ಮತ್ತು ಮಾನವೀಯವಾಗಿ ಅನುಭವಿ ಸದಸ್ಯರನ್ನೊಳಗೊಂಡಿದ್ದು, ಬಹುಶಃ ಇದಕ್ಕಿಂತ ಉತ್ತಮ ಸಮಿತಿಯನ್ನು ಯೋಚಿಸಲು ಸಾಧ್ಯವಿಲ್ಲವಾಗಿತ್ತು. ಇವರುಗಳಿಗಿಂತ ಹೆಚ್ಚಿನ ಶ್ರದ್ಧೆ, ಪರಿಜ್ಞಾನ, ಉತ್ಕಟ ರಾಷ್ಟ್ರೀಯತೆ ಹಾಗೂ ರಾಷ್ಟ್ರಪ್ರೇಮಗಳನ್ನು ಹೊಂದಿದ ರಾಜಕಾರಣಿಗಳಾಗಲೀ, ಸಾರ್ವಜನಿಕ ವ್ಯಕ್ತಿಗಳಾಗಲೀ ಆಗ ಮತ್ತು ಮುಂದೆಯೂ ಇರಲು ಸಾಧ್ಯವಿಲ್ಲವೇನೋ. ಈ ವರಿಷ್ಠ ಸಮಿತಿಯು ವರದಿಯನ್ನು ಪರಿಶೀಲಿಸಿ ತನ್ನ ನಿಖರ ಅಭಿಪ್ರಾಯಗಳನ್ನು ತಿಳಿಸುತ್ತ,

(ಅ) ಕಾಂಗ್ರೆಸ್ ಭಾಷಾವಾರು ಪ್ರಾಂತಗಳ ಸಾಮಾನ್ಯ ಸೂತ್ರಗಳಿಗೆ ಒಪ್ಪಿಗೆ ನೀಡಿದ ಸಂದರ್ಭದಲ್ಲಿ, ಅದು ಸೂತ್ರಗಳನ್ನು ಅನ್ವಯಿಸಿದಾಗಿನ ಸಂದರ್ಭದ ಸಮಸ್ಯೆಗಳನ್ನು ಎದುರಿಸಿರಲಿಲ್ಲವಾದ ಕಾರಣ ಅದರ ಎಲ್ಲ ಬಗೆಯ ಆಗುಹೋಗುಗಳನ್ನು, ಪರಿಣಾಮಗಳನ್ನು ಮನಗಂಡಿರಲಿಲ್ಲ.

(ಆ) ಪ್ರಾಥಮಿಕ ಪರಿಗಣನೆಯಾಗಿ ಭಾರತದ ರಕ್ಷಣೆ, ಏಕತೆ ಮತ್ತು ಆರ್ಥಿಕ ಪ್ರಗತಿ ಅಂಶಗಳು ಪ್ರಮುಖವಾಗುತ್ತವೆ ಹಾಗೂ ಏಕತೆಗೆ ಭಂಗ ತಂದು ಬೇರ್ಪಡುವ ಹಾನಿಯುಂಟು ಮಾಡುವ ಪ್ರವೃತ್ತಿಯನ್ನು ಕಠಿಣವಾಗಿ ನಿರುತ್ಸಾಹಗೊಳಸಬೇಕು.

(ಇ) ಭಾಷೆಯು ಹೇಗೆ ಜನರನ್ನು ಬೆಸೆಯಬಲ್ಲುದೋ ಹಾಗೆಯೇ

ಬೇರ್ಪಡಿಸಲೂ ಕಾರಣವಾಗಬಹುದು; ಮತ್ತು

(ಈ) ಭಾಷಾವಾರು ಪ್ರಾಂತಗಳನ್ನು ಹೊಂದುವ ಕಾಂಗ್ರೆಸ್‌ನ ಹಳೆಯ ಸೂತ್ರಗಳನ್ನು ಪ್ರತಿಯೊಂದು ಪ್ರಾಂತದ ರಚನೆಯ ವಿಷಯದಲ್ಲೂ ಹೆಚ್ಚಿನ ಎಚ್ಚರಿಕೆಯ ಪರಿಶೀಲನೆಯ ಬಳಿಕವಷ್ಟೇ, ಅನ್ವಯಿಸುವ ಸಂದರ್ಭದಲ್ಲಿಯೂ ಆಡಳಿತಾತ್ಮಕವಾಗಿ ತೀವ್ರ ರೀತಿಯ ಸ್ಥಳಬದಲಾವಣೆಗಳಾಗದಂತೆ, ಪರಸ್ಪರ ಕಚ್ಚಾಟಗಳಾಗದಂತೆ, ದೇಶದ ರಾಜಕೀಯ ಮತ್ತು ಆರ್ಥಿಕ ಸ್ಥಿರತೆ ವ್ಯತ್ಯಾಸಗೊಳ್ಳದಂತೆ ಕೈಗೊಳ್ಳುವುದು.

ಈ ಸಮಿತಿಯು ಪ್ರಜಾಭಿಪ್ರಾಯವು ಅಗತ್ಯವೆನಿಸಿದರೆ, ಹೆಚ್ಚಿನ ಜನರ ಆಶಯವಾದರೆ, ಕೆಳಕಂಡ ಎರಡು ಮಿತಿಗಳೊಳಗೆ ಗೌರವಿಸಲ್ಪಟ್ಟು ಕ್ರಮ ತೆಗೆದುಕೊಳ್ಳುವುದು:

(ಅ) ಈ ಸೂತ್ರವನ್ನು ಕೊನೆಯ ಪಕ್ಷ ತಕರಾರಿಲ್ಲದ, ಪ್ರಶಸ್ತವೆನಿಸಿದ ಪ್ರದೇಶಗಳಲ್ಲಿ ಮೊದಲು ಅನ್ವಯಿಸತಕ್ಕದ್ದು.

(ಆ) ಪರಿಶೀಲನಾರ್ಹವೆನಿಸಿದ ಎಲ್ಲಾ ಪ್ರಸ್ತಾವಗಳನ್ನೂ ಒಂದೇ ಬಾರಿಗೆ ಕೈಗೆತ್ತಿಕೊಳ್ಳಬಾರದು.

ಸಮಿತಿಯು, ಬೇರೆ ಶಬ್ದಗಳಲ್ಲಿ, ಯಾವುದೇ ಆತುರದ ಕ್ರಮದ ವಿರುದ್ಧ ಎಚ್ಚರಿಕೆ ನೀಡಿದೆಯಲ್ಲದೆ ಆಂಧ್ರದ ರಚನೆಯೊಂದಿಗೆ ಸೂತ್ರದ ಅನ್ವಯವನ್ನು ಮೊದಲ ಪ್ರಯತ್ನವಾಗಿ ಮಾಡಲು ಸೂಚಿಸಿದೆ. ಉತ್ಕೃಷ್ಟ ಸೇವಾ ಹಾಗೂ ನಿಸ್ವಾರ್ಥ ವ್ಯಕ್ತಿಗಳಿರುವ ಈ ಸಮಿತಿಯಿಂದ ಇದಕ್ಕಿಂತ ಉತ್ತಮ ಸಲಹೆಗಳನ್ನು ಅಪೇಕ್ಷಿಸಲು ಹೇಗೆ ತಾನೇ ಸಾಧ್ಯ ? (ಇತರ ಸ್ವಾರ್ಥಪರರಂತಲ್ಲದೆ) ಅವರು ದೂರದೃಷ್ಟಿಯುಳ್ಳ ನಾಯಕರುಗಳು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಜೆ.ವಿ.ಪಿ. ವರದಿಯನ್ನು ಒಪ್ಪಿಕೊಂಡು ಅದನ್ನು ತನ್ನ ೧೯೫೧ ರ ಚುನಾವಣಾ ಪ್ರಣಾಳಿಕೆಯಲ್ಲಿಯೂ ಅಳವಡಿಸಿಕೊಂಡಿತು.

* * * *

೧೩. ಇತರ ಪಕ್ಷಗಳು

ಈ ಭಾಷಾವಾರು ರಾಜ್ಯ ಪುನರ್ವಿಂಗಡಣೆಯು ಸಹಜವಾಗಿ ಎಲ್ಲ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕಾಣಿಸಿಕೊಂಡಿತು. ಅದು ಮತಗಳಿಸಲು ಆವಶ್ಯಕವೂ ಆಗಿದ್ದಿತು. ಸಮಾಜವಾದಿ ಪಕ್ಷವು ಭಾಷಾವಾರು ಪ್ರಾಂತ್ಯರಚನೆಗೆ ಸಮ್ಮತಿ ಸೂಚಿಸಿದುದಲ್ಲದೆ, ಪ್ರಾಂತ್ಯಗಳ ಪ್ರದೇಶಗಳು ಸಾಮೀಪ್ಯ ಹೊಂದಿರುವ ಮತ್ತು ಆರ್ಥಿಕವಾಗಿ ಸಾಧ್ಯತೆಯುಳ್ಳ ಪ್ರಸ್ತಾವವಾಗಿರಬೇಕೆಂದೂ ಸೂಚಿಸಿತು. ಕಮ್ಯುನಿಸ್ಟ್ ಪಕ್ಷ (ಸಮತಾವಾದಿ) ಹೆಚ್ಚಿನ ಅಧಿಕಾರವುಳ್ಳ ರಾಷ್ಟ್ರೀಯ ಪ್ರಾಂತಗಳಿದ್ದು ಪ್ರತಿಯೊಂದು ಭಾಷಾ ಪ್ರಾಂತಕ್ಕೂ ಸ್ವಾಯತ್ತತೆಯು ಆವಶ್ಯಕವೆಂದು ಅಭಿಪ್ರಾಯಪಟ್ಟಿತು. ಕಿಸಾನ್ ಮಜದೂರ್ ಪ್ರಜಾ ಪಕ್ಷ (ಈಗಿನ ಪ್ರಜಾ ಸೋಷಲಿಸ್ಟ್ ಪಕ್ಷ ಹಾಗೂ ಸಂಯುಕ್ತ ಸೋಷಲಿಸ್ಟ್ ಪಕ್ಷಗಳು ಹಿಂದೆ ಒಟ್ಟಿಗಿದ್ದ ಪಕ್ಷ)ವು ಪುನರ್ವಿಂಗಡಣೆಗಾಗಿ ಉನ್ನತಾಧಿಕಾರ ಸಮಿತಿಯೊಂದನ್ನು ರಚಿಸಿ, ದ್ವಿಭಾಷಾ ಗಡಿಪ್ರದೇಶಗಳ ವಿಷಯವನ್ನು ಅದಕ್ಕೆ ಒಳಪಡಿಸಬೇಕೆಂದು ಸೂಚಿಸಿತು. ಹಿಂದೂ ಮಹಾಸಭೆ ಭಾಷಾಪ್ರಾಂತ್ಯರಚನೆಗೆ ಇಚ್ಛೆ ವ್ಯಕ್ತಪಡಿಸಿ, ಅದು ದೇಶದ, ರಕ್ಷಣೆ, ಆರ್ಥಿಕ ಸುಸ್ಥಿತಿ, ಪ್ರದೇಶಗಳು ಮುಂತಾದವು ಪ್ರಮುಖವಾಗಿ ಪರಿಗಣಿಸಲ್ಪಡಬೇಕೆಂದಿತು.

* * * *

೧೪. ಆಂಧ್ರ ಪ್ರದೇಶ

ಜೆ.ವಿ.ಪಿ. ಸಮಿತಿಯ ವರದಿಯ ಪ್ರಕಾರ, ಪ್ರಧಾನಮಂತ್ರಿ ಶ್ರೀ ಜವಹರ್‌ಲಾಲ್ ನೆಹರು ೧೯೫೨ರ ಡಿಸೆಂಬರ್‌ನ ಸಂಸತ್ ಅಧಿವೇಶನದಲ್ಲಿ ಸರ್ಕಾರವು ಆಂಧ್ರ ಪ್ರದೇಶ ರಾಜ್ಯ ರಚನೆಯ ವಿಷಯದಲ್ಲಿ ಮುಂದುವರೆಯಬಹುದೆಂದು ತಿಳಿಸಿದರು. ಆಂಧ್ರ ಪ್ರದೇಶ ರಚನೆಗಾಗಿ ಹೋರಾಟ ಮಾಡಿ ಪ್ರಾಣ ತೆತ್ತ ಪೊಟ್ಟಿ ಶ್ರೀರಾಮಲು ಸಂಗತಿಯ ಬಳಿಕ ಭಾರತ ಸರ್ಕಾರವು ಆಂಧ್ರ ಪ್ರದೇಶದ ರಚನೆಯ ತೀರ್ಮಾನವನ್ನು ಪ್ರಕಟಿಸಿತು. ಅದರಂತೆ ಪ್ರಸ್ತುತ ಮದ್ರಾಸ್ ಪ್ರಾಂತ್ಯದ ತೆಲುಗು ಭಾಷೆ ಮಾತನಾಡುವ ಜನರ ಪ್ರದೇಶಗಳು, ಮದ್ರಾಸ್ ನಗರವನ್ನು ಹೊರತುಪಡಿಸಿ, ಆಂಧ್ರ ಪ್ರದೇಶದಲ್ಲಿ ಸೇರಲಿರುವುದನ್ನು ಪ್ರಕಟಣೆ ನೀಡಿತು. ಅದರಂತೆ ೧೯೫೩ರ ಫೆಬ್ರವರಿಯಲ್ಲಿ ಜಸ್ಟೀಸ್ ವಾಂಛೂರವರು ಸಲ್ಲಿಸಿದ ವರದಿಯ ಆಧಾರದ ಮೇಲೆ ಮತ್ತು ಬಳ್ಳಾರಿ ತಾಲ್ಲೂಕು ಭವಿಷ್ಯದ ಬಗ್ಗೆ ಜಸ್ಟಿಸ್ ಮಿಶ್ರಾರವರ ಅಭಿಪ್ರಾಯವೂ ಸೇರಿದಂತೆ ಮೊದಲ ಭಾಷಾಧಾರಿತ ಆಂಧ್ರ ಪ್ರದೇಶ ರಾಜ್ಯವು ೧೯೫೩ರ ಅಕ್ಟೋಬರ್ ೧ರಂದು ಅಸ್ತಿತ್ವಕ್ಕೆ ಬಂದಿತು. ಅದು ಪೊಟ್ಟಿ ಶ್ರೀರಾಮುಲು ಹುತಾತ್ಮನಾದುದಕ್ಕೆ ನೀಡಿದ ಬಳುವಳಿಯಂತೆ ನೀಡಲ್ಪಟ್ಟಿತು.

* * * *

೧೫. ಸಾಂವಿಧಾನಿಕ ಪರಿಸ್ಥಿತಿ

ಭಾರತ ಸಂವಿಧಾನದ ವಿಧಿ ೩(೧೯೫೫ರಲ್ಲಿ ತಿದ್ದುಪಡಿಗೊಂಡಂತೆ) ಯನ್ನು ನಾವು ೧೯೪೯ರ ನವೆಂಬರ್ ೨೬ರ ಸಂವಿಧಾನ ಸಭೆಯಲ್ಲಿ ನಮಗೇ ಕೊಟ್ಟುಕೊಂಡಂತೆ, ಮತ್ತು ಅದರಡಿ ನಾವು ೧೯೫೦ರ ಜನವರಿ ೨೬ ರಂದು ಆಳಲ್ಪಡುವ ರೀತ್ಯಾ: ಸಂಸತ್ತು ಕಾನೂನು ರೀತ್ಯಾ

(ಅ) ಹೊಸ ರಾಜ್ಯವೊಂದನ್ನು ಯಾವುದೇ ರಾಜ್ಯದ ಪ್ರದೇಶವನ್ನು ಪ್ರತ್ಯೇಕಗೊಳಿಸಿ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳನ್ನು ಒಟ್ಟುಗೂಡಿಸಿ ಅಥವಾ ರಾಜ್ಯಗಳ ಕೆಲಭಾಗಗಳನ್ನು ಅಥವಾ ಯಾವುದೇ ಪ್ರದೇಶವನ್ನು ಮತ್ತಾವುದೇ ರಾಜ್ಯದ ಭಾಗವೊಂದಕ್ಕೆ ಸೇರಿಸುವ ಮೂಲಕ ರಚಿಸಬಹುದು;

(ಆ) ಯಾವುದೇ ರಾಜ್ಯದ ವಿಸ್ತೀರ್ಣವನ್ನು ಹೆಚ್ಚಿಸಬಹುದು;

(ಇ) ಯಾವುದೇ ರಾಜ್ಯದ ವಿಸ್ತೀರ್ಣವನ್ನು ಕಡಿತಗೊಳಿಸಬಹುದು;

(ಈ) ಯಾವುದೇ ರಾಜ್ಯದ ಗಡಿಗಳನ್ನು ಬದಲಾಯಿಸಬಹುದು;

(ಉ) ಯಾವುದೇ ರಾಜ್ಯದ ಹೆಸರನ್ನು ಬದಲಿಸಬಹುದು;

ಆದರೆ ಅಂತಹ ಯಾವುದೇ ಮಸೂದೆಯನ್ನು ಸಂಸತ್ತಿನ ಯಾವುದೇ ಒಂದು ಸಭೆಯಲ್ಲಿ ಯಾವುದೇ ರಾಜ್ಯದ ವಿಸ್ತೀರ್ಣ, ಗಡಿಗಳು ಮತ್ತು ಹೆಸರು ವಿರೂಪಗೊಳ್ಳದಂತಿದ್ದು ಭಾರತದ ರಾಷ್ಟ್ರಪತಿಯವರ ಶಿಫಾರಸಿಲ್ಲದೆ ಮಂಡಿಸಲ್ಪಡಲಾಗದು. ಭಾರತದ ರಾಷ್ಟ್ರಪತಿಯವರಿಂದ ಅಂತಹ ಮಸೂದೆಯು ಸಂಬಂಧಪಟ್ಟ ರಾಜ್ಯದ ಶಾಸನಸಭೆಗೆ ಪರಾಮರ್ಶೆಗಾಗಿ ನಿಗದಿತ ಕಾಲಾವಧಿಯಲ್ಲಿ ಹಿಂದಿರುಗಿಸುವಂತೆ ಕಳುಹಿಸಲ್ಪಡುವುದಲ್ಲದೆ, ರಾಷ್ಟ್ರಪತಿಯವರು ಅಂತಹ ಕಾಲಾವಧಿಯ ವಿಸ್ತರಣೆಯನ್ನು ಅಥವಾ ನೀಡಿದ ಅವಧಿಯ ಮುಕ್ತಾಯವನ್ನು ತೀರ್ಮಾನಿಸಬಹುದು.

ಆದುದರಿಂದ ಭಾರತದ ಸಂಸತ್ತು ಪರಮೋಚ್ಚ ಅಧಿಕಾರವುಳ್ಳದ್ದು, ಎಲ್ಲಕ್ಕಿಂತ ಉಚ್ಚತಮವಾದುದು ಮತ್ತು ಅತ್ಯುನ್ನತ ಅಧಿಕಾರ, ಶಕ್ತಿ ಮತ್ತು ಜವಾಬ್ದಾರಿಯುಳ್ಳದ್ದಾಗಿದ್ದು, ರಾಜ್ಯಗಳ ಗಡಿ ವಿಚಾರಗಳ ಸಲಹೆಗಾಗಿ (ಜಮ್ಮು ಮತ್ತು ಕಾಶ್ಮೀರದ ವಿಷಯದಲ್ಲಿ ಒಪ್ಪಿಗೆಗಾಗಿ) ಸಂಬಂಧಿಸಿದ ರಾಜ್ಯ ಸರ್ಕಾರದ ಶಾಸನಸಭೆಗಳಿಗೆ ಕಳಿಸಿಕೊಡಲ್ಪಡುವುದು. ರಾಜ್ಯ ಪುನರ್ ವಿಂಗಡಣಾ ವಿಧಿಯು ಸಂವಿಧಾನದ ೩೬೮ನೇ ವಿಧಿಗೆ ಸಂವಿಧಾನದ ತಿದ್ದುಪಡಿಗಾಗಿ ಒಳಪಡುವುದಿಲ್ಲ.

* * * *

೧೬. ರಾಜ್ಯ ಪುನರ್ವಿಂಗಡಣಾ ಆಯೋಗ (ಎಸ್.ಆರ್.ಸಿ.)

ಆಂಧ್ರಪ್ರದೇಶ ರಾಜ್ಯವು ನೂತನ ಭಾಷಾವಾರು ಪ್ರಾಂತ್ಯವಾಗಿ ರಚಿತಗೊಂಡಿದ್ದು ಮದ್ರಾಸ್ ಮತ್ತು ಮುಂಬಯಿಯ ಸ್ಥಳೀಯ ರಾಜಕಾರಣಿಗಳಿಗೆ ಒಟ್ಟಾರೆ ರಾಜ್ಯಗಳ ಪುನರ್ವಿಂಗಡಣೆಗೆ ಒತ್ತಾಯಿಸಿ ಗದ್ದಲ ಮಾಡಲು ಮೆಟ್ಟಿಲಾಯಿತು. ಆದಕಾರಣ ಪ್ರಧಾನಮಂತ್ರಿ ನೆಹರು ೧೯೫೩ರ ಡಿಸೆಂಬರ್ ೨೨ರಂದು "ಭಾರತದ ಒಕ್ಕೂಟದ ರಾಜ್ಯಗಳ ಪುನರ್ವಿಂಗಡಣೆ ಪ್ರಶ್ನೆಯನ್ನು ರಚನಾತ್ಮಕ ಹಾಗೂ ನಿರ್ವಿಕಾರ ಭಾವದಿಂದ ಪರಿಶೀಲಿಸಲು ಆಯೋಗವೊಂದನ್ನು ರಚಿಸಲಾಗುವುದು; ಅದರಿಂದ ಪ್ರತಿಯೊಂದು ಪ್ರಾಂತದ ಹಾಗೂ ಇಡೀ ರಾಷ್ಟ್ರದ ಕಲ್ಯಾಣವನ್ನು ಸಾಧಿಸಲು ಸಾಧ್ಯವಾಗುವುದು" ಎಂಬ ಹೇಳಿಕೆಯನ್ನು ನೀಡುವಂತಾಯಿತು.

ಒರಿಸ್ಸ ರಾಜ್ಯದ ರಾಜ್ಯಪಾಲರಾಗಿದ್ದ ಜಸ್ಟಿಸ್ ಸೈಯಿದ್ ಫಜ್ಲ ಅಲಿ, ರಾಜ್ಯಗಳ ಮಂಡಳಿ ಸದಸ್ಯರಾದ ಪಂಡಿತ್ ಹೃದಯನಾಥ್ ಕುಂಜ್ರು ಮತ್ತು ಖ್ಯಾತ ಇತಿಹಾಸಕಾರ – ರಾಜನೀತಿಜ್ಞರಾದ ಸರ್ದಾರ್ ಕಾವಲಂ ಮಾಧವ ಪಣಿಕ್ಕರ್‌ರನ್ನೊಳಗೊಂಡ ಆಯೋಗದ ರಚನೆಯ ೧೯೫೩ ಡಿಸೆಂಬರ್ ೨೯ ರಂದು ಗೃಹ ಸಚಿವಾಲಯದ ನಿರ್ಣಯವು ಪ್ರಕಟಿಸಲ್ಪಟ್ಟಿತು. ಕೆಳಗಿನ ಮೂರು ಪರಿಚ್ಛೇದಗಳು ಸಮಸ್ಯೆಯ ಹಿನ್ನಲೆಯನ್ನು ನೀಡುತ್ತವೆ.

೧. ಭಾರತ ಒಕ್ಕೂಟದ ಘಟಕಗಳಾದ ರಾಜ್ಯಗಳ ಸಮಸ್ಯೆಗಳನ್ನು ಭಾರತ ಸರ್ಕಾರವು ಬಹು ಎಚ್ಚರಿಕೆಯಿಂದ ಪರಿಶೀಲಿಸುತ್ತಿದೆ. ಈ ರಾಜ್ಯಗಳು ಐತಿಹಾಸಿಕ ಪ್ರಕ್ರಿಯೆಗಳು ಹಾಗೂ ಬ್ರಿಟಿಷ್ ಅಧಿಕಾರದವಧಿಯಲ್ಲಿ ವ್ಯಾಪಕಗೊಂಡ ಮತ್ತು ನೆಲೆಯೂರಿದ ಅವರ ಬಲದ ಕಾರಣ ಉಳಿದುಕೊಂಡಿವೆ. ಸ್ವಾತಂತ್ರ್ಯಗಳಿಸಿದ ಬಳಿಕ ಭಾರತ ವಿಭಜನೆಗೊಂಡು ಸ್ವತಂತ್ರ ರಾಷ್ಟ್ರ ಪಾಕಿಸ್ತಾನವು ಉದಯಿಸಿತು. ವಿಲೀನ ಹಾಗೂ ಸಮ್ಮಿಳನ ಪ್ರಕ್ರಿಯೆಗಳು ಭಾರತದ ರಾಜ್ಯಗಳಲ್ಲಿ ನಡೆದುವು. ಇಂತಹ ಸಮ್ಮಿಳನಗೊಂಡ ರಾಜ್ಯಗಳು ಅತ್ಯಂತ ಅಲ್ಪಾವಧಿಯಲ್ಲಿ ರೂಪುಗೊಂಡುದು ಚಾರಿತ್ರಿಕ ದಾಖಲೆಯೇ ಆಗಿದೆ. ಇಂತಹ ಐಕ್ಯಗಳು ಸ್ವಾತಂತ್ರ್ಯಪೂರ್ವದಲ್ಲಿದ್ದ ಮಾದರಿಯಲ್ಲಿಯೇ ಆಗಿವೆ.

೨. ಹೀಗೆ ಒಕ್ಕೂಟದ ರಾಜ್ಯಗಳು ರೂಪುಗೊಂಡ ಬಗೆ ಐತಿಹಾಸಿಕ

ಅವಘಡ ಮತ್ತು ಆ ಸನ್ನಿವೇಶಗಳ ಕಾರಣದಿಂದಾದುದೇ ಆಗಿದೆ. ಅವುಗಳ ನಡುವೆ ನೂರಾರು ವರ್ಷಗಳಿಂದ ರಾಜಕೀಯ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಸಹಯೋಗ ಬೆಳೆದು ಬಂದಿದೆ.

೩. ಜನರಲ್ಲಿ ರಾಜಕೀಯ ಪ್ರಜ್ಞೆಯು ಹೆಚ್ಚು ಬೆಳೆದು ಬಂದ ಕಾರಣ ಮತ್ತು ಹಿರಿಯ ಪ್ರಾದೇಶಿಕ ಭಾಷೆಗಳ ಪ್ರಾಮುಖ್ಯವೂ ಹೆಚ್ಚಿದ ಕಾರಣ ಭಾಷಾವಾರು ಪ್ರಾಂತಗಳ ರಚನೆಯ ಬೇಡಿಕೆಯು ಕೆಲವು ರಾಜ್ಯಗಳಲ್ಲಿ ಕಂಡುಬಂದಿತು. ಅಂತಹ ಪ್ರತಿಯೊಂದು ಸಮಸ್ಯೆಯೂ ಇನ್ನಿತರ ಸಮಸ್ಯೆಗಳೊಂದಿಗೆ ಸಂಬಂಧ ಹೊಂದಿದ್ದು, ಯಾವುದೇ ರಾಜ್ಯ ಪುನರ್ವಿಂಗಡಣೆಯು ಇತರ ರಾಜ್ಯಗಳ ಮೇಲೆ ಪರಿಣಾಮ ಬೀರುತ್ತಿತ್ತು. ಆದ್ದರಿಂದ ಯಾವುದೇ ಒಂದು ಸಮಸ್ಯೆಯನ್ನು ಪ್ರತ್ಯೇಕಗೊಳಿಸಿ ಬಗೆಹರಿಸುವುದು ಕಷ್ಟಸಾಧ್ಯವಾಗುತ್ತಿತ್ತು.

* * * *

೧೭. ಮೂಲೋದ್ದೇಶಗಳು

ಆಯೋಗವು ಯಾವುದೇ ಪುನರ್ ವಿಂಗಡಣೆಯ ಪ್ರಸ್ತಾವದ ಬಗ್ಗೆ ಮುಕ್ತವಾಗಿ ಪರಿಶೀಲಿಸಲು ಪೂರ್ಣ ಅಧಿಕಾರವನ್ನು ಕೊಟ್ಟಿದ್ದರೂ, ಕೆಲವು ಮೂಲ ಉದ್ದೇಶಗಳನ್ನು ಪರಿಶೀಲನೆಯ ಸಂದರ್ಭದಲ್ಲಿ ಗಮನದಲ್ಲಿರಿಸಿಕೊಂಡಿರುವಂತೆ ೧೯೫೩ರ ಡಿಸೆಂಬರ್ ೨೯ ರ ನಿರ್ಣಯದ ೪ನೇ ಪರಿಚ್ಛೇದದಲ್ಲಿ ಕೆಳಕಂಡಂತೆ ಸೂಚಿಸಲ್ಪಟ್ಟಿತು:

"ಭಾಷೆ ಮತ್ತು ಸಂಸ್ಕೃತಿಯು ಒಂದು ಪ್ರದೇಶದ ಜನಜೀವನಶೈಲಿಯನ್ನು ಪ್ರತಿನಿಧಿಸುವುವು. ರಾಜ್ಯಗಳ ಪುನರ್ ವಿಂಗಡಣೆಯನ್ನು ಪರಿಶೀಲಿಸುವಾಗ ಬೇರೆ ಕೆಲವು ಮುಖ್ಯ ಅಂಶಗಳನ್ನು ಗಮನಿಸಬೇಕಾದುದು ಅತ್ಯಾವಶ್ಯಕ. ಅಂತಹ ಮೊದಲನೇ ಅಂಶವೆಂದರೆ, ಭಾರತದ ಏಕತೆ ಹಾಗೂ ರಕ್ಷಣೆಯನ್ನು ಬಲಪಡಿಸುವಂತಹುದು ಪ್ರಮುಖವಾದುದು. ಹಣಕಾಸು, ಆರ್ಥಿಕ ಪ್ರಗತಿ ಹಾಗೂ ಆಡಳಿತಾತ್ಮಕ ವಿಚಾರಗಳು ಕೂಡ ರಾಜ್ಯಗಳ ಹಿತದೃಷ್ಟಿಯಿಂದಲ್ಲದೆ, ಇಡೀ ರಾಷ್ಟ್ರದ ಹಿತದೃಷ್ಟಿಯಿಂದಲೂ ಮುಖ್ಯವೆನಿಸುತ್ತವೆ.

ಭಾರತವು ತನ್ನ ಆರ್ಥಿಕ, ಸಾಂಸ್ಕೃತಿಕ ಮತ್ತು ನೈತಿಕ ಪ್ರಗತಿಗಾಗಿ ಅತ್ಯಂತ ವ್ಯವಸ್ಥಿತ ಯೋಜನೆಯೊಂದನ್ನು ರೂಪಿಸುತ್ತಿದೆ. ಈ ರಾಷ್ಟ್ರೀಯ ಯೋಜನೆಯೊಂದಿಗೆ ಹೊಂದಾಣಿಕೆಯಾಗದ ಅಥವಾ ಯೋಜನೆಯ ಯಶಸ್ವೀ ಆಚರಣೆಗೆ ಅಡ್ಡಿಯುಂಟು ಮಾಡುವ ಯಾವುದೇ ಬದಲಾವಣೆಯೂ ರಾಷ್ಟ್ರೀಯ ಹಿತಕ್ಕೆ ಧಕ್ಕೆಯುಂಟುಮಾಡುವುದು.

ಹೀಗೆ ಆವಿಷ್ಕರಿಸಲ್ಪಟ್ಟ ಮಾರ್ಗದರ್ಶಿ ಸೂತ್ರಗಳನ್ನು ಕೆಳಕಂಡಂತೆ ಗಮನಿಸಬಹುದು.

(ಅ) ಭಾರತದ ರಾಷ್ಟ್ರೀಯ ಐಕ್ಯತೆ ಮತ್ತು ಸಂರಕ್ಷಣೆಯನ್ನು ಕಾಪಾಡಿಕೊಂಡು ಬರುವುದು ಮತ್ತು ಬಲಗೊಳಿಸುವುದು;

(ಆ) ಭಾಷೆ ಮತ್ತು ಸಂಸ್ಕೃತಿಗಳ ಸಾಮರಸ್ಯ;

(ಇ) ಹಣಕಾಸು, ಆರ್ಥಿಕ ಮತ್ತು ಆಡಳಿತಾತ್ಮಕ ವಿಚಾರಗಳು;

(ಈ) ರಾಷ್ಟ್ರೀಯ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವುದು.

ಒಂದೇ ಆಡಳಿತ ಪಕ್ಷ ಮತ್ತು ಜನನಾಯಕರು ಮೇಲಿನ ಸೂತ್ರಗಳನ್ನು ಗಾಳಿಗೆ ಬಿಟ್ಟು ದೇಶವನ್ನು ವಿಭಜಿಸುತ್ತಲೇ ಅವುಗಳನ್ನು ಚಿಕ್ಕಚಿಕ್ಕ ಘಟಕಗಳನ್ನಾಗಿ,

ಕಣ ಕಣವಾಗಿಸುತ್ತಿರಲು ಅಮಾಯಕ ಜನಸಮುದಾಯದ ನಂಬಿಕೆಗಳನ್ನು ಮುಂದಿಟ್ಟುಕೊಂಡು, ಒಂದು ಭಾಷೆಯ ಹೆಸರಿನಲ್ಲಿ ದೇಶವನ್ನು ಸಂಕಷ್ಟಕ್ಕೆ ಗುರಿಮಾಡುತ್ತಿರುವುದು ಅಪಾಯಕಾರಿಯಲ್ಲವೇ ?

* * * *

೧೮. ಪರಿಶೀಲನಾರ್ಹ ಅಂಶಗಳು –ಎಸ್.ಆರ್.ಸಿ.

ಪುನರ್ವಿಂಗಡಣೆಯನ್ನು ಗಮನದಲ್ಲಿರಿಸಿದಂತೆ ಅನೇಕ ಅಂಶಗಳನ್ನು ಕುರಿತಾಗಿ ಆಯೋಗವು ಹೇಳಿದುದೇನೆಂದರೆ,

"ಸಮಸ್ಯೆಯನ್ನು ಎಲ್ಲ ದಿಕ್ಕಿನಲ್ಲಿ ಪರಿಶೀಲನೆ ಮಾಡಿದ ಬಳಿಕ ನಾವು ತೀರ್ಮಾನಕ್ಕೆ ಬಂದುದೇನೆಂದರೆ, ಭಾಷೆ ಅಥವಾ ಸಂಸ್ಕೃತಿಗಳನ್ನು ಒಂದೇ ಪರೀಕ್ಷೆಗೊಳಪಡಿಸುವುದರ ಮೂಲಕ ರಾಜ್ಯಗಳ ಪುನರ್ ವಿಂಗಡಣೆಯನ್ನು ಕೈಗೊಳ್ಳುವುದು ಸಾಧ್ಯವೂ ಅಲ್ಲ ಹಾಗೂ ಅಪೇಕ್ಷಣೀಯವೂ ಅಲ್ಲ. ನಮ್ಮ ದೇಶದ ಐಕ್ಯದ ದೃಷ್ಟಿಯಿಂದ ಇಡೀ ಸಮಸ್ಯೆಯನ್ನು ಸಮತೋಲನ ಮಾರ್ಗವನ್ನನುಸರಿಸಿ ಬಗೆಹರಿಸುವುದು ಸೂಕ್ತವೆನಿಸುವುದಿಲ್ಲ. ಅಂತಹ ಸಮತೋಲನ ಮಾರ್ಗವು ಕೆಳಕಂಡಂತೆ ಇರಲು ಸಾಧ್ಯ.

(ಅ) ಭಾಷಾ ಸಾಮರಸ್ಯವನ್ನು ಆಡಳಿತಾನುಕೂಲಕ್ಕೆ ಹಾಗೂ ಆಡಳಿತ ಕೌಶಲ್ಯಕ್ಕೆ ಸಹಾಯವಾಗುವಂತೆ ಸೂಕ್ತವಾಗಿ ಗುರುತಿಸಬೇಕಾಗುವುದಷ್ಟೇ ಅಲ್ಲದೆ ಆಡಳಿತಾತ್ಮಕ, ಆರ್ಥಿಕ ಹಾಗೂ ರಾಜಕೀಯ ಇತ್ಯಾದಿ ಉಳಿದಂಶಗಳನ್ನು ಸವಾರಿ ಮಾಡಲು ಬಿಡಬಾರದು;

(ಆ) ಸಂವಹನ, ಶಿಕ್ಷಣ ಮತ್ತು ಸಾಂಸ್ಕೃತಿಕ ಅಗತ್ಯಗಳು ಎಲ್ಲ ಭಾಷೆಗಳಿಗೂ ದಕ್ಕುವಂತೆ ಒಂದೇ ಭಾಷೆಯದಾಗಲೀ, ಬಹುಭಾಷೆಯದಾಗಲೀ ಆಡಳಿತಾತ್ಮಕ ಘಟಕಗಳು ಸಾಕಷ್ಟು ಪೂರೈಸಲ್ಪಡಬೇಕು;

(ಇ) ಎಲ್ಲಿ ಸಮಾಧಾನಕರ ಸ್ಥಿತಿ ಇರುವುದೋ ಹಾಗೂ ಆರ್ಥಿಕ, ರಾಜಕೀಯ ಮತ್ತು ಆಡಳಿತಾತ್ಮಕ ಅಂಶಗಳು ಸಮತೋಲನದಿಂದಿದ್ದು ಬಹುಭಾಷಾ ರಾಜ್ಯಗಳಿಗೆ ಅನುಕೂಲಕರವೆನಿಸುವುವೋ ಅವುಗಳನ್ನು ಹಾಗೇ ಮುಂದುವರೆಸಿ ಎಲ್ಲಾ ಭಾಷಾಜನರೂ ಸಮಾನ ಹಕ್ಕು ಮತ್ತು ಅವಕಾಶ ಹೊಂದಿರುವಂತೆ ರಕ್ಷಾ ಕ್ರಮಗಳನ್ನು ಕೈಗೊಳ್ಳುವುದು;

(ಈ) ಭಾರತ ಸಂವಿಧಾನದ ಮೂಲ ಉದ್ದೇಶಗಳಲ್ಲೊಂದಾದ, ಎಲ್ಲಾ ಜನರಿಗೂ ಸಮಾನಾವಕಾಶ ಮತ್ತು ಸಮಾನ ಹಕ್ಕು ಭಾರತಾದ್ಯಂತವಿರುವುದನ್ನು ಒಪ್ಪದ 'ಹೋಂ ಲ್ಯಾಂಡ್' ನೀತಿಯನ್ನು ತಿರಸ್ಕರಿಸುವುದು;

(ಉ) ಭಾಷಾಸಾಮರಸ್ಯದ ದೃಷ್ಟಿಯಿಂದ ಹಾಗೂ ಅನೇಕ ರಾಜ್ಯಗಳಲ್ಲಿ ಒಂದೇ ಭಾಷೆ ಆಡುವ ಜನರಿದ್ದು ಅದರಿಂದ ಭಾಷಾಸೂತ್ರಕ್ಕೆ ಅಪಚಾರವಾಗದಿರುವ

ಕಾರಣದಿಂದಲೂ, ಹೆಚ್ಚು ಜನರು ಹಿಂದಿ ಮಾತನಾಡುವವರಿದ್ದು ಅವರೆಲ್ಲ ನಿಗದಿತ ರಾಜ್ಯಗಳಲ್ಲಿರಬೇಕೆನ್ನುವುದಾಗದಿರುವ ಕಾರಣದಿಂದಲೂ 'ಒಂದು ರಾಜ್ಯ ಒಂದು ಭಾಷೆ' ನೀತಿಯನ್ನು ತಿರಸ್ಕರಿಸುವುದು;

(ಊ) ಕೊನೆಯಲ್ಲಿ, ರಾಜ್ಯಮಟ್ಟದಲ್ಲಿ ಏಕಭಾಷಾವಾದವು ನಿರ್ದಿಷ್ಟ ಭಾವಕ್ಕೆಡೆ ಕೊಡುವುದನ್ನು ಭಾರತ ರಾಷ್ಟ್ರೀಯತೆಗೆ ಹೆಚ್ಚು ಒತ್ತು ಕೊಡುವ ಕ್ರಮಗಳ ಮೂಲಕ ಹತ್ತಿಕ್ಕಲು ಸಾಧ್ಯ; ಭಿನ್ನ ಭಾಷಾ ಸಂಸ್ಕೃತಿಗಳ ನಡುವೆ ಹಿತಕರ ವಾತಾವರಣ ನಿರ್ಮಾಣ ಹಾಗೂ ಅಂತರರಾಜ್ಯ ಸಹಕಾರದತ್ತ ಮತ್ತು ಕೇಂದ್ರ–ರಾಜ್ಯ ಸಂಬಂಧಗಳನ್ನು ಉತ್ತಮಪಡಿಸುವತ್ತ ಹೆಚ್ಚಿನ ಗಮನ ಹರಿಸುವುದರಿಂದ ರಾಷ್ಟ್ರೀಯ ನೀತಿಗಳು ಮತ್ತು ಕಾರ್ಯಕ್ರಮಗಳು ಯಶಸ್ವಿಯಾಗುವುವು". ಆಯೋಗವು ಮುಂದುವರೆದು,

"ಪುನರ್ವಿಂಗಡಣೆ ಸಮಸ್ಯೆಯು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದಿರುವುದು. ಆದುದರಿಂದ ಚಾರಿತ್ರಿಕ, ಭಾಷಾ, ಭೌಗೋಳಿಕ, ಆರ್ಥಿಕ ಮತ್ತು ಉಳಿದ ಅಂಶಗಳು ಶತಮಾನಗಳಿಂದ ಪರಸ್ಪರ ಪರಿಶೀಲಿಸಲ್ಪಡುತ್ತಿದ್ದುದು ಬೇರೆ ಬೇರೆ ರೀತಿಯಲ್ಲಿ ಪ್ರದೇಶಗಳು ಉದ್ಭವವಾಗಿರಲು ಸಾಧ್ಯ. ಆದ್ದರಿಂದ ಪ್ರತಿಯೊಂದು ರಾಜ್ಯದ್ದೂ ತನ್ನದೇ ಆದ ಹಿನ್ನೆಲೆ ಇರುವುದು. ಅಲ್ಲದೆ ಪುನರ್ ವಿಂಗಡಣೆ ಸಮಸ್ಯೆಯು ಸಂಕೀರ್ಣವಾಗಿದ್ದು, ಯಾವುದೇ ಒಂದು ಅಂಶದ ಪರೀಕ್ಷೆಯಿಂದ ಉತ್ತಮ ಫಲಿತಾಂಶ ದೊರಕದು. ಈ ಹಿಂದೆ ಶ್ರಮವಹಿಸಿ ಕೆಲಸ ಮಾಡಿದ ಅನೇಕ ಆಯೋಗಗಳು, ಸಮಿತಿಗಳಾದ ಧರ್ ಆಯೋಗ, ಜೆ.ವಿ.ಪಿ. ಸಮಿತಿಗಳ ಒಂದೇ ಸೂತ್ರದ ತೀರ್ಮಾನವಿರಲು ಸಾಧ್ಯವಿಲ್ಲವೆಂಬುದನ್ನು ಸರಿಯಾಗಿಯೇ ತಿಳಿಸಿವೆ. ಈ ಕಾರಣದಿಂದ ನಾವು ಪ್ರತಿಯೊಂದು ಸಮಸ್ಯೆಯನ್ನೂ ಅದರ ಹಿನ್ನೆಲೆಯಲ್ಲಿ ಪರಿಶೀಲಿಸಿ ಅದರ ಗುಣದೋಷಗಳನ್ನು ಗಮನದಲ್ಲಿರಿಸಿಕೊಂಡು ಎಲ್ಲ ಸನ್ನಿವೇಶಗಳನ್ನೂ ಒಟ್ಟಾರೆಯಾಗಿ ಪರಿಶೀಲಿಸಿ, ಎಲ್ಲ ದೃಷ್ಟಿಯಿಂದ ಸಮಾಧಾನವೆನ್ನುವ ಪರಿಹಾರಗಳನ್ನು ಗುರುತಿಸಿ ಅಂತಿಮ ತೀರ್ಮಾನಕ್ಕೆ ಬಂದಿದ್ದೇವೆ".

* * * *

೧೯. ಪುನರ್ವಿಂಗಡಣೆ ಶಿಫಾರಸು

ಈ ಆಯೋಗವು ಮೇಲಿನ ದೃಷ್ಟಿಕೋನ ಹೊಂದಿದ್ದು, ರಾಜ್ಯಗಳ ಪುನರ್ವಿಂಗಡಣೆಯ ಪರವಾಗಿ ತೀರ್ಮಾನಿಸುತ್ತಾ,

"ಹಿಂದಿನ ರಾಜಮನೆತನದ ಪ್ರಾಂತ್ಯಗಳು ಐಕ್ಯಗೊಳ್ಳುವ ಸಂದರ್ಭದಲ್ಲಿ ಪ್ರಗತಿಯ ವಿವಿಧ ಹಂತಗಳಲ್ಲಿದ್ದುವು. ಬ್ರಿಟಿಷ್ ಇಂಡಿಯ ಪ್ರಾಂತಗಳ ನಡುವೆಯಿದ್ದು ಅಸಮತೆಗಳೊಂದಿಗೆ ಮತ್ತಷ್ಟು ಕೂಡುವ ಅಪಾಯವಿರುವ ಕಾರಣ ಕೆಲವು ಸಂಧಿ ಕಾಲದ ಸಮಯೋಚಿತ ಕ್ರಮಗಳನ್ನು, ಈ ರಾಜ್ಯಗಳ ಸನ್ನಿವೇಶಕ್ಕನುಗುಣವಾಗಿ ತೆಗೆದುಕೊಳ್ಳುವ ಮೂಲಕ ಅವುಗಳನ್ನು ಭಾರತದ ಸಂವಿಧಾನ ರಚನೆಯೊಳಗೆ ಸೇರಿಸುವುದು, ಅಗತ್ಯವೆನಿಸುವುದು. ಈ ಅಸಮತೆಗಳು ರಾಜ್ಯಗಳನ್ನು ಎಬಿಸಿ ಪ್ರಾಂತ್ಯಗಳೆಂದು ವಿಭಾಗಿಸಿದ್ದುವು". ಅಲ್ಲದೆ, "ಭಾರತ ಒಕ್ಕೂಟದ ಯಾವೊಂದು ರಾಜ್ಯವೂ ಹಿಂದಿನ ಸಾರ್ವಭೌಮತ್ವದ ರಾಜ್ಯವನ್ನೂ ಪ್ರತಿನಿಧಿಸುವಂತಿಲ್ಲ. ಭಾರತ ಸಂವಿಧಾನದ ವಿಶೇಷವೆಂದರೆ ಅದು ಸಂಸತ್ತಿಗೆ ಪರಮಾಧಿಕಾರ ನೀಡಿ, ಸಂಸತ್ತು ಹೊಸ ರಾಜ್ಯವನ್ನು ಸೇರಿಸಿಕೊಳ್ಳಲು, ರಚಿಸಲು, ಪ್ರದೇಶದ ವ್ಯಾಪ್ತಿಯನ್ನು ಹೆಚ್ಚಿಸಲು ಅಥವಾ ಕಡಿಮೆಗೊಳಿಸಲು ಅಥವಾ ಮಾರ್ಪಾಡು ಮಾಡಲು ಅಂತಹ ಪರಮಾಧಿಕಾರ ಹೊಂದಿರುತ್ತದೆ.

ನಮ್ಮ ಸಂವಿಧಾನದಲ್ಲಿ ಕೇಂದ್ರಾಡಳಿತ ಪ್ರದೇಶದೊಂದಿಗೆ ಇತರ ಯಾವುದೇ ಪ್ರದೇಶವನ್ನು ಸೇರಿಸಲಾಗಲೀ ಅಥವಾ ಯಾವುದೇ ಪ್ರದೇಶದೊಂದಿಗೆ ಕೇಂದ್ರಾಡಳಿತ ಪ್ರದೇಶವನ್ನು ಸೇರಿಸಲಾಗಲೀ ಅವಕಾಶವಿಲ್ಲ.

* * * *

೨೦. ಪುನಾ ರಚಿತ ರಾಜ್ಯಗಳು

"ವಸ್ತುನಿಷ್ಠ" ಹಾಗೂ "ಸಮಚಿತ್ತ" ದ ವಿಶ್ಲೇಷಣೆಯ ನಂತರ, ಬಹು ಕ್ಲಿಷ್ಟವೆನಿಸಿದ ಸಮಸ್ಯೆಯನ್ನು ಆಯೋಗವು ಮುಂದಿನ ಪೀಳಿಗೆ ಪ್ರಸಕ್ತ ತಲೆಮಾರು ಜನರನ್ನು ದೂಷಿಬಾರದೆಂದು, ವಿವೇಚನೆಯಿಂದ, ನಿರ್ಭಾವದಿಂದ ಪರಿಹರಿಸಲು ಯತ್ನಿಸಿದೆ. ಅದು ಗಾಜಿನಮನೆಯ ಎಲ್ಲ ಕಿಟಕಿ, ಬಾಗಿಲುಗಳನ್ನು ತೆರೆದಿಟ್ಟು ಒಳನುಗ್ಗುವ ಭಾಷಾ ಪ್ರಾಂತ ರಚನೆಯೆಂಬ ಬಿರುಗಾಳಿಯು ತನ್ನೊಡನೆ ಮದ್ರಾಸ್, ಕೇರಳ, ಕರ್ನಾಟಕ, ಹೈದರಾಬಾದ್, ಆಂಧ್ರ, ಬೊಂಬಾಯಿ, ವಿದರ್ಭ, ಮಧ್ಯಪ್ರದೇಶ, ರಾಜಾಸ್ತಾನ್, ಪಂಜಾಬ್, ಉತ್ತರಪ್ರದೇಶ, ಬಿಹಾರ್, ಪ. ಬಂಗಾಳ, ಅಸ್ಸಾಂ, ಒರಿಸ್ಸಾ ಮತ್ತು ಜಮ್ಮು ಮತ್ತು ಕಾಶ್ಮೀರಗಳನ್ನು ಹೊತ್ತು ತರುವುದನ್ನರಿತೇ ಸಮತೋಲನದ ತೀರ್ಮಾನಕ್ಕೆ ಬಂದಿದೆ. ೧೯೬೧-೬೨ ರ ಸಾರ್ವತ್ರಿಕ ಚುನಾವಣೆಯ ನಂತರ ಹೈದರಾಬಾದ್‌ನ ಉಳಿಕೆ ಭಾಗ ಆಂಧ್ರದಲ್ಲಿ ಸೇರಲಿದೆ; ಆ ಬಳಿಕ ರಾಜ್ಯಗಳ ಸಂಖ್ಯೆ ೧೫ ಆಗಲಿದೆ. ನಮ್ಮ ಸಂವಿಧಾನದ ೮ನೇ ಅನುಬಂಧದಲ್ಲಿ ೧೪ ಭಾಷೆಗಳಿದ್ದು ಅವುಗಳು ರಾಜ್ಯಭಾಷೆ ಅಥವಾ ಪ್ರಾದೇಶಿಕ ಭಾಷೆಗಳೆಂದು ಕರೆಯಲ್ಪಡುವುವು. ಅವುಗಳೆಂದರೆ ಅಸ್ಸಾಮಿ, ಬಂಗಾಲಿ, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಮಲೆಯಾಳಂ, ಮರಾಠಿ, ಒರಿಯ, ಪಂಜಾಬಿ, ಸಂಸ್ಕೃತ, ತಮಿಳು, ತೆಲುಗು ಮತ್ತು ಉರ್ದು. ಇವುಗಳಲ್ಲಿ ಸಂಸ್ಕೃತ ಹಾಗೂ ಉರ್ದು ಭಾಷಾವಾರು ಪ್ರಾಂತ್ಯ ರಚನೆಯ ಕಕ್ಷೆಯಿಂದ ಹೊರಗಿರುವುವು. ಭಾಷೆಯ ದೃಷ್ಟಿಯಿಂದ ಕೇವಲ ೧೨ ರಾಜ್ಯಗಳಿರುವುವು. ಆದರೆ ವಿದರ್ಭ, ಮಧ್ಯಪ್ರದೇಶ, ರಾಜಾಸ್ತಾನ, ಮತ್ತು ಬಿಹಾರಗಳು ಮುಖ್ಯ ಸಾಂಸ್ಕೃತಿಕ ಪ್ರಾಂತ್ಯಗಳಾಗಿದ್ದು ಆ ಜನರ ಇಷ್ಟ-ನಂಬಿಕೆಗಳು ಸೂಕ್ತವಾಗಿ ಗೌರವಿಸಲ್ಪಡಬೇಕಾಗುವುದು. ಬಹಳ ಕಾಲ ಗುಜರಾತಿ ಹಾಗೂ ಮರಾಠಿ ಭಾಷೆಯ ಜನರಲ್ಲಿ ಹೊಂದಾಣಿಕೆಯಿದ್ದು, ಬೊಂಬಾಯಿ ಅದರ ಕೇಂದ್ರಸ್ಥಾನವೆನಿಸುವ ಕಾರಣ, ಹಳೆಯ ಬೊಂಬಾಯಿ ಪ್ರಾಂತ್ಯದ ಅಬುರೋಡ್ ತಾಲ್ಲೂಕು, ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳನ್ನು ಹೊರತುಪಡಿಸಲು ತೀರ್ಮಾನಿಸಲಾಯಿತು. ಅಂತೆಯೇ ಮರಾಠಿ ಭಾಷೆ ಆಡುವ ಹೈದರಾಬಾದ್ ಪ್ರಾಂತ್ಯದ ಜಿಲ್ಲೆಗಳಾದ ಉಸ್ಮಾನಾಬಾದ್, ಭಿರ್, ಔರಂಗಾಬಾದ್, ಪರ್ಬನಿ ಮತ್ತು ನಾಂದೇಡ್‌ಗಳನ್ನು ಬೊಂಬಾಯಿ ಸೇರಿಸಿ ಜೊತೆಗೆ ಸೌರಾಷ್ಟ್ರ

ಹಾಗೂ ಕಚ್‌ಗಳೂ ಸೇರಿದ ದ್ವಿಭಾಷಾ ಬೊಂಬಾಯಿ ರಾಜ್ಯದ ರಚನೆಗೆ ಒಪ್ಪಿಗೆ ನೀಡಲಾಯಿತು.

* * * *

೨೧. ದ್ವಿಭಾಷಾ ರಾಜ್ಯಗಳು

ದ್ವಿಭಾಷಾ ರಾಜ್ಯ ರಚನೆಯ ಸೂತ್ರವು ನಿಜಕ್ಕೂ ಅತ್ಯಂತ ಅಂದದ ಹಾಗೂ ದಿಟ್ಟತನದ ಶಿಫಾರಸ್ಸು ಎನ್ನಬಹುದು. ಆಂತರಿಕ ಶಾಂತಿಪಾಲನೆ ಹಾಗೂ ಸಹಬಾಳ್ವೆಯ ಶ್ರದ್ಧಾಪೂರ್ವಕ ಪ್ರಯೋಗವೆಂದು ಹೇಳಬಹುದು. ಈ ತತ್ತ್ವಗಳನ್ನೇ ಭಾರತ ದೇಶದ ಹೊರಗೆ, ಒಳಗೆ ನಿತ್ಯ ಬೋಧಿಸುತ್ತಿದ್ದುದು. ದೇಶದ ಬಹಳಷ್ಟು ಮಂದಿ ಪ್ರಜ್ಞಾವಂತರು ಈ ಸೂತ್ರವನ್ನು ದೇಶದಾದ್ಯಂತ ಅನ್ವಯಿಸಿ ರಾಜ್ಯಗಳ ಬದಲು ದ್ವಿಭಾಷಾ ರಾಜ್ಯಗಳನ್ನು ರಚಿಸುವಂತೆ ಸೂಚಿಸಿದರು. ಆಗ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಹಿಮಾಚಲ ಪ್ರದೇಶ, ಮಣಿಪುರ, ತ್ರಿಪುರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿಂಡಿವಿ ದ್ವೀಪಗಳು ಚಿಕ್ಕ ಪ್ರಾಂತ್ಯಗಳೆನಿಸುವ ಕಾರಣ, ೯ ರಾಜ್ಯಗಳನ್ನಾಗಿ ರಚಿಸಿ ಅವುಗಳ ರಾಜಧಾನಿಗಳು ಕಲ್ಕತ್ತಾ (ಅಸ್ಸಾಂ ಮತ್ತು ಬಂಗಾಳ), ಹೈದರಾಬಾದ್ (ಆಂಧ್ರ ಮತ್ತು ಕರ್ನಾಟಕ), ಮದ್ರಾಸ್ (ಮದ್ರಾಸ್ ಮತ್ತು ಕೇರಳ), ಜಮ್‌ಷೆಡ್‌ಪುರ (ಬಿಹಾರ ಮತ್ತು ಒರಿಸ್ಸ), ಭೋಪಾಲ್ (ಮಧ್ಯಪ್ರದೇಶ), ಲಕ್ನೋ (ಉತ್ತರ ಪ್ರದೇಶ), ಜೈಪುರ್ (ಪಂಜಾಬ್ ಮತ್ತು ರಾಜಾಸ್ತಾನ್), ಬೊಂಬಾಯಿ (ಮಹಾರಾಷ್ಟ್ರ ಮತ್ತು ಗುಜರಾತ್) ಮತ್ತು ಶ್ರೀನಗರ (ಜಮ್ಮು ಮತ್ತು ಕಾಶ್ಮೀರ). ನಾಗಾಲ್ಯಾಂಡ್ ಮತ್ತು ಕಾಶ್ಮೀರಗಳನ್ನು ಅಕ್ಕಪಕ್ಕದ ರಾಜ್ಯಗಳೊಂದಿಗೆ ಮುಂದಿನ ದಿನಗಳಲ್ಲಿ ವಿಲೀನಗೊಳಿಸಬಹುದು. ಈ ರಾಜ್ಯಗಳ ಜನಸಂಖ್ಯೆ ಹಾಗೂ ವಿಸ್ತೀರ್ಣಗಳನ್ನು ಆಯಾ ರಾಜಧಾನಿಗಳ ಹೆಸರಿನ ಮುಂದೆ ೧೯೬೧ರ ಜನಸಂಖ್ಯೆ ಸಮೀಕ್ಷೆಯ ಆಧಾರದಲ್ಲಿ ಕೆಳಗೆ ನೀಡಿದೆ.

೧.	ಭೋಪಾಲ್	೩.೨೪ ಕೋಟಿ,	೪.೪೩	ಲಕ್ಷ ಚ.ಮೀಟರ್
೨.	ಬೊಂಬಾಯಿ	೬.೦೨ ಕೋಟಿ,	೪.೯೪	ಲಕ್ಷ ಚ.ಮೀಟರ್
೩.	ಕೋಲ್ಕತ್ತ	೪.೭೪ ಕೋಟಿ,	೩.೦೬	ಲಕ್ಷ ಚ.ಮೀಟರ್
೪.	ಹೈದರಾಬಾದ್	೫.೯೬ ಕೋಟಿ,	೪.೬೭	ಲಕ್ಷ ಚ.ಮೀಟರ್
೫.	ಜೈಪುರ್	೪.೦೪ ಕೋಟಿ,	೪.೬೪	ಲಕ್ಷ ಚ.ಮೀಟರ್
೬.	ಜಮ್‌ಷೆಡ್ಪುರ	೬.೩೯ ಕೋಟಿ,	೩.೩೦	ಲಕ್ಷ ಚ.ಮೀಟರ್
೭.	ಲಕ್ನೋ	೭.೩೭ ಕೋಟಿ,	೨.೯೪	ಲಕ್ಷ ಚ.ಮೀಟರ್

೮.	ಮದ್ರಾಸ್	೫.೦೬ ಕೋಟಿ,	೧.೬೯ ಲಕ್ಷ ಚ.ಮೀಟರ್
೯.	ಶ್ರೀನಗರ	೨.೨೩ ಕೋಟಿ,	೦.೩೬ ಲಕ್ಷ ಚ.ಮೀಟರ್

ಈ ರಾಜ್ಯಗಳು ಬಹುಮಟ್ಟಿಗೆ ದ್ವಿಭಾಷಾ ರಾಜ್ಯಗಳಾಗಿದ್ದು, ಗಾತ್ರದಲ್ಲಿ ಮಧ್ಯಮ ಹಾಗೂ ಆರ್ಥಿಕ, ಹಣಕಾಸು ವಿಚಾರಗಳಲ್ಲಿ ಉತ್ತಮ ರಾಜ್ಯಗಳೆನ್ನಬಹುದು.

* * * *

೨೨. ಯುವಜನಾಂಗದ ಅಭಿಪ್ರಾಯ

ಪ್ರಸ್ತುತ ವರ್ಷದ ಜೂನ್–ಜುಲೈನಲ್ಲಿ ಈ ಲೇಖಕನಿಗೆ ಭಾರತದ ಸುಮಾರು ೫೫೦ ಮಂದಿ ಯುವಕರನ್ನು ಭೇಟಿಮಾಡಿ ಅವರ ಅಭಿಪ್ರಾಯ ಕೇಳುವ ಅವಕಾಶ ದೊರಕಿತು. ಅವರು ಭಾರತದ ಎಲ್ಲ ಭಾಗಗಳಿಂದ – ಅಂದರೆ ಕಾಶ್ಮೀರದಿಂದ ಕೇರಳದವರೆಗೆ, ಗುಜರಾತ್‌ನಿಂದ ಅಸ್ಸಾಂವರೆಗೆ ಎಲ್ಲ ರಾಜ್ಯಗಳಿಂದ– ಬಂದವರಾಗಿದ್ದವರಲ್ಲಿ ಇಂಜಿನಿಯರ್‌ಗಳು – ರಾಸಾಯನಿಕ, ಸಿವಿಲ್, ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ವಿಭಾಗದವರಾಗಿದ್ದು, ದೇಶದ ಪ್ರಮುಖ ವಿಶ್ವವಿದ್ಯಾಲಯಗಳಿಂದ ಹಾಗೂ ೫ ಐ.ಐ.ಟಿ.ಗಳಿಂದ ಕರೆಸಲ್ಪಟ್ಟವರಾಗಿದ್ದರು. ಅವರನ್ನು ೫ ಮಂದಿಯ ಗುಂಪುಗಳಲ್ಲಿ ಕಲೆಹಾಕಿ ಅವರು ಮುಕ್ತವಾಗಿ, ನೇರವಾಗಿ ಹಾಗೂ ವಸ್ತುನಿಷ್ಠವಾಗಿ ಅನೇಕ ವಿಷಯಗಳ ಬಗ್ಗೆ ಚರ್ಚಿಸಲು ತಿಳಿಸಲಾಯಿತು. ಅದರೊಂದಿಗೆ ಸೇರಿಸಿದ ವಿಷಯಗಳೆಂದರೆ, (ಅ) ರಾಜ್ಯಗಳ ಪುನರ್ವಿಂಗಡಣೆ – ಆಂಧ್ರಪ್ರದೇಶ ರಚನೆಯಿಂದ ಪಂಜಾಬ್‌ವರೆಗೆ, (ಆ) ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಕಾರ್ಯವೈಖರಿ ಮತ್ತವರ ಮುಂದುವರಿಕೆ ಕುರಿತು, (ಇ) ರೂಪಾಯಿ ಅಪಮೌಲ್ಯೀಕರಣಗೊಳಿಸಿದ ವಿಚಾರ (ಈ) ಹಿಂದಿಯನ್ನು ಭಾರತದ ಆಡಳಿತ ಭಾಷೆಯನ್ನಾಗಿ ಮಾಡುವ ವಿಚಾರ. ಈ ವಿದ್ಯಾರ್ಥಿಗಳ ಅಭಿಪ್ರಾಯಗಳು ಭಾಷಾವಾರು ಪ್ರಾಂತರಚನೆಯ ವಿರುದ್ಧವಾಗಿದ್ದಿತು. ಕೆಲವರು, ವಲಯಗಳ ರಚನೆಯನ್ನು ಭಾಷಾವಾರು ರಾಜ್ಯಗಳ ರಚನೆಯ ಪ್ರಸ್ತಾಪಕ್ಕೆ ಬದಲಾಗಿ ಯೋಚಿಸುವ ಅಭಿಪ್ರಾಯ ನೀಡಿದರು. ಅವರೆಲ್ಲರೂ ಗಡಿ ವಿವಾದಗಳನ್ನು ಮತ್ತೆ ಮತ್ತೆ ಮುಂದಿಟ್ಟು ಶಾಂತಿ, ನೆಮ್ಮದಿ, ಐಕಮತ್ಯ ಹಾಳುಮಾಡುವ ಶಕ್ತಿಗಳನ್ನು ಹತ್ತಿಕ್ಕಬೇಕೆಂದು ಅಭಿಪ್ರಾಯಪಟ್ಟರು. ಪಂಜಾಬ್ ವಿಭಜನೆಯನ್ನು ಅವರು ಒಪ್ಪಿಕೊಳ್ಳಲಿಲ್ಲ. ಈ ಕಾರಣಗಳಿಗಾಗಿ ಅಲ್ಲದೆ ಮೊದಲಿನಿಂದಲೂ ಈ ಲೇಖಕನು ದ್ವಿಭಾಷಾ ರಾಜ್ಯಗಳ ರಚನೆಗೆ ಹೆಚ್ಚು ಮಹತ್ವ ನೀಡುತ್ತ ಬಂದುದನ್ನು ಗಮನಿಸಬಹುದಾಗಿದೆ.

* * * *

೨೩. ಮುಂದಿರಿಸಿದ ಹೆಜ್ಜೆಗಳು

ದೇಶದ ಹಿತದೃಷ್ಟಿಯಿಂದ ಅಂತಹ ಪ್ರಸ್ತಾವಗಳನ್ನು ಕಾರ್ಯಗತಗೊಳಿಸಲು ಧೈರ್ಯ, ಸಮರ್ಥ ಹಾಗೂ ನಿಶ್ಚಿತಾಭಿಪ್ರಾಯವುಳ್ಳ ಜನರ ಅಗತ್ಯ ದೇಶಕ್ಕಿದೆ. ಪ್ರಧಾನ ಮಂತ್ರಿ ನೆಹರು ಅಂತಹ ಒಬ್ಬ ದಿಟ್ಟ ಹಾಗೂ ಜನಾನುರಾಗಿ ನಾಯಕರು. ಆದರೆ ಈ ವಿಷಯದಲ್ಲಿ ಅವರು ಕಾಂಗ್ರೆಸ್ ಪಕ್ಷದ ಆಂತರಿಕ ಒತ್ತಡಗಳಿಗೆ ಮಣಿದು, ದೇಶದ ಹಿತವನ್ನು ಕೈಬಿಡುವಂತಾಯಿತು. ಪ್ರಜಾಪ್ರಭುತ್ವದಲ್ಲಿ, ದೇಶದ ಭವಿಷ್ಯವನ್ನು ಕುರಿತಾದ ಪ್ರಮುಖ ಅಂಶಗಳ ಬಗ್ಗೆ ರಾಷ್ಟ್ರನಾಯಕರುಗಳು ದೃಢಮನಸ್ಸಿನಿಂದ ಜನರನ್ನು ಮುನ್ನಡೆಸಬೇಕು, ಅಗತ್ಯವೆನಿಸಿದರೆ ಅಧಿಕಾರಿಯುತವಾಗಿಯಾದರೂ ಗುರಿ ತಲುಪಬೇಕು. ಆದರೆ ನೆಹರು ಅತಿ ಹೆಚ್ಚೆನಿಸುವಷ್ಟು ಪ್ರಜಾಪ್ರಭುತ್ವವಾದಿ. ಬೃಹತ್ ದ್ವಿಭಾಷಾ ಬೊಂಬಾಯಿ ಪ್ರಯೋಗದಲ್ಲಿ, ಕಾಂಗ್ರೆಸ್ ನಾಯಕರು ರಾಜಕೀಯವಾಗಿ ಸಾಕಷ್ಟು ಪರಿಪಕ್ವವಾಗಿರದ ಕಾರಣ ವಿರೋಧಪಕ್ಷಗಳ ದಾಳಿಯನ್ನು ಎದುರಿಸಲಾರದೆ, ಪ್ರಧಾನಮಂತ್ರಿಯವರಿಗೆ ಬೆಂಬಲ ನೀಡದೆ ಹೋದುದು, ಭಾಷೆಯೆಂಬ ಪೆಡಂಭೂತವನ್ನು ಬಂಧಮುಕ್ತಗೊಳಿಸಿ ಅದು ಮಹಾರಾಷ್ಟ್ರ ಮತ್ತು ಗುಜರಾತ್ ಎಂಬ ಪ್ರತ್ಯೇಕ ಭಾಷಾರಾಜ್ಯಗಳಾಗಲು ದಾರಿಮಾಡಿಕೊಟ್ಟಂತಾಯಿತು. ಆ ಬಳಿಕ ಭಾಷಾಸಂಕುಚಿತತೆಯು ವಿಧವಿಧ ಹೋರಾಟಗಳಿಗೆ ಎಡೆಮಾಡಿಕೊಟ್ಟು ರಾಷ್ಟ್ರದ ಹಿತಕ್ಕೆ ಧಕ್ಕೆಯಾಯಿತು. ಸಮಸ್ಯೆ ಈಗಲಾದರೂ ಬಗೆಹರಿವುದೇ? ಈಗ ಮತ್ತೊಂದು ಹೊಸ ಹೋರಾಟ ಬೆಳಗಾಂ, ಕಾರವಾರ ಮತ್ತು ನಿಪ್ಪಾಣಿ ವಿಲೀನಕ್ಕೆ ಅಣಿಯಾಗಿದೆ. ಹಳೆಯ ಪೋರ್ಚುಗೀಸ್ ಗೋವಾ ಕೂಡಾ. ಡಂಗ್ ಜಿಲ್ಲೆಯ ವರ್ಗಾವಣೆಯ ವಿಷಯವೂ ಎದ್ದು ಕೂತಿದೆ. ಗುಜರಾತ್‌ನಿಂದ ಸೌರಾಷ್ಟ್ರ ಹಾಗೂ ಸೂಕ್ಷ್ಮ ಗಡಿ ಪ್ರದೇಶವಾದ ಕಚ್‌ಗಳೂ ಪ್ರತ್ಯೇಕಿಸಲ್ಪಡಬೇಕೆನ್ನುವ ಕೂಗು ಕೇಳಿಸುತ್ತಿದೆ. ಮೈಸೂರು(ಕರ್ನಾಟಕ) ರಾಜ್ಯವನ್ನು ಮತ್ತೆ ವಿಭಜಿಸುವ ಮಾತು ಕೇಳಿಬರುತ್ತಿದೆ.

* * * *

೨೪. ಪಂಜಾಬ್ ವಿಭಜನೆಯೇಕೆ ?

ನಾವು ಅಲ್ಲಿಯೇ ನಿಲ್ಲಲಿಲ್ಲ. ಈ ಪ್ರತಿಯೊಂದು ನಿಲುಗಡೆಯೂ ಮುಂದೆ ಅವಕಾಶ ಸಿಕ್ಕಾಗ ಹೆಚ್ಚು ದಕ್ಕಿಸಿಕೊಳ್ಳಲು ಎಡೆಮಾಡಿಕೊಡುತ್ತದೆ. ಭಾರತ ದೇಶದ ಸಹಸ್ರಾರು ಚದರ ಕಿ.ಮೀ. ಪ್ರದೇಶವು ಕಮ್ಯೂನಿಸ್ಟ್ ಚೀನಾದ ವಶದಲ್ಲಿದೆ ಎಂದು ಯಾರು ತಾನೆ ಈ ದಿನಗಳಲ್ಲಿ ಯೋಚಿಸುತ್ತಾರೆ? ಗಡಿರಾಜ್ಯ ಪಂಜಾಬ್ ಅನ್ನು ಎರಡು ಪ್ರತ್ಯೇಕ ಭಾಷಾರಾಜ್ಯಗಳಾಗಿ ವಿಭಜಿಸುವ ಕೇಂದ್ರ ಸರ್ಕಾರದ ಪ್ರಸಕ್ತ ಪ್ರಸ್ತಾವವು ತಪ್ಪು ದೃಷ್ಟಿಕೋನದಿಂದ ಆರಂಭಿಸಲ್ಪಟ್ಟು ಮುಂದೆ ಅನೇಕ ಸಮಸ್ಯೆಗಳಿಗೆ ನಾಂದಿಯಾಗಲಿದೆ. ಭಾರತ – ಪಾಕಿಸ್ತಾನ್ ನಡುವಣ ೧೯೬೫ ರ ೨೨ ದಿನ ಘೋರ ಯುದ್ಧದಲ್ಲಿ ವೀರಾವೇಶದಿಂದ ಯುದ್ಧ ಮಾಡಿದ ಸಿಖ್ ಯೋಧರ ಕಾರಣದಿಂದ ಅಕಾಲಿ ದಳದ ಪಂಜಾಬಿ ಸುಬ ಬೇಡಿಕೆಯನ್ನು ಈ ರೀತಿ ಪೂರೈಸುವುದಾಗಿರಬೇಕು. ಈ ವಿಭಜನೆಯಲ್ಲದೆ, ಆ ಜನಾಂಗಕ್ಕೆ ಬೇರಾವ ರೀತಿಯ ಕೊಡುಗೆಯನ್ನೂ ನೀಡಲು ಸಾಧ್ಯವಿರಲಿಲ್ಲವೇ? ಆದರೂ ಅಲ್ಲೊಂದು ಬೆಳ್ಳಿಯ ಗೆರೆ ಕಾಣಿಸುತ್ತದೆ. ಪಂಜಾಬ್ ಆಯೋಗ ರಚನೆಯ ಪ್ರಕಟಣೆ ಹೊರಬಿದ್ದು ಎರಡು ದಿನಗಳ ನಂತರ 'ಪೂನಾ ಹೆರಾಲ್ಡ್' ಪತ್ರಿಕೆಯ ಸಂಪಾದಕೀಯದಲ್ಲಿ,

''ಸಂಕುಚಿತ ಮನೋಭಾವವು ದೇಶಕ್ಕೆ ಶಾಪವಾಗಿ ಪರಿಣಮಿಸಿದೆಯೆನ್ನುವುದರಲ್ಲಿ ಸಂಶಯವಿಲ್ಲ. ದೇಶದ ಮೇಲಿನ ಪರಿಣಾಮವೆಂಬಂತೆ ಭಾಷಾಧಾರಿತ ವಿಭಜನೆಯು ಅದರ ಫಲಸ್ವರೂಪವಾಗಿ ಆರಂಭಗೊಂಡಿದೆ.

ನಾವು ನಮ್ಮ ರಾಜ್ಯದ ವಿಷಯವಲ್ಲದೆ ಬೇರೇನನ್ನೂ ಚರ್ಚಿಸದ ದಿನಗಳು ಬಂದಿವೆ. ದೇಶದ ಬಗ್ಗೆ ಕಾಳಜಿಯಿದ್ದೂ ಕೂಡ."

"ದೇಶವು ಭಾಷಾ ಗೊಂದಲ, ಭಿನ್ನಾಭಿಪ್ರಾಯಗಳಿಂದಾಗಿ ಹರಿದು ಛಿದ್ರವಾಗುತ್ತಿರುವ ಈ ಸಮಯದಲ್ಲಿ ವಾಸ್ತವವಾಗಿ ಜನರನ್ನು ಒಟ್ಟುಗೂಡಿಸುವ ಸಾಮಾನ್ಯ ಬಂಧದಂತೆ ಸ್ನೇಹ ಹಾಗೂ ಏಕತೆಗಳ ಪರಿಣಾಮ ಬೀರುವ ಮಹಾ ಪರಿವರ್ತನೆ ಆಗಬೇಕಿದೆ.

ನಾವು ಒಂದೇ ದೇಶದ ಜನರೆಂಬ ನಂಬಿಕೆಯೇ ಬರದಂತಹ ಸ್ಥಿತಿ ನಿರ್ಮಾಣವಾಗಿರುವ ಕಾರಣ ನಾವು ಪರಸ್ಪರ ದುರಭಿಪ್ರಾಯಗಳಿಂದಲೂ ಭಿನ್ನಾಭಿಪ್ರಾಯಗಳಿಂದಲೂ ಕಾಣಿಸಿಕೊಳ್ಳುತ್ತಿದ್ದೇವೆ".

೨೫. ಭವಿಷ್ಯದಲ್ಲೇನು ?

ಹೊಸ ಪಂಜಾಬ್ ರಾಜ್ಯವು ಮತೀಯ ಬಣ್ಣವನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಹೊಂದಲಿದೆ. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್, ಕಾಂಗ್ರೆಸ್ ಪಾಕಿಸ್ತಾನದ ಉದಯಕ್ಕೆ ಒಪ್ಪಿಗೆ ನೀಡಿದಲ್ಲಿ ಹಿಂದುಸ್ತಾನ ಮತ್ತು ಪಾಕಿಸ್ತಾನಗಳು ಅಣ್ಣ–ತಮ್ಮಂದಿರಂತೆ ಸೌಹಾರ್ದದಿಂದ ಇರಲು ಸಾಧ್ಯವೆಂಬ ಆಶ್ವಾಸನೆಯನ್ನು ಪದೇ ಪದೇ ನೀಡುತ್ತಿತ್ತು. ನಮ್ಮ ನೆರೆಹೊರೆಯೊಂದಿಗೆ ನಾವು ಏನು ಅನುಭವಿಸುತ್ತಿದ್ದೇವೆ ಮತ್ತು ಭವಿಷ್ಯದಲ್ಲಿ ಏನಾಗಬಹುದು ಎಂಬುದನ್ನು ಯಾವ ಭಾರತೀಯ ಪ್ರಜೆಗೂ ತಿಳುವಳಿಕೆ ನೀಡುವ ಅಗತ್ಯವೇ ಕಾಣದು. ಸಹಬಾಳ್ವೆ, ಅದೂ ಆಂತರಿಕವಾಗಿ, ಮತೀಯ ಅಭಿಮಾನಗಳ ರಾಜ್ಯದೊಂದಿಗೆ ಜಾತ್ಯತೀತ ಭಾರತದಲ್ಲಿ ಹೆಚ್ಚು ಕಾಲ ಇರದು. ಒಂದು ಕಾಲಕ್ಕೆ ಮತೀಯ ಚಿಂತನೆಯ ರಾಜ್ಯವು ಭಾರತದಿಂದಲೇ ಪ್ರತ್ಯೇಕಗೊಳ್ಳುವ ನಿರ್ಧಾರ ಹೊಂದಿ, ಭಾರತ ಮತ್ತು ಪಶ್ಚಿಮ ಪಾಕಿಸ್ತಾನಗಳ ನಡುವಿನ ಸ್ವತಂತ್ರ ರಾಷ್ಟ್ರವಾಗಿ ಬಹುಶಃ ಭಾರತ ಮತ್ತು ಚೀನಾಗಳ ನಡುವೆ ಭೂತಾನ, ಸಿಕ್ಕಿಂ ಹಾಗೂ ನೇಪಾಳಗಳು ಸ್ವತಂತ್ರವಾಗುಳಿದಿರುವಂತೆ ತಾನೂ ಇರಬಹುದೆಂದು ಕಾಣುತ್ತದೆ. ಮುಂದೊಂದು ದಿನ ಉತ್ತರ ಪ್ರದೇಶದಿಂದ ಆಗ್ರ ರಾಜ್ಯ ರಚನೆಯ ಬೇಡಿಕೆ ಮುಂದೊಡ್ಡಲ್ಪಟ್ಟು ಸುಮಾರು ೫೧.೩೪೬ ಚದರ ಮೈಲಿ ವಿಸ್ತೀರ್ಣದ ರಾಜ್ಯ ಹಾಗೂ ಉಳಿಕೆ ೭೪,೯೮ ಚದರ ಮೈಲಿ ವಿಸ್ತೀರ್ಣದ ಉಳಿಕೆ ಪ್ರದೇಶವಾಗಿ, ಅಲ್ಪಸಂಖ್ಯಾತರ ಶಿಫಾರಸ್ಸು ಮಾಡಿದ ಸರ್ದಾರ್ ಪಣಿಕ್ಕರ್‌ರ ಅಭಿಪ್ರಾಯದಂತೆಯೇ ಆಗಬಹುದಲ್ಲವೇ? ಮಹಾರಾಷ್ಟ್ರದಿಂದ ವಿದರ್ಭ ಹಾಗೂ ಕೊಂಕಣಗಳ ವಿಭಜನೆಯ ವಿಚಾರವೇನು? ವಿದರ್ಭಕ್ಕೆ ಎಸ್.ಆರ್.ಸಿ. ಶಿಫಾರಸ್ಸು ಮಾಡಿದ್ದರೆ, ಕೊಂಕಣಕ್ಕಾಗಿ ೧೯೪೮ರಲ್ಲಿ ಭಾಷಾವಾರು ಪ್ರಾಂತ ಆಯೋಗಕ್ಕೆ ಮನವಿ ಸಲ್ಲಿಸಲಾಗಿದ್ದಿತು. ಗೋವಾ ಹಾಗೂ ಕಾರವಾರಗಳ ವಿಲೀನದ ವಿಷಯವು ಕೊಂಕಣದ ರಚನೆಯೊಂದಿಗೆ ಪರಿಹರಿಸಲ್ಪಡಬಹುದೇನೋ. ಒಟ್ಟಿನಲ್ಲಿ ಪ್ರತಿ ರಾಜ್ಯವೂ ಹೆಚ್ಚಿನ ಸ್ವಾಯತ್ತತೆಗಾಗಿ ಮತ್ತೆ ಮತ್ತೆ ವಿಭಜನೆಯ ಗೀಳನ್ನು ಮುಂದೆ ತೋರ್ಪಡಿಬಹುದು. ಅದರಿಂದ ಕೇಂದ್ರ ಮತ್ತಷ್ಟು ಬಲಹೀನವಾಗುವುದು ನಿಸ್ಸಂಶಯ. ಉತ್ತರದ ರಾಜ್ಯಗಳವರ ಮೇಲುಗೈಗೆ ಹಾಗೂ ದಕ್ಷಿಣದ ಜನರಿಗೆ ಅವಕಾಶ ವಂಚನೆಯಾಗುತ್ತಿರುವ ಕಾರಣವೊಡ್ಡಿ ದಕ್ಷಿಣದ ರಾಜ್ಯಗಳು ಪ್ರತ್ಯೇಕತಾ

ವಾದಿಗಳಾಗುವುದರಲ್ಲಿ ಅನುಮಾನಪಡುವಂತದ್ದೇನೂ ಇಲ್ಲ. ಅವರು ತಾವು ಕಳೆದೆರಡು ದಶಕಗಳಿಂದ ಹಿಂದಿ ಹಾಗೂ ಯು.ಪಿ. ಪ್ರಧಾನ ಮಂತ್ರಿಗಳ ಕೈಕೆಳಗೆ ಇದ್ದೇವೆ ಎಂಬ ಅಸಹನೆಯನ್ನು ವ್ಯಕ್ತಪಡಿಸಲು ಸಾಧ್ಯ. (ಕ್ಯಾಬಿನೆಟ್) ಸಚಿವಸಂಪುಟ ರಚನೆಯಲ್ಲಿಯೂ ವ್ಯಕ್ತಿಗಳ ಸಾಮರ್ಥ್ಯ, ಅರ್ಹತೆಗಳ ಬದಲು ಪ್ರದೇಶ, ಭಾಷೆ, ಮತ, ಪಂಗಡ ಇತ್ಯಾದಿಗಳೇ ಮಾನದಂಡವಾದರೂ ಆಶ್ಚರ್ಯವಿಲ್ಲ. ಇಂತಹ ರಾಜಕೀಯ ದುರಂತಗಳಿಂದ ನಮ್ಮನ್ನು ಸ್ವರ್ಗದ ದೇವರೇ ಕಾಪಾಡಬೇಕು !

* * * *

೨೬. ಅಧಿಕೃತ ಭಾಷೆ (ಆಡಳಿತ ಭಾಷೆ)

ಮುಂದೆ ನಮ್ಮ ಗಮನ ಸೆಳೆಯುವ ಪ್ರಶ್ನೆಯೆಂದರೆ ಅಧಿಕೃತ ಭಾಷೆಯದು. ದೇವನಾಗರೀ ಲಿಪಿಯಲ್ಲಿರುವ ಹಿಂದಿ ಭಾಷೆಯು ದೇಶದ ಸರ್ವಸಾಮಾನ್ಯ ಅಥವಾ ರಾಷ್ಟ್ರಭಾಷೆಯಾಗಿರುವುದು. ಆದರೆ ೧೯೫೦ರಿಂದ ೧೫ ವರ್ಷಗಳ ಕಾಲ ಇಂಗ್ಲಿಷ್ ಭಾಷೆಯನ್ನು ಭಾರತ ಸರ್ಕಾರ ಆಡಳಿತ ಭಾಷೆಯಾಗಿ ಬಳಸುವುದು.

ಸಂವಿಧಾನದಲ್ಲಿ ಹಿಂದಿಗೆ ಸ್ಥಾನ ಕಲ್ಪಿಸಿರುವುದನ್ನು ಜಾರಿಗೊಳಿಸುವಲ್ಲಿ ಹಿಂದಿ ಭಾಷೆ ಮಾತನಾಡದ ಪ್ರದೇಶಗಳ ಜನರ ಪ್ರತಿಕ್ರಿಯೆ ಏನಿರಬಹುದೆಂಬುದನ್ನು ನಾವು ಬಲ್ಲೆವು. ಸಂವಿಧಾನದ ವಿಧಿ ೩೫೧ ಹೇಳುವಂತೆ, “ಹಿಂದಿಯನ್ನು ಹೆಚ್ಚು ಪ್ರಚುರಗೊಳಿಸಿ ವ್ಯಾಪಕವಾಗಿ ಎಲ್ಲೆಡೆ ಬಳಸುವಂತೆ ಮಾಡುವ ಜವಾಬ್ದಾರಿ ಭಾರತ ಸರ್ಕಾರದ್ದಾಗಿರುತ್ತದೆ. ಅದರ ಬೆಳವಣಿಗೆಯು ಸಂಪರ್ಕಭಾಷೆಯಾಗಿ ರೂಪುಗೊಂಡು, ಭಾರತದ ಮಿಶ್ರ ಸಂಸ್ಕೃತಿಯನ್ನೆಲ್ಲ ಮೈಗೂಡಿಸಿಕೊಂಡು, ಅವುಗಳನ್ನು ಶ್ರೀಮಂತಗೊಳಿಸಿ, ಹಿಂದೂಸ್ತಾನಿ ಹಾಗೂ ೮ನೇ ಪರಿಚ್ಛೇದದಲ್ಲಿ ನಮೂದಿಸಿರುವ ಭಾರತದ ಇತರ ಭಾಷೆಗಳ ಬೆಳವಣಿಗೆ, ಶೈಲಿ, ಆಡುವ ರೀತಿಗಳಲ್ಲಿ ಯಾವುದೇ ಬದಲಾವಣೆಯನ್ನು ತರದಂತೆ, ಬೇಕೆಂದರೆ ಸಂಸ್ಕೃತ ಮತ್ತು ಉಳಿದ ಭಾಷೆಗಳಿಗೂ ಇದರ ಅನುಕೂಲತೆಯನ್ನು ಪಡೆಯಲು ಅನುವಾಗುವುದು”.

ಈ ಎಲ್ಲ ಅವಕಾಶಗಳೂ ಹಿಂದಿಯು ಇಂಗ್ಲೀಷ್‌ನ ಬದಲು ಕೇಂದ್ರದ ಅಧಿಕೃತ ಭಾಷೆಯಾಗಲು ಸಾಕಷ್ಟು ಕೊರತೆಗಳಿರುವುದಾಗಿ ಒಪ್ಪಿಕೊಂಡಂತಾಗುವುದಾದರೂ, ರಾಷ್ಟ್ರೀಯತಾವಾದಿಗಳೆಂದು ಸೋಗುಹಾಕುವ ಶಕ್ತಿಗಳು ಹೆಚ್ಚು ಜನರು ಮಾತನಾಡುವ ಹಿಂದಿಯನ್ನು ಸರ್ವಸಮ್ಮತ ಭಾಷೆ ಎಂದೊಪ್ಪಲು ಇಷ್ಟಪಡದೆ ಬೇರಾವುದೇ ಸಾಮಾನ್ಯ ಭಾಷೆಗೆ ಒತ್ತಾಯಿಸಿದುವು. ಕಳೆದ ೧೫ ವರ್ಷಗಳಲ್ಲಿ ಇಂಗ್ಲಿಷ್ ವಿಶ್ವದ ಭಾಷೆಯಾಗಿ ಅಂತಾರಾಷ್ಟ್ರೀಯ ಮಾನ್ಯತೆ ಗಳಿಸಿರುವುದು ನಮ್ಮ ಊಹೆಗೂ ಮೀರಿದ ಬೆಳವಣಿಗೆ. ಇಂಗ್ಲಿಷ್ ಈಗ ಆಧುನಿಕ ಚಿಂತನೆಗಳ ಅತ್ಯುತ್ತಮ ಸಂವಾಹಕ ಭಾಷೆಯಾಗಿದ್ದು ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನಗಳ ಬೋಧನೆ, ಅರಿವು ಆ ಭಾಷೆಯ ಮೂಲಕ ಸರಳವೂ, ಸುಲಭವೂ ಆಗಿದೆ. ದಕ್ಷಿಣಭಾರತವು ಹಿಂದಿ ಭಾಷೆ ಅರ್ಥೈಸಿಕೊಳ್ಳುವುದರಲ್ಲಿ, ರೂಢಿಗೊಳಿಸುವಲ್ಲಿ ಆಗುವ ತೊಂದರೆಗಳಿಂದಾಗಿ ಅದರ

ಬದಲು ಇಂಗ್ಲಿಷ್‌ನ್ನೇ ಅನಧಿಕೃತವಾದರೂ ಆಡಳಿತಭಾಷೆಯಾಗಿ ಅವಲಂಬಿಸಿದೆ. ಡಾ. ಸುನೀಲ್‌ಕುಮಾರ್ ಚಟರ್ಜಿ ಮತ್ತು ಡಾ. ಪಿ. ಸುಬ್ಬರಾಯನ್‌ರವರು ೧೯೫೫–೫೬ ರಲ್ಲಿ ಸಂವಿಧಾನದ ವಿಧಿ ೩೪೪ರನ್ವಯ ನೇಮಕಗೊಂಡ ಅಧಿಕೃತ ಭಾಷಾ (ರಾಷ್ಟ್ರಭಾಷಾ) ಆಯೋಗದ ವರದಿಯಲ್ಲಿ ಹಿಂದಿಯ ಬಗ್ಗೆ ತಮ್ಮ ಅಸಮ್ಮತಿಯನ್ನು ತೀವ್ರವಾಗಿ ವಾದಿಸಿರುತ್ತಾರೆ. ಡಾ. ಚಟರ್ಜಿ ತಮ್ಮ ಅಲ್ಪಸಂಖ್ಯಾತ ವರದಿಯಲ್ಲಿ ಉಲ್ಲೇಖಿಸಿರುವಂತೆ, “ಒಂದು ಭಾಷೆಯು ಆಜ್ಞೆಗಳ ಮೂಲಕ ಬೆಳೆಯಲಾರದು ಮತ್ತು ಆ ಭಾಷೆಯು ಪೂರ್ಣವಾಗಿ ಉಪಯೋಗಿಸಲ್ಪಡುವಂತೆ ಬೆಳೆಯುವ ಮೊದಲೇ ಕಾಲಮಿತಿಯನ್ನು ಹಾಕಿಕೊಳ್ಳುವುದು ವ್ಯರ್ಥಪ್ರಯತ್ನವೂ ಹಾಗೂ ಅಸಹನೀಯವೂ ಎನಿಸುತ್ತದೆ. ಶ್ರೀ ಕೆ. ಎಂ. ಮುನ್ಷಿಯವರು ನಿಖರವಾಗಿ ಈ ಹಿಂದೆ ತಿಳಿಸಿರುವಂತೆ, “ಹಿಂದಿಯು ವಿದ್ಯಾವಂತ ಜನರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಶಕ್ತ ಸಾಧನವಾಗಿ ಪರಿಗಣಿಸುವವರೆಗೆ ಅದು ತಾನು ಶಕ್ತಿಯುತ ಭಾಷೆಯಾಗಿ ಇಂಗ್ಲಿಷ್‌ನ್ನು ಬದಲಿಸಲು ಆಗದು”. ರಾಜಕೀಯ ಹಾಗೂ ಇತರ ವಿಷಯಗಳನ್ನು ಕುರಿತಾದ ಜನರ ಮನೋಭಿಪ್ರಾಯಗಳು ಮೊದಲು ಆಧುನಿಕಗೊಳ್ಳಬೇಕು. ಅವರ ಭಾಷೆ, ವಿಜ್ಞಾನ ಹಾಗೂ ಸಂಸ್ಕೃತಿಗಳಲ್ಲಿ ಉತ್ತಮ ಸಂವಾಹಕವಾಗಲು ಬಹಳಷ್ಟು ಪ್ರಗತಿ ಸಾಧಿಸದೆ ಇದ್ದಲ್ಲಿ ಆಧುನಿಕ ಹಾಗೂ ಪ್ರಗತಿಶಾಲಿ ಜನರ ಮನಸ್ಸು ಬೇರೆಯದನ್ನೇ ಆಲೋಚಿಸುತ್ತದೆ.

ಆದುದರಿಂದ ಈ ವಿಷಯವನ್ನು ಅಂತಿಮವಾಗಿ ತಮ್ಮದೇ ಭಾಷೆ ಬಳಸುವ ರಾಜ್ಯಗಳು ಹಿಂದಿ ಬಳಕೆಯನ್ನು ತಾವಾಗಿ ಇಷ್ಟಪಡುವವರೆಗೆ, ತಮ್ಮ ಬೌದ್ಧಿಕತೆಯನ್ನು ವಿಸ್ತರಿಸುವಲ್ಲಿ ಹಿಂದಿಯು ಸಂವಹನ ಭಾಷೆಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಮತ್ತು ಅಂತರರಾಜ್ಯ ವ್ಯವಹಾರಗಳಲ್ಲಿ ಬಳಸಲು ನಿರ್ಧರಿಸುವವರೆಗೆ ತಾಳ್ಮೆ ಬೇಕಾಗುತ್ತದೆ.

ಡಾ. ಪಿ. ಸುಬ್ಬರಾಯನ್‌ರ ಪ್ರಕಾರ “ಆಯೋಗದ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಬಿ.ಜಿ. ಖೇರ್‌ರವರ ಸಂಯಮದಿಂದ ಕೂಡಿದ ಮಾರ್ಗದರ್ಶನ ಹಾಗೂ ಸಮರ್ಥತೆಯಿಂದಾಗಿ ಆಯೋಗವು ಬಹಳಷ್ಟು ಪುರಾವೆಗಳನ್ನು, ಅಭಿಪ್ರಾಯಗಳನ್ನು ಸಂಗ್ರಹಿಸಲು ಸಾಧ್ಯವಾಗಿದೆ. ದುರದೃಷ್ಟವಶಾತ್, ಈ ವಿಷಯದಲ್ಲಿ ಸರ್ವಾನುಮತ ಸಾಧಿಸಲಾಗಿಲ್ಲ. ಇದಕ್ಕೆ ಕಾರಣ ಹೆಚ್ಚಿನ ಸಂಖ್ಯೆಯ ಸದಸ್ಯರು ಹಿಂದಿಯೇತರ ರಾಜ್ಯಗಳ ಜನರು ನೀಡಿದ ಅಭಿಪ್ರಾಯಗಳು. ಮುಖ್ಯವಾಗಿ ಬಂಗಾಳ, ಮದ್ರಾಸ್ ಮತ್ತು ಮೈಸೂರ್ ರಾಜ್ಯಗಳು ಚಾರಿತ್ರಿಕ, ವಿಸ್ತೀರ್ಣ ಹಾಗೂ ಜನಸಂಖ್ಯೆ ಮತ್ತು ಪ್ರಗತಿಯಲ್ಲಿ ಮುಂದಿರುವುವು. ಆದರೆ ಅವು ಹಿಂದಿಯನ್ನು ಒಪ್ಪುವುದರಲ್ಲಿ ಸಹಮತ ವ್ಯಕ್ತಪಡಿಸಲಿಲ್ಲ. ನಾನು ನನ್ನ ಅಭಿಪ್ರಾಯಗಳನ್ನು ಆಯೋಗದ ಮುಂದೆ ಸ್ಪಷ್ಟ ಹಾಗೂ ನೇರವಾಗಿ ತಿಳಿಸಿರುವಂತೆ ನನ್ನ ಇತರ ಅನೇಕ ಮಂದಿ ಸಹಯೋಗಿಗಳ

ಅಭಿಪ್ರಾಯಕ್ಕೆ ಭಿನ್ನವಾಗಿದೆ. ನಾನು ಈ ಅಭಿಪ್ರಾಯವನ್ನು ಬದಲಿಸಿಕೊಳ್ಳಲು ಯಾವ ಕಾರಣವೂ ತಿಳಿಯುತ್ತಿಲ್ಲ, ಬದಲಾಗಿ ನಾನು ಸಂಗ್ರಹಿಸಿದ ಮಾಹಿತಿ, ಪುರಾವೆ ಅದರಲ್ಲಿಯೂ ಬಂಗಾಳ, ಮದ್ರಾಸ್ ಮತ್ತು ಮೈಸೂರುಗಳದ್ದು ಹಾಗೂ ಅನೇಕ ಮಂದಿ ಗಣ್ಯರ ಅಭಿಪ್ರಾಯಗಳು ನನ್ನ ಅನಿಸಿಕೆಯನ್ನು ದೃಢಪಡಿಸಿವೆ. ನನ್ನ ಸಹೋದ್ಯೋಗಿಗಳು ಈ ಅಭಿಪ್ರಾಯಗಳನ್ನು ಅವರು ತೀರ್ಮಾನಗಳಿಗೆ ಬರುವ ಸಂದರ್ಭದಲ್ಲಿ ಒಪ್ಪಲು ಸಿದ್ಧರಿಲ್ಲವೆಂಬುದನ್ನು ತಿಳಿಸಲು ನಿರಾಶೆಯೆನಿಸಿದೆ. ಆದರೂ ಡಾ. ಎಸ್. ಕೆ. ಚಟರ್ಜಿಯವರಂತಹ ಸದಸ್ಯರು ಸಮಸ್ಯೆಯ ಗಂಭೀರತೆಯನ್ನು ಅನುಕಂಪದೊಂದಿಗೆ ಹಾಗೂ ಸರಿಯಾದ ತಿಳುವಳಿಕೆಯೊಂದಿಗೆ ನನ್ನಂತೆಯೇ ಅರ್ಥಮಾಡಿಕೊಂಡಿದ್ದು ನನಗೆ ಸಂತಸವನ್ನುಂಟುಮಾಡಿದೆ. ಅನೇಕ ಪ್ರಮುಖ ಅಂಶಗಳ ಬಗ್ಗೆ ನಮ್ಮಿಬ್ಬರ ಅಭಿಪ್ರಾಯ ಹಾಗೂ ಚಿಂತನೆಗಳು ಏಕೀಭವಿಸಿದ್ದುವು".

ಭಾರತದ ಏಕತೆಯ ಬಗ್ಗೆ ತಿಳಿಸುತ್ತ ಅವರು, "ಇತ್ತೀಚಿಗೆ ದೇಶದ ಅನೇಕ ಭಾಗಗಳಲ್ಲಿ ನಡೆದ ಘಟನೆಗಳು ನಮ್ಮ ದೇಶದ ಏಕತೆಯೆಂಬ ಭಂಡಾರವನ್ನು ನಾವು ಜೋಪಾನದಿಂದ ಕಾಪಾಡಿಕೊಂಡು ಬರಬೇಕಿರುವ ಆವಶ್ಯಕತೆಯನ್ನು ತಿಳಿಸಿವೆ. ಆದುದರಿಂದ ಹಿಂದಿಯನ್ನು ಶೀಘ್ರವಾಗಿ ರಾಷ್ಟ್ರಭಾಷೆಯನ್ನಾಗಿ ಮಾಡುವುದಲ್ಲದೆ ಅದನ್ನು ಆದಷ್ಟು ಹೆಚ್ಚು ಎತ್ತರಕ್ಕೇರಿಸುವ ವಿಚಾರವನ್ನು ಪರಿಶೀಲಿಸಬೇಕಾಗಿದೆ. ಈಗಾಗಲೇ ಕೆಲವರು 'ಹಿಂದಿ ಹೇರಿಕೆ'ಯ ಅಪಾಯಗಳನ್ನು, ಅದು ಉಳಿದ ಭಾಷೆಗಳಿಗಿಂತ ಪ್ರೌಢಿಮೆ ಗಳಿಸದ ಹಿನ್ನಲೆಯಲ್ಲಿ 'ರಾಷ್ಟ್ರವಿರೋಧಿ' ಯೆಂದು ಪರಿಗಣಿಸುವಷ್ಟರ ಮಟ್ಟಿಗೆ ಚಿಂತನೆಗಳು ನಡೆದಿವೆ. ಹಿಂದೀಭಾಷೆ ಮಾತನಾಡುವ ಜನರೂ, ಎಲ್ಲರಂತೆ ಭಾಷಾ ದುರಭಿಮಾನದಿಂದ ಹೊರತಾದವರೇನಲ್ಲ. ಅವರ ನಿರೀಕ್ಷೆಗಳು ಬಹಳ ಎತ್ತರಕ್ಕಿವೆ. ಆದುದರಿಂದ ಇಂಗ್ಲಿಷನ್ನು ಯಾವುದೇ ಕಾರಣಕ್ಕೂ ಶಿಕ್ಷಣ ಹಾಗೂ ಸಾರ್ವಜನಿಕ ಜೀವನದಲ್ಲಿ ಎರಡನೇ ದರ್ಜೆಗೆ ಇಳಿಸುವ ಪ್ರಯತ್ನದಿಂದ ದೇಶಕ್ಕೆ ಒಳಿತೇನೂ ಆಗದು. ಈ ಕಾರಣಗಳಿಂದ ನಾನು ಆಯೋಗದ ಇತರ ಸಹೋದ್ಯೋಗಿಗಳ ಅಭಿಪ್ರಾಯಗಳಿಗೆ ಭಿನ್ನವಾದ, ಅವರ ಶಿಫಾರಸ್ಸುಗಳು ಬಹುಮತಗಳಿಸಿದರೂ ನನ್ನ ನಿಶ್ಚಿತವಾದ ವಿರೋಧವನ್ನು ದಾಖಲಿಸಬಯಸುತ್ತೇನೆ".

ಆದ್ದರಿಂದ ಈ ವರದಿಯು ಮೂಲೆಗೆ ಹಾಕಲ್ಪಟ್ಟಿದ್ದು ಆಶ್ಚರ್ಯವೆನಿಸದು. ಆದರೆ ಎರಡನೇ ರಾಷ್ಟ್ರಭಾಷಾ ಆಯೋಗವು ೧೯೬೦ರಲ್ಲಿ ರಚಿಸಲ್ಪಡಬೇಕಾಗಿದ್ದಿತು, ನೇಮಕಗೊಳ್ಳಲೇ ಇಲ್ಲ.

* * * *

೨೭. ಡಾ. ಬಿ. ಆರ್. ಅಂಬೇಡ್ಕರ್

ಭಾರತ ಸಂವಿಧಾನದ ಮುಖ್ಯ ಶಿಲ್ಪಿ, ಕೇಂದ್ರದ ಕಾನೂನು ಸಚಿವರಾದ ಡಾ॥ ಬಿ. ಆರ್. ಅಂಬೇಡ್ಕರ್‌ರ ಅಭಿಪ್ರಾಯ ಗಮನ ಸೆಳೆಯುವಂತಹುದು. ೧೯೪೮ರ ಭಾಷಾ ಪ್ರಾಂತ್ಯ ರಚನೆ ಆಯೋಗಕ್ಕೆ ಅವರು ಸಲ್ಲಿಸಿದ ಮನವಿಯಲ್ಲಿ ತಿಳಿಸಿರುವಂತೆ, "ಭಾರತ ಸರ್ಕಾರದ ನಿರ್ಮಾಣವನ್ನು ದ್ವಿಮುಖ ನೀತಿಯಲ್ಲಿ ಮಾಡಬೇಕೆಂದಿರುವ ಪ್ರಸ್ತಾವನೆಯು, ಅಲ್ಪಕಾಲೀನ ಚಿಂತನೆಯಾಗಿ ಈ ಭಾಷಾವಾರು ಪ್ರಾಂತ್ಯಗಳ ರಚನೆಯ ವಿಚಾರವನ್ನು ಚರ್ಚಿಸುವಲ್ಲಿ ಕಂಡುಬರುತ್ತದೆ.

(ಅ) ಕೇಂದ್ರ ಸರ್ಕಾರವು ಮತ್ತು

(ಆ) ಅನೇಕ ಪ್ರಾಂತೀಯ ಸರ್ಕಾರಗಳು ಪರಸ್ಪರ ಹೊಂದಿಕೊಂಡಿರುವ, ಒಟ್ಟಿಗೆ ಹೆಣೆಯಲ್ಪಟ್ಟವುಗಳಾಗಿ ಆಯಾ ಶಾಸಕಾಂಗ, ಕಾರ್ಯಾಂಗ ಮತ್ತು ಆಡಳಿತ ಕೆಲಸಗಳನ್ನು ಮಾಡಬೇಕಾಗಿದೆ. ಭಾಷಾವಾರು ಪ್ರಾಂತೀಯ ರಚನೆಯನ್ನು ಒಪ್ಪಿಕೊಳ್ಳುವ ಮೊದಲು, ಕೇಂದ್ರ ಸರ್ಕಾರದ ಕಾರ್ಯಗಳ ಮೇಲೆ ಯಾವ ಭಾಷಾಪ್ರಾಂತ್ಯವು ಪರಿಣಾಮ ಬೀರುತ್ತದೆ ಎಂಬುದನ್ನು ಪರಿಶೀಲಿಸಬೇಕು. ಅಂತಹ ಅನೇಕ ಪರಿಣಾಮಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ.

(೧) ಭಾಷಾವಾರು ಪ್ರಾಂತ್ಯಗಳು ಅಲ್ಲಿನ ಜನಾಂಗ, ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಹೆಮ್ಮೆಪಡುವಷ್ಟು ಗುಂಪುಗಳು ಒಂದು ರಾಷ್ಟ್ರವನ್ನು ಅನೇಕ ರಾಷ್ಟ್ರಗಳನ್ನಾಗಿ ಮಾಡುವುದರಲ್ಲಿ ತೊಡಗುತ್ತವೆ. ಕೇಂದ್ರ ಶಾಸಕಾಂಗ ಅಥವಾ ಸಂಸತ್ತು ರಾಷ್ಟ್ರಗಳ ಸಂಘವೆಂದಾಗಿ ಕೇಂದ್ರ ಕಾರ್ಯಾಂಗ ಅಥವಾ ಸಂಪುಟವು ಪ್ರತ್ಯೇಕವಾದ, ಬಲಶಾಲಿ ರಾಷ್ಟ್ರಗಳ ಸಭೆಯಾಗಿ ಕಂಡುಬರುತ್ತದೆ. ಅವರ ಸಂಸ್ಕೃತಿ ಹಾಗೂ ಒಲವುಗಳೂ ಅದೇ ಬಗೆಯಲ್ಲಿ ಕಾಣಿಸಿಕೊಳ್ಳುತ್ತವೆ. ಅವರು, ರಾಜಕೀಯ ನಿರ್ಲಕ್ಷ್ಯತೆ ಅಂದರೆ ಉಳಿದ ಬಹುಸಂಖ್ಯಾತರನ್ನು ಗೌರವಿಸದೆ, ಸಭೆಗಳಿಂದ ಹೊರ ನಡೆಯುವುದನ್ನು ರೂಢಿ ಮಾಡಿಕೊಳ್ಳುವರು, ಇಂತಹುದನ್ನು ಪೂರ್ಣವಾಗಿ ಲೆಕ್ಕಕ್ಕಿಡದಂತಿರಲು ಸಾಧ್ಯವಿಲ್ಲ. ಇದು ಬೆಳೆದ ಹಾಗೆಲ್ಲ ಕೇಂದ್ರ ಸರ್ಕಾರದ ಕಾರ್ಯಗಳು ನಡೆಯುವುದೇ ಅಸಾಧ್ಯವೆನಿಸುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಅತ್ಯಗತ್ಯವಾದ ಆಡಳಿತಾತ್ಮಕ ಸಂಬಂಧಗಳನ್ನು ಕಾಪಾಡಿಕೊಂಡು ಬರಲು ಭಾಷಾವಾರು ಪ್ರಾಂತ್ಯ ರಚನೆಯಿಂದ ಅಡ್ಡಿಗಳುಂಟಾಗುತ್ತಿರುವುದು. ಆ ರಾಜ್ಯಗಳು ತಮ್ಮದೇ ರಾಜ್ಯದ ಭಾಷೆಯನ್ನು ಅಲ್ಲಿನ ಆಡಳಿತ ಭಾಷೆಯೆಂದು ನಿರ್ಧರಿಸಿದರೆ, ಕೇಂದ್ರ ಸರ್ಕಾರವು ಎಷ್ಟು ರಾಜ್ಯಗಳಿರುವುವೋ ಅಷ್ಟು ರಾಜ್ಯಭಾಷೆಗಳಲ್ಲಿ ವ್ಯವಹರಿಸಬೇಕಾದ ಅನಿವಾರ್ಯತೆಯುಂಟಾಗುವುದು. ಇದು ನಿಜಕ್ಕೂ ಅಸಾಧ್ಯದ ಕೆಲಸವೇ ಸರಿ. ಈ ಭಾಷಾಪ್ರಾಂತಗಳು ಸರ್ಕಾರದ ಆಡಳಿತಯಂತ್ರದಲ್ಲಿ ಹೇಗೆ ತಡೆಯನ್ನುಂಟು ಮಾಡುತ್ತವೆ ಎಂಬುದನ್ನು ನ್ಯಾಯಾಂಗದ ಮೇಲೆ ಆಗುತ್ತಿರುವ ಭಾಷಾ ಪ್ರಾಂತ್ಯಗಳ ಪರಿಣಾಮವನ್ನು ಗ್ರಹಿಸುವುದರಿಂದ ತಿಳಿದುಕೊಳ್ಳಲು ಸಾಧ್ಯ. ಇಂತಹ ಹೊಸ ವ್ಯವಸ್ಥೆಯಲ್ಲಿ ರಾಜ್ಯಕ್ಕೊಂದು ಹೈಕೋರ್ಟ್ ಹಾಗೂ ಅವುಗಳಿಗೆ ಸೇರಿದ ನೂರಾರು ಅಧೀನ ಕೋರ್ಟ್‌ಗಳು ಬೇಕಾಗುವುವು. ಇಷ್ಟು ಸಂಖ್ಯೆಯ ಹೈಕೋರ್ಟ್‌ಗಳ ಮೇಲೆ ಉನ್ನತವಾದ ಸುಪ್ರೀಂ ಕೋರ್ಟ್ ಇರಬೇಕಾಗಿ, ಹೈಕೋರ್ಟ್‌ಗಳ ತೀರ್ಪಿನ ವಿರುದ್ಧ ಅಸಂಖ್ಯ ಮೇಲ್ಮನವಿಗಳನ್ನು ಕೇಳಿಸಿಕೊಳ್ಳುವ ಹಕ್ಕು ಉಳ್ಳದ್ದಾಗಿರುತ್ತದೆ. ಭಾಷಾಪ್ರಾಂತ್ಯಗಳಿಂದಾಗಿ, ರಾಜ್ಯಗಳ ಪ್ರತಿಯೊಂದು ಕೋರ್ಟ್ ಹಾಗೂ ಹೈಕೋರ್ಟ್ ಆಯಾ ಭಾಷೆಗಳಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹೈಕೋರ್ಟ್‌ನ ತಪ್ಪು ತೀರ್ಪುಗಳನ್ನು ಸರಿಪಡಿಸುವುದೇ ಕೆಲಸವಾದರೆ, ಅದು ತನ್ನ ವ್ಯಾಪ್ತಿಯಲ್ಲಿ ಮಾಡುವುದಾದರೂ ಏನನ್ನು? ಸುಪ್ರೀಂ ಕೋರ್ಟ್ ಮುಚ್ಚಲ್ಪಡಬೇಕಾಗುವುದು. ಅದು ಕೆಲಸ ಮಾಡಬೇಕೆಂದರೆ, ಅದರ ನ್ಯಾಯಾಧೀಶರುಗಳು, ಇಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯವಾದಿಗಳನ್ನು ಸದ್ಯಕ್ಕೆ ಕೈಬಿಡುತ್ತೇನೆ, ಪ್ರತಿಯೊಂದು ಭಾಷಾ ಪ್ರಾಂತ್ಯದ ಭಾಷೆಯಲ್ಲಿ ವ್ಯವಹರಿಸುವ ಅಸಾಧ್ಯದ ಹೊಣೆ ಹೊರಬೇಕಾಗುವುದು.

ಅಂತಹ ಸನ್ನಿವೇಶವನ್ನು ಯಾರೊಬ್ಬರೂ ಒಂದೇ ಬಗೆಯಲ್ಲಿ ಯೋಚಿಸಲಾರರು. ಇದರಿಂದ ಭಾರತದ ಏಕತೆಗೆ ಭಂಗ ಬರುವುದು. ಭಾರತವು ಒಂದು ರಾಷ್ಟ್ರವೆನಿಸದೆ, ಯೂರೋಪ್‌ನಂತೆ ರಾಷ್ಟ್ರಗಳ ಖಂಡವಾಗಿ ಅರಾಜಕತೆ, ಅವ್ಯವಸ್ಥೆಗಳ ರಾಷ್ಟ್ರವಾಗುವುದು". ರಾಷ್ಟ್ರಭಾಷೆಯ ಬಗ್ಗೆ ಅವರ ಅಭಿಪ್ರಾಯ:

"ಭಾಷಾವಾರು ಪ್ರಾಂತ್ಯ ಸೂತ್ರವನ್ನು ಒಪ್ಪಿಕೊಳ್ಳುವುದರೊಂದಿಗೆ ಭಾರತದ ಏಕತೆಯು ಭಂಗಗೊಳ್ಳದಂತಹ ಷರತ್ತುಗಳು ಇರಬೇಕು. ಈ ಸಮಸ್ಯೆಗೆ ನನ್ನ ಪರಿಹಾರವೇನೆಂದರೆ, ರಾಜ್ಯಗಳ ಪುನರ್ವಿಂಗಡಣೆಯ ಬೇಡಿಕೆಯನ್ನು ಭಾಷೆಯ ಆಧಾರದ ಮೇಲೆ ಮಾಡುವ ಮೊದಲು, ಸಂವಿಧಾನದಲ್ಲಿ ರಾಷ್ಟ್ರಭಾಷೆಯನ್ನು ಕೇಂದ್ರ ಸರ್ಕಾರವು ಒಪ್ಪಿಕೊಂಡಿರುವುದನ್ನೇ ಪ್ರತಿಯೊಂದು ರಾಜ್ಯವೂ ತನ್ನ ರಾಜ್ಯದ ಅಧಿಕೃತ ಭಾಷೆಯೆಂದು ಒಪ್ಪಿಕೊಳ್ಳುವಂತಾಗಬೇಕು. ಈ ಒಪ್ಪಂದದ ರೀತ್ಯಾ ಮುಂದುವರೆಯುವಲ್ಲಿ ಮಾತ್ರ ಭಾಷಾವಾರು ಪ್ರಾಂತ್ಯಗಳ ರಚನೆಯ ಬೇಡಿಕೆಯನ್ನು

ನಾನು ಒಪ್ಪಿಕೊಳ್ಳುತ್ತೇನೆ."

ಯಾವೊಬ್ಬ ಹಿಂದಿ ರಾಷ್ಟ್ರಪ್ರೇಮಿಯೂ ಇಂಗ್ಲಿಷನ್ನು ಒಪ್ಪಿಕೊಳ್ಳನು, ಅಲ್ಲದೆ ಹಿಂದಿಯೇತರ ರಾಜ್ಯಗಳು ಹಿಂದಿಯನ್ನು ಅಧಿಕೃತ ಭಾಷೆಯೆಂದು ತಮ್ಮ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಭಾಷಾಸಮಸ್ಯೆ ಕೇಂದ್ರ ಹಾಗೂ ರಾಜ್ಯಗಳ ನಡುವೆ ಉಲ್ಬಣಗೊಳ್ಳುವುದಲ್ಲದೆ ರಾಷ್ಟ್ರೀಯ ಏಕತೆಯ ಮೇಲೂ ಅದು ಪರಿಣಾಮ ಬೀರುವುದರಿಂದ ಭಾಷಾವಾರು ಪ್ರಾಂತ್ಯಗಳು ರಚಿಸಲ್ಪಟ್ಟು ಅಲ್ಲಿ ಕೇವಲ ಒಂದೇ ಭಾಷೆಯ ಆಡಳಿತದಿಂದ ಸಮಸ್ಯೆಗಳಾವುವೂ ಪರಿಹಾರವಾಗುವುದಿಲ್ಲ.

* * * *

೨೮. ರಕ್ಷಣೆ ಮತ್ತು ಅಭಿವೃದ್ಧಿ

ಮುಂದಿನ ಒಂದೆರಡು ದಶಕಗಳು ಭಾರತದ ರಕ್ಷಣೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಬಹಳ ಕ್ಲಿಷ್ಟಕರವಾದುವಾಗಿರುವುವು. ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ನಾವು ಯಶಸ್ಸನ್ನು ಗಳಿಸುವ ನಿರೀಕ್ಷೆಯಿದ್ದಿತು. ಆದರೆ ನಮ್ಮ ಇಲ್ಲಿಯವರೆಗಿನ ಕಾರ್ಯವೈಖರಿ, ಅದರಲ್ಲೂ ೧೯೬೫–೬೬ರಲ್ಲಿ ಬಹಳಷ್ಟು ಬಾಕಿ ಉಳಿಸಿತು. ನಾವು ನಮ್ಮ ಶಕ್ತಿಯನ್ನು ಅಲ್ಪವಿಚಾರಗಳೆಡೆ ಹರಿಸಿ, ದಾರಿದ್ರ್ಯ ನಿವಾರಣೆಯತ್ತ ಗಮನಹರಿಸಲಾಗಲೇ ಇಲ್ಲ. ಜನರೂ ಕೂಡ ಸಾಮಾನ್ಯವಾಗಿ ಆಲಸಿಗಳಂತೆ ಇದ್ದು ಭಾಷಾ ಸಂಬಂಧಿತ ಬೇಡಿಕೆಗಳ ಬಗ್ಗೆ ಮಾತ್ರ ಕೆಲವು ನಗರಗಳಲ್ಲಿ ಘೋಷಣೆಗಳು, ಚಿಹ್ನೆ ಹಾಗೂ ಛಾಯೆಗಳಿಂದಲೇ ಹೆಚ್ಚು ಸಂತುಷ್ಟರಾದಂತೆ ಜಯಂತಿ, ದಿನಾಚರಣೆಗಳನ್ನು ಏರ್ಪಡಿಸುತ್ತ, ಮುಖ್ಯವಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಬೇಕಿದ್ದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಅಥವಾ ಸಮಾಜವಾದಗಳ ತಿರುಳನ್ನು ಅರಿಯುವಲ್ಲಿ, ಅನುಭವಿಸುವಲ್ಲಿ ತೊಡಗಿಸಿಕೊಳ್ಳಲಿಲ್ಲ. ಕೆಲವು ಮಂದಿಯನ್ನು ಸದಾಕಾಲ ಮೋಸಮಾಡಬಹುದು, ಎಲ್ಲಾ ಜನರಿಗೂ ಕೆಲವು ವೇಳೆ ಮೋಸಮಾಡಲೂಬಹುದು. ಆದರೆ ಎಲ್ಲಾ ಜನರನ್ನು ಸದಾ ಕಾಲ ಮೂರ್ಖರನ್ನಾಗಿಸುವುದು ಅಸಾಧ್ಯ. ಭಾರತವು ಏಷ್ಯಾದಲ್ಲೇ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಜಗತ್ತಿಗೇ ಸಾರಿದ ರಾಷ್ಟ್ರ. ಅಂತೆಯೇ ಆಫ್ರಿಕ ಕೂಡ. ಪ್ರಜಾಪ್ರಭುತ್ವವು ನಮ್ಮ ಸುತ್ತಮುತ್ತಲ ಕಾರ್ಯಗಳಲ್ಲಿ ಅದುಮಿಟ್ಟುಕೊಂಡಂತೆ ಮತ್ತು ಹೊಸದಾಗಿ ಗಳಿಸಿದ ಸ್ವಾತಂತ್ರ್ಯವಿನ್ನೂ ದೃಢಗೊಳ್ಳಬೇಕಿರುವಲ್ಲಿ, ನಾವು ವಯಸ್ಕ ಮತದಾನದ ಮೂಲಕ, ಸಾಕಷ್ಟು ಯಶಸ್ಸನ್ನು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯಲ್ಲಿ, ನಮ್ಮ ದಿಟ್ಟ ಪ್ರಯೋಜನಗಳಿಂದ ಗಳಿಸಿದ್ದೇವೆ ಎಂದು ಹೆಮ್ಮೆಪಡುವಂತಿದೆ. ನಮ್ಮ ಸಾಮಾಜಿಕ – ಆರ್ಥಿಕ ಗುರಿಗಳನ್ನು ತಲುಪಲು, ಪ್ರಜಾಪ್ರಭುತ್ವ ಸಾಧನದಿಂದ, ಮಧ್ಯಮ ಮಾರ್ಗದ ತಂತ್ರದಿಂದ ಅಲ್ಪಸ್ವಲ್ಪ ಕೊರತೆಗಳಿದ್ದರೂ ಕಾಲದ ಪರೀಕ್ಷೆಯಲ್ಲಿ ವಿಜಯಿಗಳಾಗಿದ್ದೇವೆ. ಆದರೆ ದೇಶದ ಆಂತರಿಕ ದಾರಿದ್ರ್ಯದ ವಿರುದ್ಧದ ನಮ್ಮ ಯುದ್ಧದಲ್ಲಿ ವಿಭಜಕ ಪ್ರವೃತ್ತಿಯು ದೇಶದ ಒಳಗೂ ಮತ್ತು ಚೀನಾ–ಪಾಕಿಸ್ತಾನಿ ಮಿಲಿಟರಿ ಸಹಯೋಗದಿಂದ ನಮ್ಮ ದೇಶದ ಉತ್ತರ ಗಡಿಯಲ್ಲಿ, ದೇಶದ ಹೊರಗೂ, ನಾವು ಹಿಮ್ಮೆಟ್ಟುವಂತಾಗಿದೆ. ರಕ್ಷಣೆ ಮತ್ತು ಅಭಿವೃದ್ಧಿ ಒಂದಕ್ಕೊಂದು ಜೊತೆಯಾಗಿ

ಸಾಗುವಂತಹವು. ರಕ್ಷಣೆಯ ವಿಚಾರದಲ್ಲಿ ನಾವು ಆರ್ಥಿಕವಾಗಿ ಬಲಶಾಲಿಗಳಾಗಿರಬೇಕಾದುದು ಅತ್ಯಾವಶ್ಯಕ. ಆದುದರಿಂದ ನಮ್ಮೆಲ್ಲ ಸಂಪನ್ಮೂಲಗಳೂ –ಮಾನವ ಸಂಪನ್ಮೂಲ ಹಾಗೂ ಯಂತ್ರೋಪಕರಣ, ಯುದ್ಧಸಾಮಗ್ರಿ ಮುಂತಾದವು ಪೂರ್ಣವಾಗಿ ಅವುಗಳ ಸಾಮರ್ಥ್ಯದಷ್ಟು ಬಳಸಿಕೊಳ್ಳಬೇಕಾದುದು ಮತ್ತು ದಾರಿದ್ರ್ಯ, ರೋಗಗಳು, ಅಜ್ಞಾನಗಳ ವಿರುದ್ಧ ಹೋರಾಡುವುದೂ ಪ್ರಮುಖ ಅಂಶಗಳು. ಪಾಕಿಸ್ತಾನ ಮತ್ತು ಚೀನಾ ದಾಳಿಯ ಹೊತ್ತನ್ನು ಎಣಿಸುತ್ತಿವೆ. ನಾವು ಅವರಿಗೆ ಶುಭಕೋರೋಣ. ಆದರೆ ಎಂತಹ ಸಂಕಷ್ಟಕ್ಕೂ ಸಿದ್ಧರಾಗಿರುವುದನ್ನು ಗಮನದಲ್ಲಿರಿಸಿಕೊಂಡು ಒಳ್ಳೆಯದೇ ಆಗುವ ನಂಬಿಕೆಯನ್ನು ಹೊಂದಿರುವುದು ಜಾಣತನವೆನಿಸುತ್ತದೆ. ನಮ್ಮ ಅದೃಷ್ಟವೆಂದರೆ ಜಗತ್ತಿನ ಬಹುತೇಕ ರಾಷ್ಟ್ರಗಳು ನಮ್ಮೊಡನೆ ವಿಶ್ವಾಸದಿಂದಿವೆ. ಕೇವಲ ಪಾಕಿಸ್ತಾನ ಮತ್ತು ಚೀನಾಗಳಿನ್ನೂ ಶತ್ರುತ್ವವಿರಿಸಿಕೊಂಡಿವೆ. ಇಂಡೊನೇಷಿಯಾ ಮರ್ಡೆಕ ಗಾಗಿ ಸಾರಿದ ಸಮರಕ್ಕೆ ಭಾರತ ನಿರಂತರ ಬೆಂಬಲ ಸೂಚಿಸಿದೆ. ಒಂದು ಕಾಲದಲ್ಲಿ ಭಾರತದೊಂದಿಗಿನ ಮಿತ್ರರಾಗಿದ್ದ ಡಾ॥ ಸುಕರ್ಣೋ ನಮ್ಮ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರುರವರನ್ನು ಶತ್ರುವೆಂದು ಭಾವಿಸಿದ್ದಾರೆ. ದೈವವಶಾತ್, ಅಲ್ಲಿ ಬಿರುಗಾಳಿ ಬೀಸಿದಂತೆ, ಕಮ್ಯೂನಿಸ್ಟ್ ಚೀನಾ ಅಲ್ಲಿನ ಸಮರದಲ್ಲಿ ಪಾಠ ಕಲಿತಿದೆ. ೧೯೬೨ ಮತ್ತು ೧೯೬೫ ಮತ್ತೆ ಭಾರತದ ಪಾಲಿಗೆ ದುರ್ಭರ ವರ್ಷಗಳು. ೧೯೬೨ರ ಯುದ್ಧದಲ್ಲಿ ಚೀನಾದೊಂದಿಗಿನ ಯುದ್ಧದಲ್ಲಿ ನಾವು ಕಳೆದುಕೊಂಡಿದ್ದ ಪ್ರತಿಷ್ಠೆಯು ಈಗ ಪಾಕಿಸ್ತಾನಿ ದುರಾಕ್ರಮಣ ಹಾಗೂ ದೇಶದೊಳಗೆ ನುಸುಳುವುದು ಈ ಯುದ್ಧದಲ್ಲಿ ಅವರಿಗೆ ಬಿಸಿಮುಟ್ಟಿಸಿದೆ. ಪ್ರತಿಯೊಬ್ಬ ಭಾರತೀಯನೂ ಜಾತಿ, ಮತ, ಪ್ರದೇಶ, ರಾಜಕೀಯ ಒಲವುಗಳು ಯಾವುನ್ನೂ ಲೆಕ್ಕಕ್ಕೆ ಇಡದೆ ಒಂದು ರಾಷ್ಟ್ರದ ಒಬ್ಬ ವ್ಯಕ್ತಿಯಂತೆ ನಿಂತು ಎದುರಿಸಿ ಯಶಸ್ಸಿನ ಕೀರ್ತಿಯನ್ನು ಹಂಚಿಕೊಂಡರೆ ಎಡ ಪಂಥದ ಕಮ್ಯುನಿಸ್ಟ್‌ರು ಮಾತ್ರ ದೂರವಿದ್ದರು. ಇದೇ ರೀತಿಯ ರಾಷ್ಟ್ರೀಯತೆಯನ್ನು ದೇಶದ ಅಭಿವೃದ್ಧಿ ಕೆಲಸಗಳಲ್ಲಿಯೂ ಬೆಳೆಸಿಕೊಂಡರೆ, ತಮ್ಮೆಲ್ಲ ಸಣ್ಣಪುಟ್ಟ ವಿಚಾರಗಳನ್ನು ಮರೆತು ಮುಂದಿನ ೧೫ ರಿಂದ ೩೦ ವರ್ಷಗಳಲ್ಲಿ ನಾವು ಏಷಿಯಾದಲ್ಲೇ ಬಲಿಷ್ಠ ರಾಷ್ಟ್ರವೆನಿಸಿಕೊಳ್ಳಲು ಸಾಧ್ಯ. ಹಾಗಾದಲ್ಲಿ ನಮ್ಮನ್ನು ಕೆಣಕಲು, ಮುಟ್ಟಲು ಹೊರಗಿನವರು ಅನೇಕ ಬಾರಿ ಯೋಚಿಸಬೇಕಾಗುವುದು. ಅಲ್ಪ ಸ್ವಲ್ಪದ ಕೊರತೆಗಳನ್ನು ನಮ್ಮ ಮುಂದಿನ ಪೀಳಿಗೆಯು ಸರಿದೂಗಿಸಬಲ್ಲುದು. ನಾವು ಸದಾಕಾಲ ವಿಶ್ವ ಶಾಂತಿಯನ್ನು ಜಪಿಸಿದರೂ, ಆಂತರಿಕವಾಗಿ ಬಲಿಷ್ಠರಾಗಲೇ ಬೇಕಾದುದು ಅನಿವಾರ್ಯ. ನಾವಿಂದು ಬಡದೇಶದವರು. ನಮ್ಮ ರಾಷ್ಟ್ರೀಯ ಆದಾಯ ೧೯೪೮–೪೯ ರಲ್ಲಿ ರೂ. ೮,೬೫೦ ಕೋಟಿಯಿದ್ದುದು, ೧೯೬೩–೬೪ ರಲ್ಲಿ ರೂ. ೧೭,೨೦೦ ಕೋಟಿಗೆ ಏರಿತು. ಆದರೆ ವಾಸ್ತವವಾಗಿ ಸ್ಥಿರ ಬೆಲೆ

ಮಟ್ಟದ ಪ್ರಕಾರ ರೂ. ೧೩,೯೧೦ ಕೋಟಿ ಮಾತ್ರ. ವ್ಯಕ್ತಿಯ ಆದಾಯ ೧೯೪೮–೪೯ರಲ್ಲಿ ಸರಾಸರಿ ರೂ. ೨೫೦/– ಇದ್ದುದು, ನಿಜದ ಅರ್ಥದಲ್ಲಿ ೧೯೬೩–೬೪ರಲ್ಲಿ ಕೇವಲ ೩೦೦/– ಮಾತ್ರ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ವಾಸ್ತವ ಆದಾಯವು ರೂ. ೨,೨೫೦ ಕೋಟಿ ಆಯಿತು. ಆರ್ಥಿಕ ಲೆಕ್ಕಗಳಂತೆ ಅದು ರೂ. ೪,೧೬೦ ಕೋಟಿ, ಅಂದರೆ ಶೇ. ೨೨ ಹಾಗೂ ಶೇ. ೪೨ ರಷ್ಟು ಹೆಚ್ಚಳ. ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ವಾಸ್ತವ ಆದಾಯ ರೂ. ೨,೩೨೦ ಕೋಟಿಗಳು, ಆರ್ಥಿಕವಾಗಿ ರೂ. ೫,೮೭೦ ಕೋಟಿಗಳಾಗಿದ್ದು, ಶೇ. ೧೮ ಮತ್ತು ಶೇ. ೪೨ ಹೆಚ್ಚಳ ಸಾಧ್ಯವಾಯಿತು. ಇವು ಕೇವಲ ದಾರಿದ್ರ್ಯದ ಚಿತ್ರಣವೇ ಹೊರತು ಸಾಧನೆಯ ಹೆಮ್ಮೆಯ ವಿಚಾರವಲ್ಲ. ಆದುದರಿಂದ ನಮ್ಮೆಲ್ಲ ಸಂಪನ್ಮೂಲಗಳು, ಶಕ್ತಿಗಳು, ಸ್ವಾತಂತ್ರ್ಯದ ನಿಜವಾದ ಅರ್ಥದಲ್ಲಿ ಬೇಕುಗಳ ಸ್ವಾತಂತ್ರ್ಯದತ್ತ ಹೆಚ್ಚಿನ ಶ್ರಮವಹಿಸಬೇಕಿವೆ. ಆಗಷ್ಟೇ ನಾವು ನಮ್ಮ ಶಕ್ತಿ ಪೌರುಷದ ಬಗ್ಗೆ ಮಾತನಾಡಲು ಅರ್ಹರಾಗುತ್ತೇವೆ. ಇಷ್ಟರಲ್ಲೇ ಅಕಾಲಿಕ ರೂಪಾಯಿ ಅಪಮೌಲ್ಯದಿಂದ ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುನ್ನ ಮತ್ತು ಅನಂತರ ಏನಾಗಬಹುದೋ ಎನ್ನುವುದು ಪ್ರತಿಯೊಬ್ಬರ ಶಂಕೆಯಾಗಿದೆ.

* * * *

೨೯. ಮಧ್ಯಮ ಮಾರ್ಗ

ಒಟ್ಟಿನಲ್ಲಿ ನಮ್ಮ ರಾಷ್ಟ್ರೀಯ ಸೂತ್ರಗಳು ಹೆಚ್ಚು ಸೂಕ್ತವೂ ಹಾಗೂ ದೃಢವಾದುವೂ ಆಗಿವೆ. ಅವುಗಳ ಕಾರ್ಯಯೋಜನೆಯಲ್ಲಿ ಅಲ್ಪಸ್ವಲ್ಪ ತಪ್ಪು–ಒಪ್ಪುಗಳು ಇದ್ದೇ ಇರಲು ಸಾಧ್ಯ. ನಮ್ಮ ಪ್ರಧಾನಿ ನೆಹರುರವರ ಉತ್ತಮ ನಾಯಕತ್ವದಲ್ಲಿ ನಾವು ಮಧ್ಯಮ ಮಾರ್ಗವೊಂದನ್ನು ಎಲ್ಲ ರಾಷ್ಟ್ರೀಯ ಜೀವನದಲ್ಲಿ ಹುಡುಕಿಕೊಳ್ಳಲು "ಏಷಿಯಾದ ಬೆಳಕು" ಭಗವಾನ್ ಬುದ್ಧನ ಉಪದೇಶಸಾರದನ್ವಯ ಸಾಧ್ಯವಾಗಿದೆ. ನಾವು ಮಿಶ್ರ ಆರ್ಥಿಕ ವ್ಯವಸ್ಥೆ ಹಾಗೂ ಸಮಾಜವಾದದ ಮೂಲಕ, ಸಾಮಾಜಿಕ ನ್ಯಾಯದ ಗುರಿ ಸಾಧಿಸಲು ಕೈಗೊಂಡಿದ್ದೇವೆ. ಭಾರತವು ಬೆರಕೆಗೊಳ್ಳದ ಪ್ರಜಾಪ್ರಭುತ್ವ ಹಾಗೂ ತೀವ್ರ ಸಮಾಜವಾದಗಳ ಮಧ್ಯದಲ್ಲಿ ಕ್ರಮಿಸುತ್ತಿದೆ. ಸರ್ವಸಮ್ಮತ ಭಾಷೆಯ ವಿಚಾರದಲ್ಲಿಯೂ ಅದೇ ಮಾರ್ಗ ಅನುಸರಿಸುತ್ತಿದ್ದೇವೆ. ಸಂವಿಧಾನರೀತ್ಯಾ ಹಿಂದಿ ಅಧಿಕೃತ ರಾಷ್ಟ್ರಭಾಷೆಯಾದರೂ ಇಂಗ್ಲಿಷನ್ನು ಅದೇ ಮಟ್ಟದಲ್ಲಿ ಸಹಭಾಷೆಯನ್ನಾಗಿರಿಸಿದ್ದೇವೆ. ಇದಕ್ಕೆ ಪ್ರಾಮುಖ್ಯ ನೀಡಿದ ಪ್ರಧಾನಿ ನೆಹರುರವರು ತಮ್ಮ ೧೯೬೧ರ ಆಗಸ್ಟ್‌ನ ರಾಷ್ಟ್ರೀಯ ಏಕತಾ ಸಮ್ಮೇಲನದ ಸಂದರ್ಭದಲ್ಲಿ ಸಂವಿಧಾನದ ವಿಧಿ ೨೯, ೩೦, ೩೫೦ಎ ಮತ್ತು ೩೫೦ಬಿ ಗಳನ್ನು ಉದಾಹರಿಸುವ ಮೂಲಕ ಮಾರ್ಗದರ್ಶನ ನೀಡಿರುವರು. ಭಾರತ ಸರ್ಕಾರದ ೧೯೫೬ರ ಸೆಪ್ಟೆಂಬರ್ ೪ರ ಮನವಿಪತ್ರದ ಸಾರಾಂಶವನ್ನು ಉದಾಹರಿಸಿದರು. ಅದು ಎಸ್.ಆರ್.ಸಿ. ಶಿಫಾರಸ್ಸು ನಂತರ ಸಿದ್ಧಪಡಿಸಿದ ನೀತಿಯಾಗಿದ್ದು, ಭಾಷಾ ಅಲ್ಪಸಂಖ್ಯಾತರ ರಕ್ಷಣೆಯ ವಿಚಾರವನ್ನೊಳಗೊಂಡಿದ್ದಿತು. ಈ ರೀತಿಯ ಎಲ್ಲ ಜಾಗರೂಕ ಅಂಶಗಳಿದ್ದು ಸ್ಥಳೀಯ ರಾಜಕಾರಣಿಗಳ ಮನಸೋಇಚ್ಛೆಯ ಕಾರ್ಯವೈಖರಿಯಿಂದಾಗಿ ಅತೃಪ್ತಿ ಹಾಗೂ ಅಸಮಾಧಾನದ ಹೊಗೆ ಕಂಡಿದ್ದು ವಿಷಾದಕರ. ೧೯೬೬ ಜುಲೈನಲ್ಲಿ ಬೊಂಬಾಯಿ ಮುನಿಸಿಪಲ್ ಕಾರ್ಪೊರೇಷನ್‌ನ ಒಬ್ಬ ಜವಾಬ್ದಾರಿ ಸದಸ್ಯ, ಬೊಂಬಾಯಿಯ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವಾಗಿ ಮಹಾರಾಷ್ಟ್ರೀಯರಲ್ಲದ ಜನರು ಬೊಂಬಾಯಿ ತೊರೆಯುವ ಕರೆ ನೀಡಿದರು. ಯಾರು ಮಹಾರಾಷ್ಟ್ರೀಯರಲ್ಲದವರು? ಬೊಂಬಾಯಿ ಮತ್ತು ಮಹಾರಾಷ್ಟ್ರದಲ್ಲಿ ನೆಲೆಯೂರಿದವರು ತಮ್ಮ ಮಾತೃಭಾಷೆಯಲ್ಲದೆ ಇದ್ದರೂ, ತಾವು ಮಾತನಾಡುವ ಭಾಷೆ ಬೇರೆಯೇ ಇದ್ದರೂ, ಮಹಾರಾಷ್ಟ್ರದ ಬಗ್ಗೆ ಹೆಚ್ಚಿನ ಶ್ರದ್ಧೆ,

ವಿಶ್ವಾಸಗಳನ್ನಿಟ್ಟುಕೊಂಡವರು ಖಂಡಿತವಾಗಿಯೂ ಮಹಾರಾಷ್ಟ್ರದವರೇ. ನಾವು ಮರೆಯಬಾರದ ವಿಷಯವೆಂದರೆ ಪ್ರತಿಯೊಬ್ಬ ಭಾರತೀಯನಿಗೂ ಒಂದೇ ಆದ ಪೌರತ್ವವಿದೆ. ಪ್ರತಿಯೊಬ್ಬ ಭಾರತೀಯನೂ ದೇಶದ ಯಾವುದೇ ಭಾಗದಲ್ಲಿ ನೆಲೆಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ, ಕಾಶ್ಮೀರದಲ್ಲಿ ಮಾತ್ರ ಹೊರತುಪಡಿಸಿ. ಅನೇಕ ರಾಜ್ಯಗಳಲ್ಲಿ ಭಾಷಾ ಅಸಹನೆ ಅತಿಯಾಗಿ ಹೆಚ್ಚುತ್ತಿರುವುದು ದುಃಖದ ಸಂಗತಿ. ಮುಂದೆ ಕೆಲವು ವರ್ಷಗಳ ನಂತರ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಾಸ್ತವ್ಯಕ್ಕೆ ಹೋಗುವುದು ಅಸಾಧ್ಯದ ಮಾತಾಗಬಹುದು. ಅಂತೆಯೇ ನೋವಿನ ವಿಷಯವೂ. ಆದಕಾರಣ ರಾಜ್ಯಗಳ ಪುನರ್ವಿಂಗಡಣೆಯ ಕಲೆಯಲ್ಲಿಯೂ ಮಧ್ಯಮ ಮಾರ್ಗವೊಂದನ್ನೇಕೆ ಹುಡುಕಿಕೊಳ್ಳಬಾರದು? ಅದರಿಂದ ರಾಜ್ಯಗಳ ವಿಭಜನೆಯ ಬದಲು ರಾಜ್ಯಗಳ ವೈಶಾಲ್ಯೀಕರಣದಂತಹ ಮುಖ್ಯ ಹೆಜ್ಜೆಯಿಟ್ಟಂತಾಗುವುದು. ಇದರಿಂದ ಭಾರತವನ್ನು ಶಕ್ತಿಶಾಲಿ ರಾಷ್ಟ್ರವನ್ನಾಗಿಯೂ, ಕೇಂದ್ರ ಸರ್ಕಾರವನ್ನು ಬಲಪಡಿಸಿದಂತೆಯೂ ಆಗುವುದಿಲ್ಲವೇ ?

* * * *

೩೦. ಭಾವನಾತ್ಮಕ ಪ್ರಭಾವಕ್ಕೊಳಗಾಗದ ವಸ್ತುಸ್ಥಿತಿ ಅಧ್ಯಯನ

ಈ ಭಾವನಾತ್ಮಕ ಪ್ರಭಾವಕ್ಕೊಳಗಾಗದ ಮತ್ತು ವಸ್ತು ಸ್ಥಿತಿ ಅಧ್ಯಯನದ ಮುಖ್ಯ ಉದ್ದೇಶವೇನೆಂದರೆ ಬಹಳ ನೋವಿನ ವಿಚಾರವಾದ ಭಾಷಾಧಾರಿತ ವಿಭಜನೆಗಳಿಗೊಂದು ಅಳುವಿನ ಕೊನೆ ನೀಡಿ, ಭಾರತದ ಘನತೆಯು ಮುಕ್ಕಾಗಲು ಬಿಡದಂತೆ ಎಚ್ಚರ ವಹಿಸುವುದು. ವಿಶ್ವರಾಷ್ಟ್ರಗಳಲ್ಲಿ ಭಾರತದ ಉನ್ನತವಾದ ಸ್ಥಾನವನ್ನು ಇಂತಹ ಸ್ವಾರ್ಥ ರಾಜಕಾರಣ ಶಕ್ತಿಗಳು ಮಣ್ಣುಮಾಡಲು ಶತಾಯಗತಾಯ ಅವಕಾಶ ನೀಡಬಾರದೆಂಬುದೇ ಈ ಪ್ರಸ್ತಾಪದ ಉದ್ದೇಶ. ಭಾಷಾಧಾರಿತ ರಾಜ್ಯಗಳ ಪುನರ್ವಿಗಂಡಣೆಯು ಈಗಾಗಲೇ ಮಾಡಿರುವ ಕೆಡಕು ಹಾಗೂ ನಷ್ಟಗಳನ್ನು ಸರಿಪಡಿಸುವ ದಿಕ್ಕಿನಲ್ಲಿ ನಾವೀಗ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ. ಆದರೆ ಮುಂದಾಗುವ ಅನಾಹುತವನ್ನಾದರೂ ಇನ್ನು ನಿಲ್ಲಿಸಬೇಕಿದೆ. ಮುಂದೆ ಸಾರ್ವಜನಿಕ ಸೇವೆ ಅಥವಾ ಖಾಸಗಿ ಸೇವೆಗೆ ಆಯ್ಕೆಮಾಡುವಾಗ ಭಾಷೆಯ ಆಧಾರದ ಮೇಲೆ ಆಯ್ಕೆಯಾಗದಂತೆ, ಜಾತಿ ಆಧಾರದ ಮೇಲೆ ಆಯ್ಕೆಯಾಗದಂತೆ ಪ್ರದೇಶದ ಆಧಾರದ ಮೇಲೆ ಆಯ್ಕೆಯಾಗದಂತೆ ಎಚ್ಚರವಹಿಸಬೇಕಿದೆ. ಇಂಗ್ಲಿಷ್ ಅಥವಾ ಹಿಂದಿ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಉತ್ತಮವಾಗಿ ವ್ಯವಹಿರಿಸಬಲ್ಲ ಅರ್ಹರನ್ನಷ್ಟೇ ಆಯ್ಕೆ ಮಾಡುವುದು ಅತ್ಯಗತ್ಯ.

ಸಲಹೆಗಳು

ಮೇಲೆ ತಿಳಿಸಿದಂತೆ

(೧) ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳು ಅಧಿಕೃತ ಭಾಷೆಗಳಾಗಿ ಘೋಷಿಸಲ್ಪಡಬೇಕು. ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೂ ಅನ್ವಯಿಸುವುದು. ಜನರು ತಮಗೆ ಇಷ್ಟವಾದ ಭಾಷೆಯಲ್ಲಿ ವ್ಯವಹರಿಸಲು ಸ್ವಾತಂತ್ರ್ಯವಿರಬೇಕು.

(೨) ಇನ್ನು ಮುಂದೆ ಯಾವುದೇ ರಾಜ್ಯದ ವಿಭಜನೆಯನ್ನು ಮಾಡಲು, ಅಂಗೀಕರಿಸಲು ಸಾಧ್ಯವಿರಬಾರದು. ೧೯೭೬ರ ವರೆಗೆ ಇದ್ದ ರಾಜ್ಯ ಗಡಿಗಳನ್ನು ಹಾಗೆಯೇ ಇರಿಸಿಕೊಂಡಿರತಕ್ಕದ್ದು.

(೩) ಸಣ್ಣ ರಾಜ್ಯಗಳನ್ನು ನೆರೆಯ ದೊಡ್ಡ ರಾಜ್ಯಗಳೊಂದಿಗೆ ವಿಲೀನಗೊಳಿಸುವುದನ್ನು ಮಂದಗತಿಯಲ್ಲಿ ಕೈಗೊಳ್ಳಬೇಕು.

(೪) ದೇಶದ ರಕ್ಷಣೆ ಹಾಗೂ ಅಭಿವೃದ್ಧಿ ವಿಚಾರ ಮತ್ತು ಕೇಂದ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಅಗತ್ಯವೆನಿಸಿದರೆ ಸಂವಿಧಾನ ತಿದ್ದುಪಡಿ ತರುವುದು.

(೫) ೧೯೭೫ರಿಂದ ರಾಜ್ಯಗಳ ವಿಲೀನ ಕಾರ್ಯವು ದ್ವಿಭಾಷಾ ನೀತಿಯಂತೆ ದ್ವಿಭಾಷಾ ಪ್ರದೇಶಗಳ ನಿರ್ಮಾಣದತ್ತ ಕಾರ್ಯಪ್ರವೃತ್ತವಾಗಬೇಕು. ಅದಕ್ಕೆ ಅಗತ್ಯವಾದ ಅಧ್ಯಯನವನ್ನು ಕೈಗೊಳ್ಳಬೇಕು.

ಸುಳಿಯೊಂದಿಗೆ ಈಜುವ ಬದಲಿಗೆ, ಪ್ರಸಕ್ತ ರಾಜಕೀಯ ನಾಯಕತ್ವವು ಬದಲಾವಣೆಯತ್ತ ತಮ್ಮ ನಿಲುವನ್ನು ಬದಲಾಯಿಸಿಕೊಳ್ಳುವುದು ಒಳ್ಳೆಯದು. ಅದಕ್ಕಾಗಿ ತಮ್ಮ ಸ್ವಪ್ರತಿಷ್ಠೆಗಳನ್ನು ಬದಿಗಿಟ್ಟು, ಮಾನವ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಬೇಕು. ಪ್ರಸ್ತುತವಿರುವ ರಾಜ್ಯಗಳ ಗಡಿಗಳನ್ನು ಹಾಗೆಯೇ ಬಿಡಲು, ನಮ್ಮ ನಾಯಕರುಗಳು ತಟಸ್ಥರಾಗಿರುವುದು ಅಷ್ಟು ಕಷ್ಟವೇ? ನಾಯಕರುಗಳು ಸಂದರ್ಭಕ್ಕೆ ಎದ್ದು ನಿಂತು, ಮತ್ತೆ ಛಿದ್ರತೆಯಾಗುವುದನ್ನು ತಪ್ಪಿಸಲು ಸೋತರೆ ಮುಂದಿನ ಪೀಳಿಗೆಯ ಜನರು, ಖಲೀಲ್ ಜಿಬ್ರಾನ್‌ನ ಸುವರ್ಣಾಕ್ಷರದ ಮಾತುಗಳಲ್ಲಿ "ಯಾವ ದೇಶದ ಸಾಧು ಸಂತರು ವರ್ಷಗಟ್ಟಲೆ ಮೂಕರಾಗಿರುತ್ತಾರೋ ಮತ್ತು ಯಾವ ದೇಶದ ಬಲಿಷ್ಠರು ಇನ್ನೂ ತೊಟ್ಟಿಲುಗಳಲ್ಲೇ ಮಲಗಿರುತ್ತಾರೋ, ದುಃಖದ ಸಂಗತಿಯೆಂದರೆ ಆ ದೇಶವು ಸಣ್ಣ ಸಣ್ಣ ಚೂರುಗಳಾಗಿ ವಿಭಜಿಸಲ್ಪಟ್ಟು ಪ್ರತಿಯೊಂದು ಚೂರು ತಾನೇ ರಾಷ್ಟ್ರವೆಂದು ಬೀಗುವುದು".

* * * *